ತ್ತು ಕತೆಗಳು

ಸಿಂ. ಎಲ್. ಆರ್. ಹೆಗಡೆ



ಒಗಟುಗಳು ಮತ್ತು ಕಥೆಗಳು

ಸಂಪಾದಕರು :

ಡಾ॥ ಎಲ್. ಆರ್. ಹೆಗಡೆ

ಜ್ಞಾನ ಸಾಧನ ಗ್ರಂಥ ಮಾಲೆ

ಸಿದ್ದಾಪುರ (ಉ. ಕ.)

OGATUGALU MATTU KATHEGALU
Edited by Dr. L. R. Hegde, Publ. : Jnanasadhana
Granthmala, Siddapur-581355 (N. K.)

ಬೆಲೆ : ರೂ. 18—00

ಮುಖಪುಟ ಚಿತ್ರಕಾರ :
ಶ್ರೀ ಕೆ. ಬಿ. ಕುಲಕರ್ಣಿ; ಹುಬ್ಬಳ್ಳಿ

ಮುದ್ರಣ :
ಶ್ರೀ ಗಜಾನನ ಮುದ್ರಣಾಲಯ, ಕುಮಟಾ (ಉ. ಕ.)

ಅನುಕ್ರಮಣಿಕೆ

ಒಗಟುಗಳು ಮತ್ತು ಕಥೆಗಳು

ಪೀಠಿಕೆ

ಒಗಟುಗಳು ರಹಸ್ಯಾರ್ಥವನ್ನು ಅಡಗಿಸಿಕೊಂಡು ತೋರಿಕೆಯಲ್ಲಿ ಬೇರೆಯೇ ವಿಷಯವನ್ನು ತಿಳಿಸುವಂತಿರುವ ಸಮಸ್ಯಾತ್ಮಕರೂಪ ಒಳಗೊಂಡ ಸಾಮಾನ್ಯವಾಗಿ ಮಾತಿನ ರೂಪವನ್ನು ಧರಿಸಿದ ಶಬ್ದ ಚಿತ್ರಗಳು.

ಹಿರಣ್ಮಯೇನ ಪಾತ್ರೇನ ಸತ್ಯಸ್ಯ ಪಿಹಿತಂ ಮುಖಂ. ಬಂಗಾರದಿಂದ ತುಂಬಿರುವ ಪಾತ್ರೆಯಿಂದ ಸತ್ಯದ ಮುಖವು ಆವೃತವಾಗಿದೆ ಎಂದು ಉಪ ನಿಷತ್ಕಾರರು ಪರಮಾತ್ಮನ ಸ್ವರೂಪವನ್ನು ಚಿತ್ರಿಸಿರುತ್ತಾರೆ.

ಒಗಟಿನ ವಿಷಯದಲ್ಲೂ ಇದು ಸತ್ಯದ ಸ್ವರೂಪವನ್ನು ಸುಂದರವಾದ ಚಮತ್ಕಾರವಾದ ರೀತಿಯಲ್ಲಿ ಅಡಗಿಸಿದ ರೀತಿಯೆಂದು ಹೇಳಬಹುದಾಗಿದೆ.

ಇಲ್ಲಿ ಒಂದು ತೋರಿಕೆಯ ವಿಷಯವನ್ನು ಮುಂದಿಟ್ಟು ಇದರಿಂದ ಶೋಚಬಹುದಾದ ವಿಷಯವನ್ನು ಊಹಿಸಿ ಹೇಳಲು ಆಹ್ವಾನ ನೀಡಿದು ದಾಗಿರುತ್ತದೆ.

ಪ್ರಸ್ತುತವಾದುದಕ್ಕೆ ಸಂಬಂಧಿಸಿ ಅಪ್ರಸ್ತುತವಾದ ವಿಷಯವನ್ನೇ ಪ್ರಸ್ತುತವೆಂಬಂತೆ ಇಟ್ಟು, ಪ್ರಶ್ನೆ ಮಾಡಲಾಗುತ್ತದೆ.

ಅಂಗಿ ತೆಗೆದರೆ ನುಂಗಣ್ಣ ಎಂಬ ಮಾತೊಂದನ್ನು ತಿಳಿಸಿ, ಅಂಗಿ ತೆಗೆದು ನುಂಗುವಂಥ ವಸ್ತು ಯಾವುದೆಂದು ಊಹಿಸಿ ಹೇಳಲು ಕೇಳಿರುವ ಒಗಟು. ಇಲ್ಲಿ ತೋರಿಕೆಯಲ್ಲಿನ ಅಂಗಿ, ಅದನ್ನು ತೆಗೆದ ಕ್ರಿಯೆ, ಹಾಗೂ ಅದನ್ನು ತೆಗೆದ ಮೇಲೆ ಉಳಿದ ಭಾಗವನ್ನು ನುಂಗುವ ಕ್ರಿಯೆ ಇದು ಯಾವುದೇ ಒಬ್ಬ ಹುಡುಗನನ್ನು ಕುರಿತಾಗಿದ್ದು. ನುಂಗಣ್ಣ ಆ ಹುಡುಗನನ್ನು ತಿಂದು, ನುಂಗಿ

(ನೀರು ಕುಡಿವ) ರಾಕ್ಷಸ ಎಂಬಂತೆ ಮೇಲಿಂದ ಭಾಸವಾಗುವದಾದರೂ ಈ ವಿಷಯವನ್ನು ಅಪ್ರಸ್ತುತವಾದುದನ್ನು ಪ್ರಸ್ತುತವೆಂಬಂತೆ ಪ್ರಕಟವಾಗಿ ಹೇಳಿದ ಮಾತು ಇದು. ಆದರೆ, ಇಲ್ಲಿ ನಿಜವಾಗಿ ಪ್ರಸ್ತುತವಾಗಿರುವದು ಒಗಟಿನ ಉತ್ತರವಾದ ಬಾಳೆ ಹಣ್ಣು.

ಅಂಗಿ ಅಂದರೆ ಬಾಳೆಹಣ್ಣಿನ ಸಿಪ್ಪೆ. ಸಿಪ್ಪೆ ಸುಲಿದು ನುಂಗಣ್ಣನಾಗುವುದು ಬಾಳೆಹಣ್ಣಿಗೆ ಸಂಬಂಧಿಸಿರುವುದಾದುದರಿಂದ ಬಾಳೆಹಣ್ಣು ಎಂಬುದೇ ಇಲ್ಲಿ ಪ್ರಸ್ತುತವಾಗಿರುವದು. ಅದರಿಂದ ಇದು ಅಪ್ರಸ್ತುತ ಪ್ರಶಂಸೆಯೆಂಬ ಅಲಂಕಾರದ ಲಕ್ಷಣವನ್ನು ಹೊಂದಿರುವದಾಗುತ್ತದೆ.

ಇಲ್ಲಿ ಉಪಮೇಯ ಅಂತರ್ಗತವಾಗಿರುತ್ತದೆ. ಉಪಮೇಯವನ್ನು ಉಪಮಾನವು ನುಂಗಿಕೊಂಡಿರುತ್ತದೆ.

ಒಗಟುಗಳಲ್ಲಿ ಸಮಸ್ಯಾಪೂರ್ತಿಯ ಒಗಟುಗಳ ಕುರಿತು ಶ್ರೀ ರಾಗೌ ಅವರು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. (ನಮ್ಮ ಒಗಟುಗಳು: ಪೀಠಿಕೆ XXVI ಮತ್ತು XLV) ಕಂತಿ-ಹಂಪನ ಸಮಸ್ಯೆಗಳು ಪ್ರಸಿದ್ಧವಾಗಿವೆ.

ಪದ್ಯದ ಕೊನೆಯಲ್ಲಿ ಕೊಟ್ಟ ವಾಕ್ಯವು ಅರ್ಥದಲ್ಲಿ ವಿಚಿತ್ರ, ಅಸಮಂಜಸ ರೂಪದಲ್ಲಿರುತ್ತದೆ. ಉತ್ತರ ಕೊಡುವ ವ್ಯಕ್ತಿ ಸಮಂಜಸವಾಗುವಂತೆ ಪದ್ಯ ಭಾಗವನ್ನು ಜೋಡಿಸಿ ಸಮಸ್ಯೆಯನ್ನು ಬಗೆಹರಿಸುವುದು ಇದರಲ್ಲಿದೆ.

ಮೇಧಾವಿಗಳಲ್ಲಿ ಶ್ರೇಷ್ಠರಾಗಿದ್ದ 'ಕಾವ್ಯಕಂಠ' ಎಂಬ ಬಿರುದನ್ನು ಕಾಶಿಯ ವಿದ್ವತ್ ಸಭೆಯಲ್ಲಿ ಪಡೆದ ಕೀರ್ತಿಶೇಷ ಪೂಜ್ಯ ವಾಸಿಷ್ಠ ಗಣಪತಿ ಮುನಿಗಳಿಗೆ ಈ ಸಮಸ್ಯೆಯನ್ನು ನೀಡಿದರಂತೆ:

ಭಾರ್ಯಾ ಶ್ವಶುರಮಿಚ್ಛತಿ. ಹೆಂಡತಿ ಮಾವನನ್ನು ಇಚ್ಛಿಸುತ್ತಾಳೆ. ಕೂಡಲೆ ವಾಸಿಷ್ಠರು ಸಮಸ್ಯಾ ಪೂರಣ ಮಾಡಿದರು : ಹಿಡಿಂಬಾ ಭೀಮ ದಯಿತಾ ನಿದಾಘೇ ಘರ್ಮಪೀಡಿತಾ । ಸ್ತನವಸ್ತ್ರಂ ಪರಿತ್ಯಜ್ಯ ಭಾರ್ಯಾ ಶ್ವಶುರಮಿಚ್ಛತಿ ॥

ಭೀಮನ ಪ್ರಿಯೆಯಾದ ಹಿಡಿಂಬೆಯು ಬೇಸಿಗೆಯಲ್ಲಿ ಸೆಕೆಯಿಂದ ಪೀಡೆ ಯನ್ನು ಪಡೆದವಳು ಮೊಲೆಗಳ ಮೇಲುಡುಪನ್ನು ತೆಗೆದುಹಾಕಿ, ಹೆಂಡತಿ ಮಾವನನ್ನು ಬಯಸಿದಳು. ಇಲ್ಲಿ ಹಿಡಿಂಬೆಯ ಮಾವನಾದವನು ಭೀಮನ ತಂದೆ ವಾಯು, ಗಾಳಿ. ಬೇಸಿಗೆಯ ಬಿಸಿಲಿನ ಸೆಕೆಯಿಂದ ಬಸವಳಿದ ಹಿಡಿಂಬೆ ಗಾಳಿಯನ್ನು ಬಯಸಿ ಎದೆಯ ಮೇಲುಡುಪನ್ನು ಕಳೆದಳು.

ಒಗಟು ಶಬ್ದಾರ್ಥಸಹಿತವಾಗಿದ್ದು ಅನ್ಯ ವಿಷಯವನ್ನು ತನ್ನೊಳಗೆ ಅಂತರ್ಗತಮಾಡಿಕೊಂಡಿರುವುದು ಸಾಮಾನ್ಯವಾಗಿರುವುದಾದರೂ ಶಬ್ದಗಳ ಸಹಾಯವಿಲ್ಲದೆಯೇ ಸಿಂಬಾಲ್ ಮೂಲಕವಾಗಿ ಇಲ್ಲವೆ ರೇಖಾರೂಪ ವಾಗಿಯೂ ಸಹಾ ಒಗಟನ್ನು ಸೂಚಿಸಬಹುದು.

ಒಬ್ಬನು ತನ್ನ ಪ್ರಿಯಕರಳೊಡನೆ ಏಕಾಂತದ ಸುಖವನ್ನು ಹಾರೈಸಿ ಕಣ್ಣಿನ ಇಂಗಿತದಿಂದ ಅವಳಿಗೆ ತನ್ನ ಆಸೆಯನ್ನು ಸೂಚಿಸಿ ಅವಳ ಬಳಿ ಬರುವುದಕ್ಕೆ ಏಕಾಂತದ ಸಂಕೇತವನ್ನು ಹಾರೈಸುತ್ತಾನೆ.

ಆಗ ಅವಳು ತನ್ನ ಕೋಮಲವಾದ ಎರಡೂ ಅಂಗೈಗಳನ್ನು ತನ್ನ ತಲೆಯ ಮೇಲೆ ಕಮಲವು ಮುದುಡಿಕೊಳ್ಳುವ ರೀತಿಯಿಂದ ಇಟ್ಟುಕೊಂಡು ಮೂರುಸಂಜೆಯ ಹೊತ್ತಿಗೆ ಬರಬೇಕೆಂಬ ಅರ್ಥದಲ್ಲಿ ಸಂಕೇತವನ್ನು ಸೂಚಿ ಸುತ್ತಾಳೆ. ಇದು ಒಂದು ತರದಲ್ಲಿ ರಹಸ್ಯವನ್ನು ಸೂಚಿಸುವುದಾಗಿದ್ದು ಒಗಟಿನ ಲಕ್ಷಣವನ್ನೇ ಮಾತಿಲ್ಲದ ಚರ್ಯೆಯಿಂದ ಸೂಚಿಸುತ್ತದೆ.

ಒಗಟು ಶಬ್ದದ ಕುರಿತು ವಿದ್ವಾಂಸರು ಹಲವು ರೀತಿ ವಿಚಾರ ಮಾಡಿರು ತ್ತಾರೆ. ಒಗೆ ಎಂಬುದರಿಂದ ಒಗಟು, ಒಡೆ ಎಂಬುದರಿಂದ ಒಡಪು ಎಂದೂ ವಿವರಿಸಿದ್ದಾರೆ. ಒಗಂಟು ಎಂಬ ಶಬ್ದವು ಕೂಡುನುಡಿ ಆಗಿದೆ ಯೆಂದು ಭಾಸವಾಗುತ್ತದೆ. ಇಲ್ಲಿ ಗಂಟು ಎಂಬುದು ಗ್ರಂಥಿ ಎಂಬ ಸಂಸ್ಕೃತ ಶಬ್ದದಿಂದ ಬಂದಿರಬಹುದು. ಗಂಟುಗಂಟಾಗಿ ಬಿಡಿಸಲು ಕಷ್ಟ ವಾಗುವ ಒಗಟಿನ ರೀತಿಗೆ ಒಂದು + ಗಂಟು ಎಂಬ ಹೆಸರು ಒಪ್ಪಬಹುದು. †

---

† ನೋಡಿ : ಒಗಟು – ಶಬ್ದವ್ಯುತ್ಪತ್ತಿ ವಿಚಾರ – ಪ್ರ. ಕ. ೬೩ :೪ ೧೯೮೨

ಒಗಟನ್ನು ಬಿಡಿಸುವುದು ಹೊಡಚುವುದು ಎಂಬ ಮಾತು ರೂಢಿಯಲ್ಲಿ ಪ್ರಯೋಗವಾಗುತ್ತದೆ. ರಹಸ್ಯಗಳನ್ನು ಬಿಡಿಸಿ ಹೇಳುವುದೇ ಒಗಟಿನ ಅಂತಿಮ ಉದ್ದೇಶವಾಗುತ್ತದೆ.

ಒಗಟು ಎಂಬ ಶಬ್ದವನ್ನು ಬಳಸದೆಯೇ ಕುಮಟಾ ತಾಲೂಕಿನ ಅಘ ನಾಶಿನಿ ಊರಿನ ಹಾಲಕ್ಕಿ ಒಕ್ಕಲಿಗರು ಒಕ್ಕಟ್ಟು ಎಂದೇ ಹೇಳುತ್ತಾರೆ. ಸ್ತ್ರೀ ಪುರುಷರೂ ಹುಡುಗರೂ ಸಹ ಒಗಟೆಂಬ ಅರ್ಥದಲ್ಲಿ ಇದನ್ನು ಬಳಸು ತ್ತಾರೆ. ಇಲ್ಲಿ ಒಕ್ಕಟ್ಟು ಎಂಬ ಮಾತಿನಲ್ಲಿ ಒಂದು ಕಟ್ಟು ಎಂಬುದು ಸುಲಭ ವಾಗಿ ಹೊಂದುತ್ತದೆ. ಇಲ್ಲಿ ಕಟ್ಟು ಎಂಬುದು ಸಾದೃಶ್ಯರೂಪವಾದ ವಸ್ತು ಗಳನ್ನು ಒಂದರಲ್ಲೇ ಹೊಂದಿಸಿ (ಒಂದಿಸಿ) ಹೇಳುವ ಒಗಟಿನ ಲಕ್ಷಣವು ಕಾಣಬರುತ್ತದೆ। ಈ ಕಟ್ಟನ್ನು ಬಿಡಿಸಿ ಹೇಳುವ ಬುದ್ಧಿ ಚಾತುರ್ಯವು ಇರ ಬೇಕಾಗುತ್ತದೆ.

ಒಗಟು ಎಂಬ ಅರ್ಥದಲ್ಲಿ ಬಳಸುವ ಕಣಿ ಎಂಬ ಶಬ್ದವು ಗಂಟು ಎಂಬ ಅರ್ಥದಲ್ಲಿದೆ ಎಂದು ಡಾ. ಎನ್. ಆರ್. ನಾಯಕರು ತಮ್ಮ ಮಹಾ ಪ್ರಬಂಧದಲ್ಲಿ ಬರೆದುದುಂಟು. ಕಣ್ಣಿ ಎಂಬುದು ದನಗಳನ್ನು ಕಟ್ಟುವ ದಾಬಿನ ಗಂಟಿಗೆ ಹೇಳುವ ಶಬ್ದ. ದಾಬಿನ ಕಣ್ಣಿ ಬಿಡಿಸು ಎಂದು ಆ ದಾಬಿನ ಗಂಟನ್ನು ಬಿಡಿಸು ಎಂಬರ್ಥದಲ್ಲಿ ಹೇಳಲಾಗುತ್ತದೆ. ಕಣ್ಣಿ ಬಿಡಿಸುವುದು ಎಂದೂ ಒಗಟಿಗೆ ಹೇಳಲಾಗುತ್ತದೆ.

ಕಣಿ ಹೇಳುವುದು ಎಂಬುದು ಮುಂದಿನ ಘಟನೆಗಳನ್ನು ಮುಂದಾ ಗಿಯೇ ಹೇಳುವ ಭವಿಷ್ಯವಾಣಿ. ಮುಂದೆ ಘಟಿಸುವ, ಮುಂದಾಗುವ – ಇಂದು ರಹಸ್ಯವಾಗಿರುವ ವಿಷಯವನ್ನು ಹೇಳುವ ಭವಿಷ್ಯವಾಣಿ ಈ ಕಣಿ.

ಒಗಟಿನ ಕಣಿಯಲ್ಲಿಯೂ ರಹಸ್ಯಾತ್ಮಕವಾಗಿರುವ ಅಂಶವಿರುತ್ತದೆ.

ಒಗಟಿನಲ್ಲಿ ಇರುವ ರಹಸ್ಯವು ಸರಿಯಾಗಿ ಒಡಚುವಲ್ಲಿ ಬಯಲಾಗು ತ್ತದೆ. ಅದರಿಂದ ಒಗಟಿನಲ್ಲಿ ಒಗಟು, ಮತ್ತು ಒಡಚು ಎಂಬ ಎರಡು ಘಟ್ಟಗಳಿರುತ್ತವೆ. ಒಡಚು ಎಂಬುದು ಕ್ರಿಯಾಪದವಾಗಿರುವುದರಿಂದ ಇದನ್ನು ಒಡಪು ಎಂದು ರೂಢಿಯಲ್ಲಿ ಬಳಕೆಯಲ್ಲಿರುವ ನಾಮಪದವನ್ನು ಬಳಸಬಹು

ದಾದುದಕ್ಕೆ ಒಂದು ತೊಂದರೆಯಿದೆ. ಅದೇನೆಂದರೆ, ಒಡಪು ಎಂಬುದು ಮದುವೆಯಲ್ಲಿ ವಧೂ-ವರರು ಪರಸ್ಪರ ಹೆಸರುಗಳನ್ನು ಹೇಳುವುದಕ್ಕೆ ಬಳಸುವ ವಾಕ್ಯವೃಂದವಾಗಿದೆ. ಅದರಿಂದ ಒಡಚು ಎಂಬ ಕ್ರಿಯಾಪದ ಶಬ್ದವನ್ನೇ ನಾಮರೂಪದಲ್ಲಿ ಸಹ ಬಳಸಬಹುದು, ಇಲ್ಲವೆ, ಒಡಪು ಅಂದರೆ ರಹಸ್ಯ ಬಿಡಿಸಿದ ಒಗಟು ಎಂಬ ಅರ್ಥದಲ್ಲಿ ಉಪಯೋಗಿಸಬಹುದು. ಒಡಪ ಎಂಬ ಶಬ್ದವನ್ನು ಮೊದಲೇ ದಕ್ಷಿಣ ಕನ್ನಡದ ನಿರೂಪಕರು ಬಳಸಿದ್ದಾರೆ.

ಒಗಟನ್ನು ಒಡಗತೆ [೧] ಎಂಬುದಾಗಿಯೂ ಶ್ರೀ ಸಿಂಪಿ ಲಿಂಗಣ್ಣನವರು ಕರೆದಿದ್ದಾರೆ. ಒಗಟನ್ನು ಕಥಿಸುವುದು, ಹೇಳುವುದು ಎಂದು ಒಡಗತೆ ಎಂಬುದನ್ನು ವಿವರಿಸಬಹುದಾದರೂ ಒಡಚುವ ಕಥೆ – ಒಗಟು ಕಥೆಗೇ ಈ ಮಾತು ಹೆಚ್ಚು ಹೊಂದಿಕೆಯಾಗುತ್ತದೆ,

ಒಗಟಿಗೆ ಬೆಡಗು (ಬೆಡಗಿನ ವಚನಗಳು) ಎಂಬ ಹೆಸರೂ ಇರುವಂತಿದೆ. ಬೆಗಡು ಆಶ್ಚರ್ಯ ಉಂಟುಮಾಡುವ ಉತ್ತರ ಇದರಲ್ಲಿರುತ್ತದೆ. ಬೆಗಡು ಬೆಡಗು ಆದೀತು. ಇಲ್ಲವೆ, ಬೆಡಗು ಅಂದರೆ ಸೌಂದರ್ಯ, ಚಮತ್ಕಾರವಾದ ಉಕ್ತಿ ಎಂದೂ ವಿವರಿಸಬಹುದು, ಬೆಡಗಿನ ಜಾಣೆ ಎಂದು ಉತ್ತರ ಹೇಳುವವಳನ್ನು ಸಂಬೋಧಿಸಿ ಹೇಳುವುದು. ಬೆಡಗು ಅಂದರೆ ಒಗಟು ಎಂಬುದನ್ನು ಸೂಚಿಸುತ್ತದೆ.

ಉತ್ತರ ಕನ್ನಡ ಒಗಟುಗಳ ಒಂದು ಉತ್ತಮ ಸಂಗ್ರಹವನ್ನು ಒಳ್ಳೆಯ ಪೀಠಿಕೆಯೊಂದಿಗೆ ಪ್ರಕಟಿಸಿದ ಶ್ರೀಮತಿ ಶಾಂತಿ ನಾಯಕ ಅವರು ಒಗಟುವಿಕೆ ಹಾಗೂ ಒಡಚುವಿಕೆಗಳನ್ನು ಕುರಿತು ಒಳ್ಳೇ ಉದಾಹರಣೆಗಳನ್ನು ಕೊಟ್ಟು ಮಾರ್ಮಿಕವಾಗಿ ವಿವೇಚಿಸಿದ್ದಾರೆ. ಮತ್ತು ಅವರ ಸಂಗ್ರಹದಲ್ಲಿ ಹಲವಾರು ಹೊಸ ಉತ್ತಮ ಒಗಟುಗಳು, ಕನ್ನಡ ಸೋಬಾನೆ ಒಗಟುಪದ್ಯಗಳಲ್ಲಿ ಸಹ ಕೆಲವು ಒಗಟುಗಳು ನನ್ನ ಸಂಗ್ರಹದಲ್ಲಿ ಇಲ್ಲದವು ಉಂಟು.

---

೧ ಜನಾಂಗದ ಜೀವಾಳ. ಪುಟ ೬೦–೭೭
ಭಟಕಳದ ಹಡಿಲ್ ಗ್ರಾಮದ ಶ್ರೀ ನಾರಾಯಣ ಸುಕ್ರ ಗೊಂಡ ಅವರು ಸಹ ಒಗಟಿಗೆ ಒಡಗತೆ ಎಂದೂ ಹೇಳಿದ್ದಾರೆ.

ನನ್ನ ಕನ್ನಡ ಸೋಬಾನೆ ಒಗಟುಗಳ ಸಂಗ್ರಹವನ್ನು ಹಲಸುಹಾಪಿನ ಕೈ. ಭಾಗೀರಥಿ ಮಂಜ ಹೆಗಡೆ ಎಂಬ ವೃದ್ಧೆಯಿಂದ ಮೊಟ್ಟ ಮೊದಲಿಗೆ ನಾನು ಸಂಗ್ರಹಿಸಿದ್ದು ೧೯೬೫ಕ್ಕೂ ಹಿಂದೆಯೇ. ಈಕೆ ನನ್ನ ದೊಡ್ಡ ಕುಟುಂಬ ವರ್ಗಕ್ಕೆ ಸೇರಿದವರಾಗಿದ್ದು, ನನ್ನ ಪೂಜ್ಯ ತಾಯಿ ಕೈ. ಮಹಾಲಕ್ಷ್ಮಿಯವರ ಸೋದರ ಮಾವನ ಹೆಂಡತಿಯಾಗಿದ್ದ ಕಾರಣದಿಂದಲೂ ನನಗೆ ಅಜ್ಜಿಯೇ ಆಗಿದ್ದರು.

ಕನ್ನಡ ಸೋಬಾನೆ ಹಾಡುಗಳ ಗೇಯ ಗುಣಕ್ಕೆ ಮನಸೋತಿದ್ದ ನಾನು ಇವುಗಳನ್ನು ಸಾಧ್ಯವಾದಷ್ಟು ಹೆಚ್ಚು ಸಂಗ್ರಹಿಸಬೇಕೆಂಬ ಉದ್ದೇಶದಿಂದ ಪಲವು ಹೆಂಗಳೆಯರ ಹತ್ತಿರ ಈ ವಿಷಯವಾಗಿ ಪ್ರಶ್ನಿಸಿ ಸಾಧ್ಯವಾದಾಗಲೆಲ್ಲ ಸಂಗ್ರಹ ಮಾಡಿದ್ದೆನು. ಕರ್ನಾಟಕ ಜಾನಪದ ಪರಿಷತ್ತು ಮೈಸೂರಿನಲ್ಲಿ ಸ್ಥಾಪನೆಯಾಗಿ ಅದರ ಮುಖಪತ್ರವಾಗಿ ಜಾನಪದ ಎಂಬ ಅರ್ಧವಾರ್ಷಿಕ ಪತ್ರಿಕೆಯು ಜನವರಿ ೧೯೬೮ ರಿಂದ ಹೊರಡ ಹತ್ತಿತು. ಅದರ ಮೂರ ನೆಯ ಸಂಚಿಕೆಯಲ್ಲಿ (೧೯೭೦) ನನ್ನ ಸಂಗ್ರಹದ ಕನ್ನಡ ಸೋಬಾನೆ ಒಗಟುಗಳ ೨೮ ಪದ್ಯಗಳನ್ನು ಪ್ರಕಟಿಸಿದ್ದರು. ಇದರಲ್ಲಿ ಹತ್ತು ಒಗಟುಗಳ ಪ್ರಶ್ನೆ-ಉತ್ತರಗಳಿವೆ. ಮಂಚದ ಕುರಿತು ಎರಡು ಸಾರೆ ಪದ್ಯಗಳು (ಪ್ರಶ್ನೆಯ ಕ್ರಮ ಸ್ವಲ್ಪ ಬೇರೆ ಬೇರೆ) ಬಂದಿವೆ.

ಇಲ್ಲಿ ಹೆಣ್ಣಿನ ಕಡೆಯ ಹೆಂಗಸರೂ ಗಂಡಿನ ಕಡೆಯ ಹೆಂಗಸರೂ ಎದುರು ಬದುರಾಗಿ ಕುಳಿತು ಈ ಒಗಟು ಹಾಡುಗಳ ಸಂವಾದವನ್ನು ನಡೆ ಸುತ್ತಿದ್ದರು. ಇದನ್ನು ಹೆಣ್ಣಿನ ಮನೆಯಲ್ಲಿ ಚತುರ್ಥಿಯ ದಿನ ರಾತ್ರಿ ಊಟ ವಾದ ಮೇಲೆ ನಡೆಸುತ್ತಿದ್ದರೆಂದು ನಿರೂಪಕಿಯರು ನನಗೆ ತಿಳಿಸಿದ್ದರು.

ಹತ್ತಿರುಳುಗಳ ವರೆಗೂ ಈ ಹಾಡುಗಳನ್ನು ಹೇಳುವ ಕೇಳುವ ಉಲ್ಲೇಖ ಪ್ರಾರಂಭದ ಪದ್ಯಗಳಲ್ಲಿ ಬಂದಿರುವುದಾದರೂ ಅಷ್ಟು ರಾತ್ರಿ ಹೇಳುತ್ತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ವರನ ಮನೆಯಲ್ಲಿ ಸಟ್ಟುಮುಡಿಯ ದಿನ ರಾತ್ರಿಯೂ ಹೇಳುತ್ತಿದ್ದರೆಂದು ತಿಳಿಸಿದ್ದುಂಟು.

ಈ ಕನ್ನಡ ಸೋಬಾನೆ ಹಾಡುಗಳು ಎಪ್ಪತ್ತು ಸೊಲ್ಲು ಇದ್ದವು ಎಂದು ಸೋದರಿ ಸೌ। ಗೌರಿ ನಾರಾಯಣ ಹೆಗಡೆ ಹೇಳಿದ್ದಾರೆ. ಇವುಗಳಲ್ಲಿ ಐವತ್ತು

ಒಗಟುಗಳು ಇದ್ದವು ಎಂದು ನಿರೂಪಕಿಯರು ತಿಳಿಸಿರುತ್ತಾರೆ. ಈ ಕನ್ನಡ ಸೋಬಾನೆ ಒಗಟು ಹಾಡುಗಳನ್ನು ಹವ್ಯಕರ ಮದುವೆಗಳಲ್ಲಿ ಹೇಳುತ್ತಿದ್ದರು. ಈ ಒಗಟು ಹಾಡುಗಳ ಸೊಬಗಿಗೆ ಒಲಿದ ಇತರ ಜಾತಿಯ ಹೆಂಗಸರೂ ಇವನ್ನು ಕಲಿತು ಪಾಠಾಂತರ ರೂಪವಾಗಿ ಹೇಳುತ್ತಿದ್ದರು.

ಶ್ರೀಮತಿ ಶಾಂತಿ ನಾಯಕರ ಗ್ರಂಥದಲ್ಲಿ ಕನ್ನಡ ಸೋಬಾನೆ ಒಗಟು ಎಂದು ಅವರು ಹೆಸರನ್ನು ಉಲ್ಲೇಖಿಸಿಲ್ಲ. ಅವರು ಇಂಥ ಹದಿಮೂರು ಒಗಟುಗಳ ಪದ್ಯಗಳನ್ನು ಕೊಟ್ಟಿದ್ದಾರೆ.

ಅಲ್ಲದೆ, ಬೇರೆ ಹದಿನಾಲ್ಕು ಒಗಟುಗಳನ್ನು ಪದ್ಯಯುಗ್ಮಗಳಲ್ಲಿ ಕೊಟ್ಟಿರುವುದರಲ್ಲಿ ಕೆಲವು ಅಪೂರ್ವವಾದ ಒಗಟು ಹಾಡುಗಳಿವೆ. ಸಮುದ್ರ, ಅತ್ತಿಕಾಯಿ, ಪಂಚಪತ್ರೆ, ಬೆಕ್ಕು ಮುಂತಾದವುಗಳ ಒಗಟುಗಳು ನಾಡವರ ಹಾಗೂ ಇತರರ ಒಗಟು ಹಾಡುಗಳಲ್ಲಿರುವಂಥವು.

ನನ್ನ ತಂಗಿ ಸೌ। ಮಹಾದೇವಿ ರಾಮಕೃಷ್ಣ ಉಗ್ರು ಅವರು ನನಗೆ ಕನ್ನಡ ಸೋಬಾನೆ ಒಗಟುಗಳನ್ನು ೧೯೭೩ರಲ್ಲಿ ಹೇಳಿದ್ದರು. ಆಗ ಅವರು ಅದಕ್ಕಿಂತ ಕೆಲವು ವರ್ಷ ಮುಂಚೆ ತೀರಿ ಹೋಗಿದ್ದ ನಮ್ಮ ಕುಟುಂಬ ವರ್ಗದ (ನೆರಮನೆಯ) ಕೈ. ಸುಭದ್ರೆ (ಸುಬ್ಬಿ) ನಾರಾಯಣ ಹೆಗಡೆ, ಮಹಾಬಲ ಹೆಗಡೆ ಮನೆ ಇವರಿಂದ ಕಲಿತುದಾಗಿ ತಿಳಿಸಿದ್ದರು.

ನಾನು ಸಂಗ್ರಹ ಮಾಡಲು ತೊಡಗಿದ ಕಾಲಕ್ಕಿಂತ ಹಿಂದೆಯೇ ಈ ಕನ್ನಡ ಸೋಬಾನೆ ಒಗಟುಗಳನ್ನು ವಧೂವರರ ಕಡೆಯವರು ಸಂವಾದ ರೂಪದಲ್ಲಿ ಹೇಳುವ ಪದ್ಧತಿ ಬಿಟ್ಟುಹೋಗಿತ್ತು, ಮತ್ತು ಇವನ್ನು ಬಲ್ಲ ಹೆಂಗಸರು ಬಹುತರವಾಗಿ ತೀರ ವೃದ್ಧೆಯರಾಗಿದ್ದರು. ಅವರು ಇವುಗಳಲ್ಲಿ ಹಲವು ಪ್ರಶ್ನೋತ್ತರಗಳನ್ನು ಮರೆತಿದ್ದರು. ಬೇರೆ ಬೇರೆಯವರಿಂದ ಸಂಗ್ರಹಿಸಿದ್ದ ಕಾರಣದಿಂದ ಇಷ್ಟಾದರೂ ದೊರೆಯಲು ಸಾಧ್ಯವಾಯಿತು. ಹಳಕಾರಿನ ದಿ. ಶೇಷಿ ವೆಂಕಪ್ಪ ಗುನಗ ಇವರು ೯–೨–೬೯ರಲ್ಲಿ ನನಗೆ ಹಾಡು ಹೇಳಿದಾಗ ಅವರಿಗೆ ೮೦ ವರ್ಷ ಮಿಕ್ಕಿದ್ದಿತ್ತು.

ದಿ. ಭಾಗೀರಥಿ ರಾಮಚಂದ್ರ ಆಚಾರಿ ಎಂಬ ಬಡಿಗ ವರ್ಗದ ಹೆಂಗಸು ತನಗೆ ೧೦೫ ವರ್ಷಗಳಾಗಿವೆ ಎಂದು ಹೇಳಿದ್ದರು.

ಇವರು ಹವ್ಯಕರಲ್ಲವಾದರೂ ಇವರ ಹಾಡುಗಳು ಹವ್ಯಕರ ಹಾಡುಗಳೇ ಆಗಿದ್ದರಿಂದ ಇವನ್ನು ಕನ್ನಡ ಸೋಬಾನೆ ಹಾಡುಗಳಲ್ಲಿ ಸೇರಿಸಲಾಗಿದೆ.

ನನ್ನ ಬಾಲ್ಯದಲ್ಲಿಯೇ ನಾನು ಹವ್ಯಕ ಹೆಂಗಸರ ಕೆಲವು ಗೀತಗಳನ್ನು ಸಂಗ್ರಹಿಸಿದ್ದರೂ ಮುಖ್ಯವಾದ ನನ್ನ ಜಾನಪದ ಸಂಗ್ರಹ ಕಾರ್ಯವು ೧೯೬೫ಕ್ಕಿಂತಲೂ ಒಂದೆರಡು ವರ್ಷಗಳ ಹಿಂದೆ ಪ್ರಾರಂಭವಾಯಿತು.

ನನ್ನ ಚಿಕ್ಕತಾಯಿಯ ಮಗ ಶ್ರೀ ಎಸ್. ವಿ. ಹೆಗಡೆಯವರು ನಮ್ಮ ಕುಟುಂಬ ವರ್ಗಕ್ಕೆ ಸೇರಿರುವ. ಹಾಗೂ ಹಲಸಮಾವು (ನಮ್ಮೂರಿನಿಂದ ಸ್ವಲ್ಪ ದೂರ ಮಾತ್ರ ಇರುವ) ನಮ್ಮ ದೊಡ್ಡಜ್ಜನ ಮನೆಯ ಅಜ್ಜಿ ಭಾಗೀರಥಿ ಎಂಬ ವೃದ್ಧೆಗೆ ಬಹಳ ಒಳ್ಳೇ ಕಥೆಗಳು ಬರುತ್ತವೆಯೆಂದು ಹೇಳಿದ ಮೇಲೆ ನಾನು ಮೊದಲು ಅಲ್ಲಿಗೆ ಹಲವು ಸಾರೆ ಹೋಗಿದ್ದವನಾದರೂ ಕಥಾ ಸಂಗ್ರಹಕ್ಕಾಗಿಯೇ ಆಗಾಗ ಹೋಗಿ ಬರುತ್ತಾ ಸಂಗ್ರಹ ಮಾಡಿದೆನು.

'ಎಡಗೈ ಸಾವಿರ ಬಲಗೈ ಸಾವಿರ' ಕಥೆ ಪ್ರಕಟವಾದುದು ೧೯೬೫ ಮೇ ೧೬ನೇ ದಿನಾಂಕದ 'ಸುಧಾ'ದಲ್ಲಿ. ಇದು ಒಗಟು ಕಥೆಯಲ್ಲ. ಅದು ೧೯೬೪ರಲ್ಲಿ ಸಂಗ್ರಹ ಮಾಡಿದ್ದು. ಇದು ಕೈ. ಭಾಗೀರಥಿ ಅಜ್ಜಿ ಹೇಳಿದ್ದ ಕಥೆಯೇ. ಅವರು ಹೇಳಿದ್ದ ಒಗಟು ಕಥೆ 'ಭಾನುಮತಿಯ ಕಥೆ' ಇವನ್ನು ಇದೇ ಕಾಲಕ್ಕೆ ಸಂಗ್ರಹಿಸಿದ್ದೆನು.

'ಸತ್ತವ ಕೊಂದಾ ಇದ್ದವ ತಿಂದಾ' ಕಥೆಯನ್ನು ನಾನು ಶ್ರೀ ತಿಪ್ಪಾ ಶಿಣ್ಣು ನಾಯ್ಕ ಅಘನಾಶಿನಿ ಇವರಿಂದ ಸಂಗ್ರಹಿಸಿದ್ದು ೨೨-೫-೭೨ರಲ್ಲಿ.

ಆದರೆ, ಇದಕ್ಕೂ ಮೊದಲೇ ಶ್ರೀ ಸುಧಾಕರ ಅವರು ಪ್ರಕಟಿಸಿದ "ಜನಪದ ಬೆಡಗಿನ ವಚನಗಳು" (ಮೈ.ವಿ.ವಿ.) ೧೯೭೦ರಲ್ಲಿ ಪ್ರಕಟವಾಗಿದ್ದುದರಲ್ಲಿ ಮೋಲಕ್ಕೆ ಸಂಬಂಧಿಸಿದ ಒಗಟು ಹೀಗೆ ಬರುತ್ತದೆ. (ನಂ. ೧೭೧)

ಕತೆ ಯತೆಯಾಯ್ತು
ಸಂಸಾರ ಎರಡಾಯ್ತು
ನಿನ್ನೆ ಹೊಡೆದ ಮೊಲ ಎಸರಾಯ್ತು
ಮೊಲ ಹೊಡೆದೋನು ಸತ್ತು ಮೂರು ದಿವಸಾಯ್ತು

ಇಲ್ಲಿ ಸಂಪಾದಕರು ಕೊಟ್ಟಿರುವ ಕಥಾ ವಿವರಣೆಯಲ್ಲಿ ಮಿಂಡನು ತಾನು ಕೂಡಿಕೊಂಡ ತನ್ನ ಪ್ರೇಯಸಿಯ ಗಂಡನನ್ನು ಕುರಿತು ಪ್ರೇಯಸಿಗೆ ಒಗಟನ್ನು ಹಾಕುವುದರಲ್ಲಿ ಅಂಥ ಅಗತ್ಯವೇನು ಕಾಣುವುದಿಲ್ಲ.

ಇಲ್ಲಿ ತಮ್ಮ ಕಾಮದ ಕಥೆ ವ್ಯಥೆಯಾಯಿತು ಎಂದು ಅವನು ಪಶ್ಚಾತ್ತಾಪ ಪಡುವುದಕ್ಕೆ ಸಮಂಜಸವಾದ ಕಾರಣ ದೊರೆವುದಿಲ್ಲ.

ನಮ್ಮ ಕಥೆಯಲ್ಲಿ ಕೊಂದದ್ದು ಗಂಡನನ್ನಲ್ಲ; ಅವಳ ಮಗನನ್ನು. ಮತ್ತು ಇಲ್ಲಿ ತನ್ನ ಗಂಡನನ್ನು ಸಾವಿಗೆ ಗುರಿ ಮಾಡಲು ಹೆಂಡತಿಯು ಒಗಟನ್ನು ಬಳಸಿಕೊಳ್ಳುತ್ತಾಳೆ.

ಇವರೇ ಹೇಳಿದ್ದ 'ಜಾಣರ ಕೈವಾಡ' ಎಂಬ ಒಗಟು ಕಥೆಯು ಕ.ವಿ.ವಿ. ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟವಾದ ನನ್ನ "ಜಾನಪದ ಕಥೆಗಳು" ಪುಸ್ತಿಕೆಯಲ್ಲಿ ಉದಾಹೃತವಾಗಿದೆ.

"ಯುಕ್ತಿರಾಜ – ಮೈನಾವತಿ" ಇದನ್ನು ಕೆಕ್ಕಾರಿನ ಶ್ರೀ ಮಂಜನಾಥ ಗುನಗರಿಂದ ೧೯೬೮ರಲ್ಲಿ ತಕ್ಕೊಂಡಿದ್ದೆನು. ಇದರಲ್ಲಿ ಮೂರು ಒಗಟು ಕಥೆಗಳು ಮಧ್ಯದಲ್ಲಿ ಉದಾಹೃತವಾಗಿವೆ. ಇದು ಕರ್ಮವೀರದಲ್ಲಿ ಬಂದಿದೆ. (೩೦–೩–೬೯)

"ಮಂಗನ ಬಸಪ್ಪ ಕಥೆ" ಯಲ್ಲೂ (ಮಯೂರದಲ್ಲಿ ಅಗಸ್ಟ ೭೫) 'ಸತ್ತ ಮೀನು ನಗೆಯಾಡಿತು' ಕಥೆಯಲ್ಲೂ (ಶ್ರೀ ನಾಗೇ ಗೌಡರು ಸಂಪಾದಿಸಿದ ಕರ್ನಾಟಕ ಜನಪದ ಕಥೆಗಳು ಗ್ರಂಥದಲ್ಲಿ ಬಂತು. ೧೯೭೭) ಒಗಟುಗಳು ಕಥೆಗಳ ಕೇಂದ್ರಸ್ಥಾನಗಳಲ್ಲಿವೆ.

ಸನ್ಯಾಸಿರಾಜ ಕಥೆ (೧೯೬೮ರಲ್ಲಿ ತಕ್ಕೊಂಡಿದ್ದು) ಯಲ್ಲಿ ಹತ್ತು ಒಗಟು ಗಳು ಮದುವೆಯ ಪಣದಲ್ಲಿ ಸೇರಿದ್ದು, ಕಥೆಯ ಮುಖ್ಯ ತಿರುವಿಗೆ ನಿರ್ಣಾಯಕವಾಗುತ್ತವೆ. (ಉತ್ತರ ಕನ್ನಡ ಜನಪದ ಕಥೆಗಳು)

'ಸತ್ತವ ಕೊಂದಾ ಇದ್ದವ ತಿಂದಾ' ಒಗಟುಕಥೆ 'ಸುಧಾ'ದಲ್ಲಿ (೧೩-೫-೭೩) ಬಂದಿದೆ. ಇಂಥದೇ ಒಗಟುಗಳು ಇದ್ದರೂ ಕಥೆಯ ಹಂದರ ಬೇರೆಯಾದ ಕಥೆ ಈ ಸಂಗ್ರಹದಲ್ಲಿ ಬಂದಿದೆ.

ಪಂಡಿತನ ಪರಾಜಯ (ನಮ್ಮ ಜನಪದ ಕಥೆಗಳು ಮತ್ತು 'ತನ್ನಂತೆ ಎಣಿಸಿದ' ೧೫-೪-೭೭ರಲ್ಲಿ 'ನುಡಿಜೇನು' ವಾರಪತ್ರಿಕೆಯಲ್ಲಿ ಪ್ರಕಟಿತ) ಕಥೆಗಳಲ್ಲಿ ಬೆರಳು (ಹಸ್ತ)ಗಳ ಹಾವ-ಭಾವ ಮುಖ್ಯವಾದರೂ ಇವನ್ನು ಒಗಟೆಂದು ತಿಳಿದು ಅರ್ಥ ಹಚ್ಚುವ ಪಂಡಿತರ ಕಾರಣದಿಂದ ಒಗಟು ಕಥೆಗಳೆಂದು ಹೇಳಬಹುದು.

'ಮಯೂರ' ಮಾಸ ಪತ್ರಿಕೆಯಲ್ಲಿ ಫೆಬ್ರುವರಿ ೬೮ರಲ್ಲಿ ಪ್ರಕಟವಾಗಿದ್ದ, 'ಹೆಣ್ಣು ಗಜನಿಂಬೆ ಹಣ್ಣು' ಕಥೆಯಲ್ಲಿ ಒಗಟುಗಳು ಪ್ರಥಮಾರ್ಧದಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತವೆ. ದೀರ್ಘವಾದ ಈ ಕಥೆಯ ಉತ್ತರಾರ್ಧ ಒಗಟುಕಥೆಯಲ್ಲವಾದರೂ ಇದನ್ನು ಒಗಟುಕಥೆಗಳ ಕುರಿತು ವಿಚಾರ ಮಾಡುವಾಗ ಉಲ್ಲೇಖಿಸಲಾಗಿದೆ. ಶ್ರೀ ರಾಗೌ ಅವರ ಕರ್ನಾಟಕ ಜನಪದ ಕಥೆಗಳು (೧೯೬೯) ಗ್ರಂಥದ ಎರಡು ಒಗಟು ಕಥೆಗಳಲ್ಲಿ 'ರಾಜ-ಮಂತ್ರಿ' ಕಥೆ ಸ್ವಲ್ಪ ಹೋಲುತ್ತದೆ.

ಸ್ತ್ರೀಮರ್ಮವನ್ನು ತಿಳಿಯಲು ಹೊರಟ ರಾಜನ ಕಥೆ 'ಬೇಡರ ಲಿಂಗಮ್ಮ' (ಉ. ಕ. ಜನಪದ ಕಥೆಗಳು ೧೯೭೫ ಸಪ್ಟಂಬರ) ಕಥೆಯಲ್ಲಿ ಬಂದ ಒಗಟುಗಳು ಮೂರು ಇವೆ. ಇವನ್ನು ೧೯೮೮ರಲ್ಲಿ ಪ್ರಕಟವಾದ ಶ್ರೀ ಕುರುವ ಬಸವ ರಾಜರ ಜನಪದ ಒಗಟು ಕಥೆಗಳು ಗ್ರಂಥದ 'ಹೆಣ್ಣಿನ ಮರ್ಮ' ಎಂಬ ಕಥೆಯ ಒಗಟುಗಳೊಡನೆ ಹೋಲಿಸಬಹುದು. (ಪುಟ ೨೩)

ನನ್ನ ಸಂಗ್ರಹದ ರಾಜಕುಮಾರಿ ಭಾನುಮತಿ (ಸುಧಾ ಪ್ರಕಟಿತ ೧೯೬೭ ರಲ್ಲಿ ಇರಬೇಕು. ಅಜ್ಞಾದ ಕಥೆ ನನ್ನೊಡನೆ ಇಲ್ಲ.) ಕಥೆಯಲ್ಲಿ ರಾಜಕುಮಾರಿ

ತನ್ನ ಜಡೆ ಬಿಚ್ಚಿ ಕೊಡವಿ, ಹಡಗಿನ ಬಾಣೆಗೆ ಬಡಿದು, ಬಂಗಾರದ ಬಟ್ಟಲನ್ನು ಎತ್ತಿ ತೋರಿಸಿದಳು.

ಅವಳು ಜಡೆ ಬಿಚ್ಚಿದ್ದರಿಂದ ನೆರೆಯು ಜಡೆಯಾಳ ರಾಜನ ಸೊಸೆ. ಬಾಣೆಗೆ ಬಡಿದದ್ದರಿಂದ ತನ್ನ ಹೆಸರು ಭಾನುಮತಿ. ತಿಂಗಳ ಬೆಳಕಿನ ದಿನ ರಾತ್ರಿ ಬಾ ಎಂದು ಸೂಚಿಸಲು ಬಂಗಾರದ ಬಟ್ಟಲು ತೋರಿಸಿದಳು.

ಬಹು ಜನಪ್ರಿಯವಾಗಿ ಕರ್ನಾಟಕದಲ್ಲೆಲ್ಲ ಪ್ರಚಾರ ಹೊಂದಿರುವ ಇದರ ಪಾಠಾಂತರಗಳು ಅನೇಕ. ನಮ್ಮ ಬೇರೆ ಪಾಠಗಳಲ್ಲಿ ಜಡೆಯನ್ನು ಬಡಿದು ಕೊಂಡುದರಿಂದ ಜಡೆಯಾಳ ರಾಜನ ಮಗಳು ಎಂದೂ ಹರಿವಾಣ ಬಡಿದು ಸೂಚಿಸಿದ್ದರಿಂದ ಹರಿಯಾಳ ರಾಜನ ಮಗಳು ಎಂದೂ ಇದೆ. ಹಲವು ತರ ದಿಂದ ಅಭಿನಯದಿಂದಲೇ ಅಭಿಪ್ರಾಯ ಸೂಚಿಸುವ ರೀತಿಯು ಇದು. ಇದು ರಹಸ್ಯವುಳ್ಳದಾಗಿದ್ದು ತಿಳಿಯದವರಿಗೆ ಇದು ಒಗಟೆಂದಾಗಿ ಭಾಸ ವಾಗುತ್ತದೆ.

ಶ್ರೀ ರಮೇಶ ಬೀರಪ್ಪ ನಾಯ್ಕ ಹೊದ್ಕೆ ಇವರು ಹೇಳಿದ ಈ ಕಥೆಯ ಪಾಠದಲ್ಲಿ ದೋಣಿಯ ಮೇಲೆ ಬಂದ ರಾಜನ ಹುಡುಗಿ ತಾಮ್ರದ ತಪ್ಪೇಲಿ ಇಟ್ಟು ವೀಳ್ಯದ ಪಟ್ಟಿಯನ್ನು ಸಮುದ್ರದಲ್ಲಿ ಬಿಟ್ಟು ಹೋಗಿದ್ದಳು. ತಪ್ಪೇಲಿ ಯಲ್ಲಿ ನೀರನ್ನು ತಂದಿಟ್ಟುದು ತಾನು ತಾಮ್ರಧ್ವಜ ರಾಜನ ಮಗಳು ಎಂದು ಸೂಚಿಸಿದ್ದು; ವೀಳ್ಯದ ಪಟ್ಟಿ ಬಿಟ್ಟಿದ್ದು ಬಾ ಎಂದು ಕರೆವುದರ ಸೂಚನೆ.

ಸೌ। ಸಾವಿತ್ರಿ ರಾಮು ನಾಯ್ಕ ಇವರ ಪಾಠದಲ್ಲಿ ಮಚವೆಯಲ್ಲಿ (ದೊಡ್ಡ ದೋಣಿಯಲ್ಲಿ) ಮದುವೆಯಾದ ಹುಡುಗಿ ಬರುತ್ತಾಳೆ. ಕೊಬ್ಬರಿ ಕಾಯನ್ನು ದೋಣಿಯ ಬಾಣೆಗೆ ಜಜ್ಜಿ, ಹಿಂಡಿ ಎಣ್ಣೆ ತೆಗೆದು, ತನ್ನ ತಲೆಗೆ ಉಜ್ಜಿಕೊಂಡಳು. ತಲೆಯ ಮೇಲೆ ಮುಡಿದುಕೊಂಡು ಹೋದ ಸಂಪಿಗೆ ಹೂವನ್ನು ತೆಗೆದು ಮೂಸಿ ನೋಡಿ, ಪುನಃ ಮುಡಿದುಕೊಂಡಳು. ಎರಡೂ ಕಣ್ಣುಗಳನ್ನು ಮುಟ್ಟಿಕೊಂಡು ಎರಡೂ ಕೈಗಳಿಂದ ನೀರನ್ನು ಬಾಚಿ, ಅದನ್ನು ಚೆಲ್ಲಿ ಹೋದಳು.

ಕೊಬ್ಬರಿ ಕಾಯನ್ನು ಜಜ್ಜಿ ಎಣ್ಣೆ ತೆಗೆದುದರಿಂದ ಅವಳು ಧನಪತ ರಾಜನ ಮಗಳು ಎಂದು ಸೂಚಿಸಿದಳು. ಕಣ್ಣುಗಳನ್ನು ಮುಟ್ಟಿಕೊಂಡುದ ರಿಂದ ನೇತ್ರಾವತಿ ಎಂದು ತನ್ನ ಹೆಸರು ಎಂದು ಸೂಚಿಸಿದಳು. ಸಂಪಿಗೆ ಹೂ ಮುಡಿದುದನ್ನು ತೆಗೆದುದರಿಂದ ಚಂಪಕರಾಯನ ಸೊಸೆ ಇವಳು.

ಶ್ರೀ ಜೋಗಿ ತಿಮ್ಮಣ್ಣ ನಾಯ್ಕ ಬಾವಿಕೇರಿ (ಇವರಿಂದ ತಕ್ಕೊಂಡಿದ್ದು ಅಗಸೂರಿನಲ್ಲಿ.) ಇವರಿಂದ ೩೧–೧೨–೬೮ರಲ್ಲಿ ಸಂಗ್ರಹ ಮಾಡಿದ, ಭಾನು ಮತಿಯ ಕಥೆಯ ಒಂದು ಒಳ್ಳೇ ಪಾಠದಲ್ಲಿ ಚಿನ್ನದ ಹೂವನ್ನು ಮೂಗಿಗೆ ಹಿಡಿಯುತ್ತಾಳೆ. ಚಿನ್ನದ ಹೂ ಎಂದುದರಿಂದ ಅವಳ ಹೆಸರು ಬಂಗಾರವತಿ ಎಂದು ಇದ್ದಿರಬಹುದು. (ಇದು ಶ್ರೀ ಜೋಗಿ ನಾಯ್ಕರು ಹೇಳಿದಂತೆ ಇಲ್ಲ) ನಾಸಿಕ ಊರಿನವಳು ಎಂಬುದು ಹೂವನ್ನು ಮೂಗಿಗೆ ಹಿಡಿದುದರಿದ ಸೂಚಿತವಾಗಿದೆ. ಹಲ್ಲನ್ನು ಜಂತಿಗೆ ಹಿಡಿವುದರಿಂದ ಜಂತಿರಾಯನ ಸೊಸೆ. ಏಳು ಸುತ್ತು ಪ್ರದಕ್ಷಿಣೆ ಮಾಡಿದ್ದರಿಂದ ಏಳು ದಿನಗಳಲ್ಲಿ ಬಾ ಎಂದು ಸೂಚನೆ ಮಾಡಿದ್ದಳು.

ಇಲ್ಲಿ ಅವಳು ಚೀಟಿಯ ಬದಲು ಅಜ್ಜಿಯ ಬೆನ್ನಿಗೆ ಒಂದೊಂದು ದಿನ ಒಂದೊಂದು ಗಂಧದ ಬೊಟ್ಟನ್ನು ಇಟ್ಟು ಸಂಕೇತ ತಿಳಿಸುತ್ತಾಳೆ. ತಿಂಗಳ ಬೆಳಕಿಗೆ ಬರಬಾರದು ಎಂದು ಸೂಚಿಸಲು ಅಜ್ಜಿಯ ಬೆನ್ನಿಗೆ ಬಿಳಿಯ ಗಂಧದ ಬೊಟ್ಟು ಬರೆಯುತ್ತಾಳೆ.

ಕರಿಗತ್ತಲೆ ದಿನದಲ್ಲಿ ಬಾ ಎಂದು ಸಂಕೇತ ಸೂಚಿಸಲು ಕಪ್ಪು ಬಣ್ಣದ ಗಂಧದ ಬೊಟ್ಟನ್ನು ಬರೆಯುತ್ತಾಳೆ. ಮುದ್ದಾಂ ಬಾ ಎಂಬ ಸೂಚನೆ ಇದು. ಒಮ್ಮೆ ಅಜ್ಜಿಯ ಬೆನ್ನಿಗೆ ಗೇಟಿ (ಗೆರೆ–) ಬರೆದದ್ದು ಅಟ್ಟದ ಮೇಲೆ, ಪಗ್ಗದ ಮೇಲೆ ಬಾ ಎಂಬ ಸಂಕೇತ. ಇದು ಚಿತ್ರದ ಮೂಲಕವೂ ಗೂಢ ವಾಗಿ ತಿಳಿಸಿದ ಒಗಟಿನ ಪರಿಣಾಮ ಮಾಡಿದ ಅಪೂರ್ವ ಉದಾಹರಣೆ.

'ಬೇಡರ ಲಿಂಗಮ್ಮ' (ಉ. ಕ. ಜನಪದ ಕಥೆಗಳು) ಎಂಬ ನಮ್ಮ ಕಥೆ ಯಲ್ಲಿ ಲಿಂಗಮ್ಮನು ರಾತ್ರಿ ಎರಡನ್ನು ಹೇ(ಪ(ರಿಕೊಂಡು. ಮೂರನ್ನು

ಹಿಡಿದುಕೊಂಡು, ಮರ್ಯಾದೆ ಮುಚ್ಚುವ ಮರದ ಕೆಳಗೆ ಬಾ ಎಂದು ರಾಜನಿಗೆ ಸೂಚಿಸುತ್ತಾಳೆ.

ಅಲ್ಲಿ ಮೊದಲಿನೆರಡು ಒಗಟುಗಳ ಅರ್ಥ ಹೀಗೆಯೇ ಇದೆ. ಮರ್ಯಾದೆ ಮುಚ್ಚುವ ಮರ ಎಂದರೆ, ಅಶ್ವತ್ಥ ಮರವೆಂದು ನಮ್ಮ ಕಥೆಯಲ್ಲಿನ ಅರ್ಥ. ಇಲ್ಲಿ ಅಶ್ವತ್ಥದ ಎಲೆ ಯೋನಿಯ ಸಂಕೇತವಾಗಿದ್ದು, ಅದನ್ನು ಮುಚ್ಚಲು ಬೇಕಾದ ಆಕಾರ ಹೊಂದಿದೆ.

ಶ್ರೀ ಬಸವರಾಜರ ಕಥೆಯಲ್ಲಿ ಮಾನಮುಚ್ಕಂಡು ನಿಂತ್ಕೊ ಅಂದರೆ, ಬಾಯಿ ಮುಚ್ಚಿಕೊಂಡು ಎಂದು ಈ ಕಥೆಯಲ್ಲಿದೆ.

ಈ ಕಥೆಯ ನನ್ನ ಸಂಗ್ರಹದ ಅಪ್ರಕಟಿತ ಪಾಠಾಂತರವೊಂದರಲ್ಲಿನ (ಸಾಲ್ಕೋಡು ಕೈ. ಪಿತ್ತ ಭಟ್ಟರು ಹೇಳಿದ್ದು) ಒಗಟು 'ಕೊಡ್ತಿಗೆ–ಸುತ್ತಿಗೆ ಜಪ್ಪುವವರ ಮನೆಗಳ ಬಳಿ ಮಾನ ಮುಚ್ಚುವ ಗಿಡವಿದೆ' ಎಂದು ಇದೆ.

ಇಲ್ಲಿ ಕೊಡ್ತಿಗೆ ಜಪ್ಪುವವ ಕುಂಬಾರ. ಸುತ್ತಿಗೆ ಜಪ್ಪುವವ ಬಡಿಗ, ಮಾನಮುಚ್ಚುವ ಗಿಡ ಹತ್ತಿ ಗಿಡ.

ಸುಣ್ಣದ ಗಡಿಗೆಯ ಸುಣ್ಣ ಒಗೆದದ್ದು ಸುಣ್ಣದ ಕಣಿ ಅಮ್ಮನವರ ಮನೆಗೆ ಬರಬೇಕೆಂಬ ಸೂಚನೆ.

ಕೈ. ಕಾವೇರಮ್ಮ (ಆರೊಳ್ಳಿ) ನನಗೆ ಹೇಳಿದ್ದ ಈ ಕಥೆಯ ಹೋಲಿಕೆಯ ಪಾಠದಲ್ಲಿ ಹದಿನಾರು ವರ್ಷ ವಯಸ್ಸಿನ ರಾಜಕುಮಾರಿ ಅವಿವಾಹಿತೆ, ಗಂಡನ್ನು ಹುಡುಕಲು ಬಂದಿದ್ದಳು.

ರಾಜಕುಮಾರನಿಗೆ ಅವಳು ಸೂಚನೆ ಕೊಟ್ಟಿದ್ದು ಹೀಗೆ. ಮಳಲನ್ನು ಒಟ್ಟುಗೂಡಿಸಿ, ಮೇಲೆ ನೀರನ್ನು ಹಾಕಿ ಇಟ್ಟಳು. ಮೇಲೆ ಕಮಲದ ಹೂವನ್ನಿಟ್ಟು ನಮಸ್ಕಾರ ಮಾಡಿ ಹೋದಳು. ಮಳಲಿನ ಮೂಲಕ ಮಳಲಗಾವಿ ದೇಶದವಳು ಎಂದೂ, ನೀರನ್ನು ಹಾಕಿದ್ದರಿಂದ ಜಲಂಧರ ರಾಜನ ಮಗಳು

ಎಂದೂ, ಕಮಲವನ್ನಿಟ್ಟು ನಮಿಸಿದ್ದರಿಂದ ತಾನು ಕಮಲಾವತಿ ಎಂದೂ, ನಮಿಸಿದ್ದರಿಂದ ವಿವಾಹೇಚ್ಛೆಯಿಂದ ಪೂಜಿಸಿದಳೆಂದೂ ಸೂಚನೆಯನ್ನಿತ್ತಳು.

ರಾಜಕುಮಾರನೊಡನೆ ದೇವಾಲಯದಲ್ಲಿ ಸಿಕ್ಕುಬಿದ್ದಾಗ ಪಿಟೀಲನ್ನು ಬಾರಿಸಿ ತನ್ನ ಕಷ್ಟವನ್ನು ಸೂಚಿಸಿದಳು.

ಸಾಮಾನ್ಯವಾಗಿ ಈ ಕಥೆಯ ಪಾಠಗಳಲ್ಲಿ ಸಿಕ್ಕುಹಾಕಿಕೊಂಡುದನ್ನು ಎತ್ತು ದೊಡ್ಡಿಯಲ್ಲಿ ಬಿದ್ದಿದೆ ಎಂಬಂತೆ ಒಗಟಿನಲ್ಲಿ ಸೂಚಿಸಲಾಗುತ್ತದೆ.

ಭಾನುಮತಿಯ ಕಥೆಯಲ್ಲಿ ಸಿಕ್ಕುಹಾಕಿಕೊಂಡುದನ್ನು ಈ ಅಭಿಪ್ರಾಯ ವುಳ್ಳ ಪದ್ಯದ ಭಾಗವನ್ನು ಭಾನುಮತಿಯು ಶ್ರುತಿಬುರುಡೆಯಲ್ಲಿ ನುಡಿಸಿದಳು. ಬರೇ ಶಬ್ದಮೂಲಕವಾಗಿ ಸೂಚಿಸುವ ಅಭಿಪ್ರಾಯದ ಒಗಟಿನ ವಾಹಕವು ವಾದನ ಸಂಗೀತ ಸಹ ಆಗಬಹುದೆಂಬುದು ಇದರಿಂದ ತಿಳಿಯುತ್ತದೆ.

ಶ್ರೀ ಕೆಕ್ಕಾರ ಕುಪ್ಪಾಭಟ್ಟರು ಹೇಳಿದ ನಾರಿಯ ಗುಟ್ಟು (೨೦-೮-೭೭) ಕಥೆ ಇದರ ಇನ್ನೊಂದು ಪಾಠ. ಕುಂದಾಪುರದ ಮುದುಕಜ್ಜ ಅವರಿಗೆ ಹೇಳಿ ದ್ದಂತೆ. ಇದರಲ್ಲಿ ರಾತ್ರಿ ಎನ್ನಲು ಉರಿಯೋ (ಉರಿಹೋಗಿ) ಸಿರಿ ಎಂಬ ಒಗಟಿನಂಥ ಶಬ್ದವೇ ಇದೆ.

ಇಲ್ಲಿ ಎರಡು (ಚಪ್ಪಲ್) ಹೇರಿಕೊಂಡು, ಒಂದು ಊರಿಕೊಂಡು (ಅಂದರೆ, ಬೆತ್ತದ ಛಡಿ ಊರಿಕೊಂಡು) ಮಾನಮುಚ್ಚುವ (ಹತ್ತಿ) ಗಿಡದ ಬಳಿ ಬಡುಮನೆ ಒಂದು, ತಟ್ಟು ಮನೆ ಒಂದು– ಅವುಗಳ ಸಮೀಪ ಬರ ಬೇಕೆಂದಿದೆ.

ಈ ಪಾಠದಲ್ಲಿನ ಒಂದು ಮಾತು ಗಮನಿಸತಕ್ಕದ್ದಾಗಿದೆ. 'ವ್ಯಭಿಚಾರಿ ನಾರಿಯರು ಮರ್ಯಾದೆಗೆ ಅಂಜಿ, ಶಬ್ದಗಳನ್ನು ಸಂಜ್ಞೆಯಿಂದಲೇ ಹೇಳುತ್ತಾ ಅವುಗಳ ಅರ್ಥ ತಿಳಿದ ಬುದ್ಧಿವಂತರಿಗೆ ಸಿಗುತ್ತಾರೆ.'

ಶ್ರೀ ರಾಗೌ ಅವರ "ಕರ್ನಾಟಕ ಜಾನಪದ ಕಥೆಗಳು" ಗ್ರಂಥದ ಕೊನೆ ಯಲ್ಲಿ ಎರಡು ಒಗಟು ಕಥೆಗಳಿವೆ.

ಡಾ। ಸುಧಾಕರ ಅವರ "ಜನಪದ ಬೆಡಗಿನ ವಚನಗಳು" ಗ್ರಂಥ (೧೯೭೦) ದಲ್ಲಿ ಒಂಬತ್ತು ಒಗಟು ಕಥೆಗಳಿವೆ. 'ಶಿವಗಂಗೆ ಸುತ್ತಿನ ಜನಪದ ಕಥೆಗಳು' ಗ್ರಂಥದಲ್ಲೂ ಇರುವ ಎರಡು ಒಗಟು ಕಥೆಗಳಿಂದಾಗಿ ಡಾ। ಸುಧಾಕರರ ಹನ್ನೊಂದು ಒಗಟು ಕಥೆಗಳು ಪ್ರಕಟವಾಗಿದ್ದವು.

ಶ್ರೀ ಕುರುವ ಬಸವರಾಜರ ಜನಪದ ಒಗಟು ಕಥೆಗಳು ಗ್ರಂದಥದಲ್ಲಿ ೪೦ ಕಥೆಗಳು ಪ್ರಕಟವಾಗಿದ್ದು, ಇದು ಅತಿ ಹೆಚ್ಚಿನ ಸಂಖ್ಯೆಯ ಜನಪದ ಒಗಟು ಕಥೆಗಳನ್ನು ಹೊಂದಿದ ಶ್ರೇಷ್ಠ ಗ್ರಂಥವೆಂದು ಶ್ಲಾಘಿಸಲ್ಪಟ್ಟಿದೆ.

ಇದರ ಕಥೆಗಳಲ್ಲಿನ ದೇಸಿಯ ಶೈಲಿಯು ಬಹಳ ಸೊಗಸಾಗಿದ್ದು ಸಂಕಲನದ ಮಹತ್ವವನ್ನು ಹೆಚ್ಚಿಸಿರುತ್ತದೆ.

"ಜನಪದ ಒಗಟು ಕಥೆಗಳು" ಗ್ರಂಥದ ೮ನೆಯ ಕಥೆ 'ಕುಂಕುಮರಾಣಿ' ಭಾನುಮತಿ ಕಥೆಯ ತಿರುಳನ್ನು ಒಳಗೊಂಡಿರುವ ಕಥೆ; ಆದರೆ ಇದು ತೀರ ಹೊಸ ಪಾಠವೇನಲ್ಲ.

ಡಾ। ಎಂ. ಐ. ಜಯಚಂದ್ರ ಅವರು ಸೂಚಿಸಿರುವಂತೆ ಅವರ 'ಜಾನಪದ ಕಥಾಮೃತ' ಭಾಗ ೧ರಲ್ಲಿ ಇದು ಬಹಳ ಹಿಂದೆ ಬಂದಿದೆ. (ಸಂ. ೧ ಪುಟ ೧೨).

ಕುಂಕುಮ ರಾಣಿ ಕಥೆಯಲ್ಲಿ ಮಳಲನ್ನು ಹಾಕಿದ್ದು ಆಕೆಯ ಮನಸ್ಸು ತರುಣನ ಮೇಲೆ ಇದೆ ಎಂದು ಸೂಚಿಸುವುದು ಎಂದು ಕಥೆಯಲ್ಲಿ ಬಂದಿದೆ.

ನಮ್ಮ ಪಾಠದಲ್ಲಿ ಮಳಲು ಮಳಲಗಾವಿ ಪಟ್ಟಣದ ಹೆಸರನ್ನು ಸೂಚಿಸುತ್ತದೆ.

'ಒಗಟುಗಳನ್ನು ಚಿತ್ರಗಳ ರೂಪದಲ್ಲಿ, ಕೆಲವೊಮ್ಮೆ ಸನ್ನೆಯ ರೂಪದಲ್ಲೂ ಪ್ರಸ್ತುತಪಡಿಸುವುದುಂಟು' ಎಂದು ಡಾ। ಅಂಬಳಿಕೆ ಹಿರಿಯಣ್ಣನವರು ಬರೆದಿದ್ದಾರೆ. ೧

---

೧ ಒಗಟು ಕಥೆಗಳು; ಸಂ. ಕುರುವ ಬಸವರಾಜ್ (ನಂ. ೪)

ಶ್ರೀ ಎಚ್. ಎಲ್. ನಾಗೇಗೌಡರು ಸಂಪಾದಿಸಿದ 'ಕರ್ನಾಟಕ ಜನಪದ ಕಥೆಗಳು' (೧೯೭೭ರಲ್ಲಿ ಪ್ರಕಟಿಸಿದ್ದು) ಸಂಗ್ರಹದಲ್ಲಿ ಶ್ರೀ ನಂ. ನಾರಾಯಣ ಗೌಡ ಅವರ ಸಂಗ್ರಹದ 'ಶೆಟ್ಟಿ ಸೊಸೆ' ಕಥೆಯಲ್ಲಿ ಭಾನುಮತಿ ಕಥೆಯ ಹೋಲಿಕೆಯ ಇನ್ನೊಂದು ಪಾಠದಲ್ಲಿ ಮುದುಕಿಯ ಕೆನ್ನೆಮೇಲೆ ಕುಂಕುಮ ವನ್ನು ಕೈಗೆ ಹಚ್ಚಿಕೊಂಡು ಕೆನ್ನೆಗೆ ಹಚ್ಚಿ ಕಳಿಸುತ್ತಾಳೆ ಶೆಟ್ಟಿಯ ಸೊಸೆ.

ಇದು ತಾನು ಹೊರ್ಗಡೆ ಆಗಿದಾಳೆ ಎಂಬುದರ ಸೂಚಕ. ಅದರಂತೆ ಅಮಾವಾಸ್ಯೆಯ ಸೂಚಕವಾಗಿ ಈ ಮಸಿಹಚ್ಚಿ ಕಳಿಸುತ್ತಾಳೆ.

ಶ್ರೀ ಕುರುವ ಬಸವರಾಜರ 'ಕುಂಕುಮರಾಣಿ' ಕಥೆಯಲ್ಲಿ ಬಂದ ಎರಡು ಸನ್ನೆಗಳಲ್ಲಿ 'ಶೆಟ್ಟಿಸೊಸೆ' ಕಥೆಯಲ್ಲಿ ಬಂದ ಕುಂಕುಮ ಬಣ್ಣ ಇಲ್ಲಿ ಊರ್ಮಂಜನ (ಕಿರುಮಂಜಿಯ) ಬಣ್ಣ ಎಂದು ಬಂದಿದೆ. ವಿಶೇಷವೆಂದರೆ. ಮೂರು ದಿನ ಮುಟ್ಟಾಗಿರುವುದನ್ನು ಮೂರು ಬೆರಳು ಸನ್ನೆಯಿಂದ ತಿಳಿಸ ಲಾಗಿದೆ. ಎರಡನೆಯದಾಗಿ, ಮಸಿ ಹಚ್ಚಿದ್ದು ಆ ಕಥೆಯಲ್ಲೂ ಇದೆ.

ಮಸಿ ಹಚ್ಚಿದ್ದು ಅಮಾವಾಸ್ಯೆಯ ಕತ್ತಲೆಯ ಸೂಚಕವಾಗಿದ್ದುದು. 'ಶೆಟ್ಟಿಸೊಸೆ' (ಪುಟ ೩೨೪) ಎಂಬ ಕಥೆಯಲ್ಲಿ ಬಂದಿದ್ದುದಲ್ಲದೆ ನಾನು ಹಿಂದೆ ಸಂಗ್ರಹಿಸಿದ್ದ 'ಭಾನುಮತಿ' ಕಥೆಯ ಪಾಠದಲ್ಲೂ ಇದೆ ಎಂಬುದನ್ನು ಹಿಂದೆ ತಿಳಿಸಿದ್ದೇನೆ.

ನಾನು ಸಂಗ್ರಹಿಸಿ, ಪ್ರಕಟವಾದ 'ಉ.ಕ. ಜನಪದ ಕಥೆಗಳು' ಗ್ರಂಥದ "ಯಾರ ಹೆಂಡತಿ" (ಪುಟ ೧೮೮) ಕಥೆಯಲ್ಲಿ ಪ್ರಧಾನಿಯ ಹುಡುಗನು ಬೇರೆ ರಾಜ್ಯದ ಪ್ರಧಾನಿಯ ಹುಡುಗಿಯನ್ನು ಕೂಡಿ ಸೋತ ಎಂಬ ಆರೋಪಕ್ಕೆ ಉತ್ತರಿಸುತ್ತಾನೆ.

"ಬೇಲಿಯನ್ನು ಬಿಚ್ಚಿ ತೆಗೆದು, ದನವನ್ನು ಒಳಗೆ ಬಿಟ್ಟರೆ, ಅದು ಸಸಿ ಗಳನ್ನು ತಿನ್ನುವದೋ ಇಲ್ಲವೋ ನೀವೇ ಹೇಳಿ" ಈ ಒಂದು ಒಗಟಿನಿಂದ ಇದು ಒಗಟು ಕಥೆಯಾಗಲಾರದು.

ಶ್ರೀ ರಾಗೌ ಅವರ 'ಕರ್ನಾಟಕದ ಜಾನಪದ ಕಥೆಗಳು' ಗ್ರಂಥದಲ್ಲಿ ಆರನೇ ಭಾಗದ ಎರಡು ಒಗಟು ಕಥೆಗಳಲ್ಲಿ ಎರಡನೆಯ "ರಾಜ–ಮಂತ್ರಿ" ಕಥೆಯ ಎರಡನೆಯ ಒಗಟು ಹೀಗೆ ಇದೆ:

ಬಸವನ ಮುಂದೆ
ರಸಬಾಳೆ ಕಬ್‌ಹಾಕಿ
ಬಸವೆದ್ದು ಮೇಯ್ಯದ್ನ
ಸಿಸುವೇನು ಮಾಡಾತು?

೧೯೭೫ರ 'ಉ. ಕ. ಜನಪದ ಕಥೆಗಳು' ಸಂಗ್ರಹದಲ್ಲಿ ಬಂದಿರುವ ನಮ್ಮ 'ಬುದ್ಧಿವಂತೆಯ ಉತ್ತರ' ಕಥೆ ಒಂದು ಉತ್ತಮ ಒಗಟು ಕಥೆಯಾಗಿದೆ.

ಶ್ರೀ ಎಚ್. ಎಲ್. ನಾಗೇಗೌಡರು ಸಂಪಾದಿಸಿ ಪ್ರಕಟಿಸಿದ್ದ 'ಕರ್ನಾಟಕ ಜನಪದ ಕಥೆಗಳು' ಗ್ರಂಥದ ಒಗಟು ಕಥೆಗಳಲ್ಲಿ ಶ್ರೀ ಡಾ। ಅಂಬಳಿಕೆ ಹಿರಿಯಣ್ಣನವರು ನಮ್ಮ 'ಸತ್ತ ಮೀನು ನಗೆಯಾಡಿತು' ಎಂಬುದನ್ನು ಒಗಟು ಕಥೆಯೆಂದು ಗುರುತಿಸಿದ್ದಾರೆ. (ನಾಗವಲ್ಲಿ ಶ್ರೀ ನಾಗೇಗೌಡ ಪ್ರಶಸ್ತಿ ಗ್ರಂಥ ಪುಟ ೪೩೧) ಇದರಲ್ಲಿ ಆರು ಒಗಟುಗಳು ಉಂಟು.

"ಸಿದ್ಧಿಯರ ಕಥೆಗಳು' ಸಂಕಲನದ (೧೯೭೮) ಪೀಠಿಕೆಯಲ್ಲಿ "ಜೀವದ ಹೆಂಡತಿ' ಈ ಸಂಗ್ರಹದಲ್ಲಿ ಒಂದೇ ಒಂದಾದ ಒಗಟಿನ ಕಥೆ ಎಂದು ಬರೆದಿದ್ದೆನು. ವಿಚಾರ ಮಾಡಿದಾಗ, 'ಅಡವಿಟ್ಟ ಸಾಮಾನು' ಕಿಶ್‌ಮೆಂಟೆ (ಪುಟ ೧೬೬–೧೮೨) ಈ ಎರಡು ಕಥೆಗಳ ಮುಖ್ಯ ಆಶಯಗಳು ಒಗಟುಗಳೇ ಆಗಿವೆ. 'ಕಿಶ್‌ಮೆಂಟೆ' ಕಥೆಯಲ್ಲಿ 'ಕಿಶ್‌ಮೆಂಟೆ' ಹಾಗೂ 'ಮಾಯದ ಗಾಯ' ಆಶಯಗಳು ಒಗಟುಗಳೇ ಆಗಿವೆ.

೨೪–೪–೬೯ರಲ್ಲಿ ನಾನು ಸಂಗ್ರಹಿಸಿದ ದಿ. ಅಬ್ಬಿ ಗೌರಯ್ಯ ನಾಯ್ಕ ಹೆಗಡೆ ಊರು ಇವರು ನಿರೂಪಿಸಿದ್ದ 'ಸಮಸ್ಯೆಯ ಬಾಣ ಕಲ್ಲಿನ ಗಾಣ' ಕಥೆಯಲ್ಲಿ ಹಾವನ್ನು ಅರಸು ಕೊಲ್ಲಿಸಿದ ಮೇಲೆ ಅವನ ಹೆಂಡತಿ ಒಗಟನ್ನು ಹಾಕುತ್ತಾಳೆ. ಒಂದು ವರ(ಹಾ) ಕೊಟ್ಟು ತೆಗೆಸಿದ್ದೆ, ವಂದ್ ವರ(ಹಾ) ಕೊಟ್ಟು ಸುಡಿಸಿದ್ದೆ, ವಂದ್ ವರ(ಹಾ) ಕೊಟ್ಟು ತೆಗೆಸಿದ್ದೆ.

ಇದನ್ನು ಶ್ರೀ ರಾಗೌ ಅವರ 'ಅಗ್ನಿಕೊಂಡ' ಒಗಟು ಕಥೆಯೊಡನೆ ಹೋಲಿಸಬಹುದು. 'ಮದುವೆಯ ಪಣ' ಒಗಟು ಕಥೆ ಡಾ। ಜೀಶಂಪ ಅವರ 'ದಕ್ಷಿಣ ಕರ್ನಾಟಕದ ಜನಪದ ಕಥೆಗಳು' ಸಂಗ್ರಹದಲ್ಲಿ ಬಂದಿದೆ.

ನಮ್ಮ 'ಮಂಗನ ಬಸಪ್ಪ' (ಮಯೂರ ಆಗಸ್ಟ ೭೫) ಒಗಟು ಕಥೆಯಲ್ಲಿ ಹಲವಾರು ಒಗಟುಗಳಿವೆ. ಅವುಗಳಲ್ಲಿ ಒಳಸಿಹಿ (ಬಾಳೆಹಣ್ಣು), ಹೊರಸಿಹಿ (ಖರ್ಜೂರ) ಮನೆದುಂಬು (ದೀಪ) ಈ ಒಗಟುಗಳೊಡನೆ ಇತರ ಕೆಲವು ಉಂಟು.

ಬೇರೆ ಬೇರೆ ಗ್ರಂಥಗಳಲ್ಲಿ ೧೯೭೭ಕ್ಕಿಂತ ಹಿಂದೆ ಪ್ರಕಟವಾದ ೧೬ ಒಗಟು ಕಥೆಗಳಿವೆ. ನಮ್ಮ 'ಮಾಯಾ ಸುಂದರಿ' ಕಥೆಯಲ್ಲಿ (ತಕ್ಕೊಂಡಿದ್ದು ೯–೫–೭೭) ಕೋಟೆಯ ಪ್ರವೇಶ ದ್ವಾರದಲ್ಲಿ ಒಂದು ಒಗಟು – ಅದನ್ನು ಬಿಡಿಸಿದರೆ ಮಾತ್ರ ಒಳಗೆ ಹೋಗಬೇಕು.

ಇದರಲ್ಲಿ 'ಒಂದು ದುಡ್ಡಿಗೆ ಎಣ್ಣೆ, ಕಾಳು, ಎಲೆ, ಕಟ್ಟಿಗೆ ತಂದುಕೊಟ್ಟು ಮುಂದಾಗು' ಈ ಒಗಟಿದೆ. ಎಳ್ಳಿನ ಗಿಡವನ್ನು ಹುಡುಗ ಕೊಡಲು ರಾಜಕುಮಾರಿಯು ಪಣದಂತೆ ಅವಳು ಮದುವೆಯಾದಳು. ದೊಡ್ಡ ಕಥೆಯಲ್ಲಿ ಇದು ಒಂದು ಆಶಯ ಮಾತ್ರ.

'ಜನಪದ ಒಗಟು ಕಥೆಗಳು' ಗ್ರಂಥದಲ್ಲಿ 'ಐದು ಪೈಸದಾಗೆ ಹೂವು ಎಣ್ಣೆ ಕಟ್ಟಿಗೆ ತಗೊಂಡು ಬಾ' (ಪುಟ ೮) ಎಂಬ ಕಥೆಯಲ್ಲಿ ಒಂದು ಒಗಟನ್ನು ಕಥೆಯಾಗಿ ಬೆಳೆಸಿ ಉತ್ತರ ಸೂರ್ಯಕಾಂತಿ ಗಿಡ ಎಂದು ಹೇಳಲಾಗಿದೆ.

ಶ್ರೀ ಸುಧಾಕರರ 'ಜನಪದ ಬೆಡಗಿನ ವಚನಗಳು' ಗ್ರಂಥದ ೪೦೬ನೇ ಒಗಟು:

ಮುಂಡಿಗೆ ಮೊಲೆ ಬಂದೋಳೆ
ಬೆನ್ನಿಗೆ ಬೇರಿಳಿದೋಳೆ
ನಿನ ಗಂಡನ ಹೆಸರ್ಹೇಳೆ
'ಒಣಗಿದ್ದು ಮೆಟ್ಕೊಂಡು
ಹಸೇದು ಕುಯ್ಕೋಕೆ ಹೋಗಿದಾನೆ'

ಇಲ್ಲಿ ಒಣಗಿದ್ದು ಅಂದರೆ ಏಣಿ. ನಮ್ಮ ಈ ಒಗಟಿನ ಕಥೆಯಲ್ಲಿ ಈ ಕಥೆಯು ಒಂದು ಒಳ್ಳೆಯ ಪಾಠವನ್ನು ಸೌ। ಸಾವಿತ್ರಿ ರಾಮ ನಾಯ್ಕ ಹೆಗಡೆ ಊರು ಇವರು ಹೇಳಿದ್ದು. ಇದರಲ್ಲಿ ಒಗಟುಗಳು ಹೆಚ್ಚಾಗಿವೆ. ಅದೇ ಕೇರಿಯ ಕುಮಾರಿ ಕಮಲಾ ಬಲಿಯಂದ್ರ ನಾಯ್ಕ ಇವರು ಹೇಳಿದ ಒಗಟು ಕಥೆಗಳಲ್ಲಿ ಇದರ ಪಾಠವೂ ಇದೆ.

'ಜನಪದ ಒಗಟು ಕಥೆಗಳು' ಸಂಕಲನದ ಇದೇ ಕಥೆಯ ಪಾಠದಲ್ಲಿ ಎರಡು ಮುಕುಳಿಯೋನೆ ಎಂದು ಇರುವಲ್ಲಿ ನಮ್ಮ ಪಾಠದಲ್ಲಿ ಬೆನ್ನಮೇಲೆ ಮುಕುಳಿಯವ್ನೇ ಎಂಬ ಒಗಟು ಇದೆ.

ಅಲ್ಲಿನ ಮೂರು ಕಾಲಿನ ಪ್ರಧಾನಿ ಅಂದರೆ ಕೋಲೂರಿ ನಡೆವ ಅಜ್ಜ ಎಂಬುದು ಇದೆ.

'ಸತ್ತವ ಕೊಂದಾ ಇದ್ದವ ತಿಂದಾ' ಎಂಬ ಕಥೆಯ ನಮ್ಮ ಇನ್ನೊಂದು ಪಾಠವನ್ನು ಈ ಸಂಕಲನದಲ್ಲಿ ಪ್ರಕಟಿಸುತ್ತಿದ್ದೇನೆ.

ಇಲ್ಲಿ ಮಿಂಡನನ್ನು ಕೊಂಪವ ಗಂಡ; ಇಲ್ಲಿ ಸತ್ತ ಮೊಲವನ್ನು ತಂದ ವನು ಗಂಡ; ಮತ್ತು ಅದರ ಮೇಲೋಗರ ಮಾಡಿದವಳು ಹೆಂಡತಿ ಎಂದು ನಿರೂಪಕಿ ಸ್ಪಷ್ಟ ಹೇಳಬೇಕಾಗಿತ್ತು, ಮತ್ತು ಒಗಟನ್ನು ಹೇಳದಿದ್ದರೆ ಹೆಂಡ ತಿಗೆ ಶಿಕ್ಷೆಯೇನಾದರೂ ಆಗುವದಿತ್ತೋ ಎಂಬುದನ್ನು ತಿಳಿಸದಿದ್ದುದು ಒಂದು ಮುಖ್ಯ ಲೋಪವಾಗಿದೆ,

೧೯೬೯ಕ್ಕಿಂತ ಹಿಂದೆಯೇ ದಿ. ಕೃಷ್ಣ ಮೇಸ್ತ್ರಿ ಎಂಬ ಕೇರಳ ಮೂಲದ, ಕಲ್ಲುಕಟ್ಟುವ ಮತ್ತು ಗಿಲಾಯಿ ತೆಗೆವ ಉದ್ಯೋಗ ಮಾಡುತ್ತಿದ್ದ ವೃದ್ಧರ ಪರಿಚಯವು ನನಗೆ ಆಯಿತು. ಅವರು, ಕುಮಟಾ ತಾಲೂಕ ಮಾಸೂರಿನಲ್ಲಿ ವಸತಿ ಮಾಡಿ, ಅಲ್ಲಿಯ ಒಬ್ಬ ಗಾಮೊಕ್ಕಲ ಹೆಂಗಸನ್ನು ಮದುವೆಯಾಗಿದ್ದರು.

ಅವರು ನನಗೆ ಹೇಳಿದ ಮೂರು-ನಾಲ್ಕು ಜನಪದ ಕಥೆಗಳಲ್ಲಿ ಒಂದು ಕಥೆಯು ಅಪ್ರಶಿಖ ಎಂಬ ಒಗಟು ಕಥೆಯಾಗಿತ್ತು. ಸಂಸ್ಕೃತ ಶ್ಲೋಕಗಳನ್ನು ದೋಷಸಹಿತವಾಗಿ ನನಗೆ ಹೇಳಿ ಕಥೆ ಹೇಳಿದ್ದರು,

ರಾಜಕುಮಾರನ ಹೆಂಡತಿ ಒಗಟಿನ ರೀತಿಯಲ್ಲಿ ಹೇಳಿದ ರಾಗಮಲ್ಲಿಗೆ ಹೂ ಅವಳಿಗೆ ಬೇಕಾಗಿದ್ದ ಅನುರಾಗವಾಗಿತ್ತು. ಅದು ದೊರಕದಿದ್ದಾಗ ಬೇರೆ ಗಂಡಸನ್ನು ಹುಡುಕಿಕೊಂಡಳು. ರಾಗಮಲ್ಲಿಗೆ ಹೂ ಅಂದರೆ ಏನೆಂದು ತಿಳಿಯುವ ಹೂಟಗಳೇ ಇಡೀ ಕಥೆಯನ್ನು ಆವರಿಸಿಕೊಂಡಿದೆ.

ಈ ಕಥೆಯಲ್ಲಿ ಆವನ ಹೆಂಡತಿಯು ರಾಜ್ಯವನ್ನಾಳಬೇಕು ಎಂದು ಗೂಢವಾಗಿ ಎರಡನೆಯ ತನ್ನನ್ನೂ ಸಹ ಆಳಬೇಕು ಎಂಬ ಸೂಚನೆಯನ್ನಿಟ್ಟಿದ್ದಳು.

ನಮ್ಮ 'ಜಾಣರ ಕೈವಾಡ' ಕಥೆಯ ಹೋಲಿಕೆಯ ಒಂದು ಒಳ್ಳೆಯ ಪಾಠ ಇತ್ತೀಚೆಗೆ ಜೀನಹಳ್ಳಿ ಶ್ರೀ ಸಿದ್ದಲಿಂಗಪ್ಪನವರ 'ಕುಲ್ಡ-ಕುಂಟ-ಕೆಪ್ಪ ಜಾಣರ ಜನಪದ ಕಥೆಗಳು' ಸಂಗ್ರಹದಲ್ಲಿ (1991) ಕಾಣುತ್ತದೆ. ಕಥೆಯ ತಲೆಬರೆಹ "ಎಂಥಾನಾದ-ಹಸ್ತಸಿದ್ಧಿ-ಯಾಳ್ಯೆ ಸಂಬಂಧ ? (ಪುಟ 26-28) ನಮ್ಮ "ಜಾಣರ ಕೈವಾಡ" ಎಂಬುದು ಇಲ್ಲಿ ಹಸ್ತಸಿದ್ಧಿ ಎಂದು ಬಂದಿದೆ.

ದನಗುಳಾದ್ರೆ ಕೋಡ್ ಯಾಕಿಲ್ಲ? ಅಂತ ಕೇಳಿದ್ದಕ್ಕೆ ಮತ್ತೊಬ್ಬಾಕೆ 'ಎರ್ಡು ಕಾಲಿನೋಕೆ ಇರಲ್ಲ ನಾಲ್ಕು ಕಾಲಿನೋಕೆ ಇರ್ತಾವೆ' ಅಂದ್ಲು.

ನಮ್ಮ ಸಂಗ್ರಹದ "ಸುತ್ತಿ ಸುತ್ತಿ ಬರುತಿದೆ ನನಗಾಗಿ" ಕಥೆಯನ್ನು ಇವರ ಕಳ್ಳ-ಸುಳ್ಳರ ಜನಪದ ಕಥೆಗಳು ಗ್ರಂಥದ 'ಹೆಂಡತಿಯ ಜಾಣತನ' ಕಥೆ ಹೋಲುತ್ತದೆ. ಕೆಲವು ಸಾರೆ, ಒಗಟುಗಳನ್ನು ಒಡ್ಡುವವರು ಸೋತವರಿಗೆ ಒಡ್ಡವನ್ನು ಹೇಳುತ್ತಾರೆ.

ಸಾಸಿವೆ ಎಂಬ ಉತ್ತರ ಬರಬೇಕಾದ ಒಗಟನ್ನು ಬಿಡಿಸಲು ಸಾಧ್ಯವಾಗದವರು ದಂಡ ಕೊಟ್ಟ ಘಟನೆ ಹೆಗಡೆ ಊರಿನಲ್ಲಿ ನಡೆಯಿತು ಎಂದು ಸೌ। ಪಾರ್ವತಿ ಗಣಪಯ್ಯ ನಾಯ್ಕ ಅವರು ಹೇಳಿದರು. ಸೋತರೆ ಇಪ್ಪತ್ತೈದು ರೂಪ್ಯಾ ಕೊಡಬೇಕು ಎಂದು ವಡ್ಡ ಕಟ್ಟಿದ್ದರು. ಮತ್ತು ಮೂವತ್ತು

ರೂಪಾಯಿ ಕೊಟ್ಟರೆ ಅವಲಕ್ಕಿ ತೆಂಗಿನಕಾಯಿ ಭಾಗ ತಿನ್ನಿಸುವೆ ಎಂದು ಒಡ್ಡ ಒಡ್ಡಿದವ ಹೇಳಿದ. ಆದರೆ, ಒಗಟನ್ನು ಬಿಡಿಸಲು ಸಾಧ್ಯವಾಗಲಿಲ್ಲ.

ಮರುದಿನ ಸೋತವನು ೩೦ ರೂಪ್ಪಾ ದಂಡ ಕೊಟ್ಟನು. ತೆಂಗಿನ ಕಾಯಿಯ ಕಣ್ಣು (ರಂಧ್ರಭಾಗ) ಚೂರುಮಾಡಿ, ಅದನ್ನು ಇಟ್ಟುಕೊಂಡಿದ್ದು ಉಳಿದ ಭಾಗವನ್ನು ಅವಲಕ್ಕಿಯೊಡನೆ ಚೂರುಮಾಡಿ ಸೇರಿಸಿ ತಿನ್ನಲು ಕೊಟ್ಟರು.

ತೆಂಗಿನ ಕಾಯಿ ಕಣ್ಣನ್ನು ಇಟ್ಟುಕೊಂಡು ಮರುದಿನ ದಂಡ ವಸೂಲ್ಮಾಡಿದ್ದು, ದಂಡ ವಸೂಲಿಗೆ ಸುಂಕ ಎಂದು ನಿರೂಪಕಿ ಹೇಳಿದ್ದಾರೆ.

ನಮ್ಮ 'ಮದುವೆಯ ಪಣ' ಎಂಬ ಸಮಸ್ಯಾತ್ಮಕ ಕಥೆ ಡಾ। ಜೀಶಂಪ ಅವರ 'ದಕ್ಷಿಣ ಕರ್ನಾಟಕದ ಜನಪದ ಕಥೆಗಳು' ಎಂಬ ಸಂಕಲನದಲ್ಲಿ ಬಂದಿದೆ. (೨೪೭)

ಅದರಲ್ಲಿ ರಾಜನ ಮಗಳನ್ನು ಯಾರಿಗೆ ಮದುವೆ ಮಾಡಿ ಕೊಡಬೇಕೆಂಬುದನ್ನು ಸರಿಯಾಗಿ ಹೇಳಲು ಸಾಧ್ಯವಾಗದ ನಲವತ್ತು ಜನರು ಮಾಡಿಕೊಂಡ ಕರಾರಿನಂತೆ ಹೆಗಡೆಯ ಗೇರಕ್ಕಾ ಮನೆಯ ದಿ. ಬೈರ ನಾಯ್ಕ ಎಂಬವರಿಗೆ ಐದಾರು ತೆಂಗಿನ ಕಾಯಿಗಳಂತೆ ಒಡ್ಡದ ಸುಂಕ ಕೊಟ್ಟರು ಎಂದು ದಿ. ಶ್ರೀರಾಮ ನಾಯ್ಕರು ತಿಳಿಸಿದ್ದರು.

ಓಹೋ ವನವೇ, ಎಂದು ಪ್ರಾಂಭವಾಗುವ ಒಗಟು ಕಥೆಯನ್ನು ಬಿಡಿಸಲಾಗದವರು ಒಂದು ಕೇಜಿ ಅವಲಕ್ಕಿ ಹಾಗೂ ಐದು ರೂಪಾಯಿ ಕೊಡಬೇಕು ಎಂದು ಒಡ್ಡಕ್ಕೆ ಒಪ್ಪಿಕೊಂಡು, ಬಿಡಿಸಲಾಗದೆ ಸುಂಕ ಕೊಟ್ಟಿದ್ದರು ಎಂದು ಕುಮಾರಿ ಕಮಲಾ ಬಲಿಯಂದ್ರ ನಾಯ್ಕ (ಹೆಗಡೆ ಊರು) ತಿಳಿಸಿದ್ದರು.

— ಡಾ. ಎಲ್. ಆರ್. ಹೆಗಡೆ

ಹಾಡುಗಳಲ್ಲಿ ಒಗಟುಗಳು

೧. ಕನ್ನಡ ಸೋಬಾನೆ

ಮೂರಿರುಳು ಹೇಳೂವೊ ಮೂರಿರುಳು ಕೇಳೂವೋ
ಮೂರಿರುಳು ಹಾಡಽ ಗುಣಿಸೂವೋ ॥ ನಮ್ಮ ದನಿ
ಹೆದರದ್ದೇ ಬರಲೀ ಸಭೆಯಲ್ಲೀಽ ॥ ॥೧॥

(ಮೂರಿರುಳು ಹೇಳಿದರೆ ಮೌರಿ ಬಾರಿಸಿದಂತೆ
ಸಣ್ಣ ತಮ್ಮಯ್ಯಽ[2] ಮದುವೇಗೇ ನಾವೀಗ
ಚೆಂದಕ್ ವಂದ್ ಹಾಡ್ಽ ನುಡಿತೇವೇಽ[1]) ॥೨॥

ಆರಿರುಳು ಹೇಳೂವೊ ಆರಿರುಳು ಕೇಳೂವೋ
ಆರಿರುಳು ಹಾಡಽ ಗುಣಿಸೂವೋ ॥ ನಮ್ಮ ದನಿ
ಕುಗ್ಗದ್ದೆ ಬಾರೇಽ ಸಭೆಯಲ್ಲೀ ॥೩॥

ಆರಿರುಳು ಹೇಳಿದರೆ ತಾಳ ಬಾರಿಸಿದಂತೆ
ಸಣ್ಣ ತಮ್ಮಯ್ಯಽ ಮದುವೇಗೇಽ ನಾವೀಗ
ಚೆಂದಕ್ ವಂದ್ ಹಾಡಽ ನುಡಿತೇವೆ ॥೪॥

ಹತ್ತಿರುಳು ಹೇಳೂವೊ ಹತ್ತಿರುಳು ಕೇಳೂವೋ
ಹತ್ತಿರುಳು ಹಾಡಽ ಗುಣಿಸೂವೋಽ ॥ ನಮ್ಮ ದನಿ
ಕುಗ್ಗದ್ದೆ ಬಾರೇಽ ಸಭೆಯಲ್ಲೀ ॥೫॥

---

೧ ಕಂಸಿನಲ್ಲಿದ್ದ ಹಾಡು ಸೇರಿಸಿದ್ದು. ಈ ಉತ್ತರ ದೊರೆಯದೆ ಇದೆ.

೨ ಹೆಣ್ಣಿನ ಕಡೆಯವರು ಸಣ್ಣ ತಂಗಮ್ಮಽ ಎಂದು ಹೇಳುತ್ತಾರೆ.

ಹತ್ತಿರುಳು ಹೇಳಿದರೆ ಗಂಟೆ ಬಾರಿಸಿದಂತೆ
ಬಾಲ ತಮ್ಮಯ್ಯ್ನಾ[೧] ಮದುವೇಗೇಽ ॥ ನಾವೀಗಽ
ಚೆಂದಕ್ ವಂದ್ ಹಾಡಾಽ ನುಡಿತೇವೇ ॥ ೬

ಒಗಟು : ಬಾಗಿಲ ಮುಂದ್ರಣ್ಣ ಕೆರೆ ನೀರುಂಟು ಕೆಸರಿಲ್ಲೆ
ಸೋಗುಗಳುಂಟು ಎಲೆಯಿಲ್ಲೆಽ ॥ ಬೆಡಗೀನಽ
ಜಾಣೆ ಕನ್ನಡವಾಽ ತಿಳಿದ್ದೇಳೇ ॥ ೭

ಉತ್ತರ ; ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾಽ ಶಿವ ಬಽಲ್ಲಽ ॥ ನಾರ್ಯೋರಿಗಿಪ್ಪ
ಕಣ್ಣಲ್ಲವೇನೇ ಹಸೆಯುವಳೇ ? ॥ ೮

ಒಗಟು : ಅಂಗೈಯ ಕೊಟ್ಟರೆ ಮುಂಗಯ್ಯ ನುಂಗುವದು
ಸಿಂಗಳ್ಯನಲ್ಲಽ[೨] ಶಿವ ಬಲ್ಲ ॥ ಬೆಡಗೀನಽ
ಜಾಣೆ ಕನ್ನಡವಾಽ ತಿಳಿದ್ದೇಳೇ ॥ ೯

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾ ಶಿವ ಬಲ್ಲಽ ॥ ನಾರ್ಯೋರ್ ತೊಡುವ
ಕುಪ್ಸಲ್ಲವೇನೇಽ ಹಸೆಯುವಳೇ ? ॥ ೧೦

ಒಗಟು : ನಡುಮಽಽನೆ ವಳಗೆಲ್ಲಾ ಗುಡುಗುಡು ಗುಟ್ಟುವುದು
ಯಂತಾದೋ ಏನೋಽ ಶಿವಬಽಲ್ಲಽ ॥ ಬೆಡಗೀಽನ
ಜಾಣೆ ಕನ್ನಡವಾ ತಿಳಿದ್ದೇಳೇ ೧೧

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇಽನೇ ?
ಪನ್ನಂಗಧರನಾಽಽಽ ಶಿವಬಲ್ಲಽ ॥ ನಾರ್ಯೋರ್ ಬೀಸ್ವ
ಗೋಧಿಕಲ್ಲಲ್ಲವೇನೇಽ ಹಸೆಯುವಳೇಽ ? ೧೨

---

೧ ಹೆಣ್ಣಿನ ಕಡೆಯುವರು ಬಾಲತಂಗಮ್ಮಾ ಎಂದು ಹೇಳುತ್ತಾರೆ.
೨ ಸಿಂಗಳಿಕನಲ್ಲ.

ಒಗಟು : ಮರದೊಳಗೆ ಹುಟ್ಟುವುದು ಪಕ್ಷಿಯುಮು ತಾನಲ್ಲಃ
ನಾಲ್ಕು ಕಾಲುಂಟುಃ ಪಶುವಲ್ಲಃ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ಧೇಽಳೇ ? ॥ ೧೩

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾಽ ಶಿವ ಬಲ್ಲಃ ॥ ನಾರ್ರ್ಯೋರ್ ಕೂರ್ವ[1]
ಮಂಚಲ್ಲವೇಽನೇಽ ಹಸೆಯುವಳೇ ? ॥ ೧೪

ಒಗಟು : ಮರದೊಳಗೆ ಹುಟ್ಟುವದು ಪಕ್ಷಿ ತಾನಲ್ಲಃ
ಮೂರು ಕಣ್ಣುಂಟುಃ ಹರನಲ್ಲ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ಧೇಳೇ ॥ ೧೫

ಉತ್ತರೆ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾಽ ಶಿವ ಬಲ್ಲಃ ॥ ನಾರ್ರ್ಯೋರ ತಿಂಬ
ತೆಂಗಲ್ಲವೇನೇ ಹಸೆಯುವಳೇ ? ೧೬

ಒಗಟು : ಕಚ್ಚಿದರೆ ಕಚ್ಚುವದು ಕಿಚ್ಚಲ್ಲ ಚೇಳಲ್ಲ [2]
ಆಶ್ಚರ್ಯವಲ್ಲಃ ಅರಿದಲ್ಲಃ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ಧೇಳೆ ॥ ೧೭

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾಽ ಶಿವ ಬಲ್ಲಃ ॥ ನಾರ್ರ್ಯೋರ್ ತಿಂಬ
ಮೆಣಸಲ್ಲವೇನೇ ಹಸೆಯುವಳೇಽ? ॥ ೧೮
(ಮೆಣಸಿನ ಕಾಯಲ್ಲವೇನೇ ಹಸೆಯುವಳೇ? ಎಂದೂ ಇದೆ.)

ಒಗಟು : ಪುಟ್ಟ ಬಾವಿಯು ಮೇಲೆ ಬೆಳಿಗಲ್ಲ ಕಟ್ಟೇಯು
ಯೆತ್ತೀದ ನೀರುಃ ತೆರವಲ್ಲಃ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ಧೇಳೇ ೧೯

---

[1] ರಾಯರ್ ಮನಗ್ವಾ

[2] ಕಿಚ್ಚು ತಾನಲ್ಲ

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಽ ॥ ನಾರಿಯರ
ಬಾಯಲ್ಲವೇನೇ ಹಸೆಯುವಳೇ? ॥ ೨೦

ಒಗಟು : ಪಸಿಯು ಹಸಿಯಾ ಬಳ್ಳಿ ಮಸಿಯು ವರ್ಗಿದ ಬಳ್ಳಿ
ಕುಶಲಾಽದ ಬಳ್ಳೀಽ ಯೆಲೆಯಿಲ್ಲೇ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ಹೇಳೇ ॥ ೨೧

ಉತ್ತರ : ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಽ ॥[೧]ನಾರ್ಯೋರ್ ಕಟ್ವ
ತುರುಬಲ್ಲವೇನೇ ಹಸೆಯುವಳೇ? ॥ ೨೨

ಒಗಟು : ಹಶ್ಯ ಹಶ್ಯಾ ಬಳ್ಳಿ ಮಶ್ಯಾವರ್ಣದ ಬಳ್ಳಿ
ಕುಶಲಾಽದ ಬಳ್ಳೀ ಯೆಲೆಯಿಲ್ಲೇ ॥ ಬೆಡಗೀನ
ನಾರಿ ಕನ್ನಡವಾಽ ತಿಳಿದ್ಹೇಳೇ ॥ ೨೩

ಉತ್ತರ : ಕನ್ನಡವನಾಡಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಽ ॥ ಅಂತರದ
ಬಳ್ಯಲ್ಲವೇನೇ ಹಸೆಯುವಳೇ ॥ ೨೪

ಒಗಟು : ಹಾರ್ವಾಲೆ[೨] ಹಕ್ಯಲ್ಲ ಪೋಡ್ವಾಲೆ ಮೃಗವಲ್ಲ
ನಾಲ್ಕು ಕಾಲುಂಟು ನೆಡೆಯಿಲ್ಲ ॥ ಬೆಡಗೀನ
ನಾರೀ ಕನ್ನಡವಾಽ ತಿಳಿದ್ಹೇಳೇ ॥ ೨೫

ಉತ್ತರ : ಕನ್ನಡವನಾಡಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಽ ॥ ರಾಯರ್ ಮನ್ಗ ವಾಽ[೩]
ಮಂಚಲ್ಲವೇನೇ ಹಶೆಯುವಳೇ? ೨೬

---

[೧] ನಾರ್ಯೋರ । ಮಂಡ್ಯಲ್ಲವೇನೇ ಹಸೆಯುವಳೇ?

[೨] ಹಾರುವಲೆ ಹಕ್ಯಲ್ಲ ಪೋಡುವಲೆ ಮೃಗವಲ್ಲ ನಾಕು ಕಾಲುಂಟು ನಡೆಯಿಲ್ಲ...

[೩] ನಾರಿಯೊರ್ ಕೊಡ್ವ

ಒಗಟು : ಕೆರಿಯಾ ಯೇರಿಯ ಮೇಲೆ ಬರಿದ ದಿಬ್ಬಣ ಬಂದೋ
ಹಿಟ್ಟಿಲ್ಲದ ರೊಟ್ಟೀಽ ಸುಡುವಾಽರೋ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇ ॥ ॥೨೭॥

ಉತ್ತರ : ಕನ್ನಡವ ಹೇಳುವಲೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲ ॥ ನೀರಲ್ ಕಾಣ್ವ
ಚಂದ್ರಲ್ಲವೇನೇ[೧] ಹಸೆಯುವಳೇ? ೨೮

ಇದರ ಇನ್ನೊಂದು ಪಾಠ ;

ಕನ್ನಡವ ಹೇಳುವಲೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ಶಿವಬಲ್ಲಾ ॥ ಜೇನೀನ
ರಟ್ಟ್ಯಲ್ಲವೇನೇಽ ಹಸೆಯುವಳೇ? ॥ ೨೯

ಮುಳ್ಳಲ್ಲೆ ಹುಟ್ಟುವದು ಮುಳ್ಳಲ್ಲೆ ಬೆಳೆಯುವದು
ಮುಳ್ಳು ತಾಗಿದರೇಽ ಕೆಡುವದುಽ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇಽ ॥ ೩೦

ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಾ ॥ ನಾರಿಯೋರ್ ಮುಡಿವ
ಕೇದಿಗೆಯಲ್ಲವೇನೇ ಹಸೆಯುವಳೇ? ೩೧

ನೀರಲ್ಲೆ ಹುಟ್ಟುವದು ನೀರಲ್ಲೆ ಬೆಳೆಯುವದು
ನೀರು ತಾಗಿದರೇಽ ಕೆಡುವಽದೂ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇ ॥ ೩೨

ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾಽ ಶಿವಬಲ್ಲಽ ॥ ನಾರಿಯೋರ್ ತಿಂಬ
ಉಪ್ಪಲ್ಲವೇನೇ ಹಸೆಯುವಳೇ? ೩೩

---

೧ ಕಡು ಜಾಣೇ ಎಂದೂ ಇದೆ.

ಹುಟ್ಟುವಾಗ ಬೆಳಿದಾದೊ ಬೆಳೆವಾಗ ಕೆಂಪಾದೊ
ಮುಪ್ಪಿನ ಕಾಲದಲಿ ಕರಿದಾದೊ ॥ ಬೆಡಗೀನ
ಜಾಣೆ ಕೆನ್ನಡವಾs ತಿಳಿದ್ಹೇಳೇ ॥ ೩೪

ಕನ್ನಡವ ಹೇಳುವಲಿ ಇನ್ನು ಸೋಜಿಗವೇನೇ ?
ಪನ್ನಂಗಧರನಾs ಶಿವ ಬಲ್ಲಾ ॥ ನೀರೀಲ
ಹಣ್ಣಲ್ಲವೇನೇ ಹಸೆಯುವಳೇ? ॥ ೩೫

ನೆಲದಲ್ಲಿ ಹುಟ್ಟುವದು ನೆಲದಲ್ಲಿ ಬೆಳೆಯುವದು
ನೆಲವು ತಾಗಿದರೆ ಕೆಡುವದು ॥ ಬೆಡಗೀನ
ಜಾಣೆ ಕನ್ನಡವಾs ತಿಳಿದ್ಹೇಳೇ ॥ ೩೬

ನೆಲದಲ್ಲಿ ಹುಟ್ಟುವದು ನೆಲದಲ್ಲಿ ಬೆಳೆಯುವದು
ನೆಲವು ತಾಗಿದರೆ ಕೆಡುವದು ॥ ಬೇವಿನ
ಸಪ್ಪಲ್ಲವೇನೇ ಹಸೆಯುವಳೇ? ॥ ೩೭

ಕಾನಲಿ ಹುಟ್ಟಿತು ಕಡು ಚೆಂಡಾಡಿತು[೧]
ಒಡತಿ ಕಂಡರೆ ನೆಗ್ ನೆಗ್ಗು ಹಾರಿತು ॥ ಬೆಡಗೀಸ
ಜಾಣೆ ಕನ್ನಡವಾ ತಿಳಿದ್ಹೇಳೇ ॥ ೩೮

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾs ಶಿವ ಬಲ್ಲಾ ॥ ನಾರ್ಯೋತ್ ಕಡೆವ
ಕಡಗಲಲ್ಲವೇನೇ ಹಸೆಯುವಳೇ? ೩೯

ಮಣ್ಣೊಳಗೆ ಹುಟ್ಟುವದು ಮಣ್ಣೊಳಗೆ ಬೆಳೆಯುವದು
ಮಣ್ಣು ತಾಗಿದರೇ ಕೆಡುವಾದೂ ॥ ಬೆಡಗೀನ
ಜಾಣೆ ಕನ್ನಡವಾs ತಿಳಿದ್ಹೇಳೇ ॥ ೪೦

---

೧ ಇದು ಒಗಟೊಂದರ ಆಧಾರದಿಂದ ಈ ರೂಪದಲ್ಲಿ ಬರೆದದ್ದು ಕಡೆಗೋಲಿನ ಕುರಿತು: ನಿರೂಪಕಿ ಕನ್ನಡ ಸೋಬಾನೆ ಹಾಡಿತ್ತು ಎಂದದೂ ಮರೆತಿದ್ದರು.

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ನಾವುಂಬ
ಅನ್ನಲ್ಲವೇನೇ ಹಸೆಯುವಳೇ? ॥ ೪೧

ವರೆಮೇಲೆ ಹುಟ್ಟುವದು ದರೆಮೇಲೆ ಬೆಳೆಯುವದು
ರಾಯರ ಕೊರಳೀಗೇ ಹೋಗ್ವಾದು ॥ ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೇ ॥ ೪೨

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ರುದ್ರಾಕ್ಷಿ
ಕಾಯಲ್ಲವೇನೇ ಹಸೆಯುವಳೇ? ೪೩

ಮರದಲ್ಲಿ ಹುಟ್ಟುವದು ಮರದಲ್ಲಿ ಬೆಳೆಯುವದು
ಮಾರಾಯರ ಕೂಡೇ ಸೇರಮಾತು ॥ ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೇ ೪೪

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವಬಲ್ಲಾ ॥ ಜಾಣರಳ
ಕೊಳಗಲ್ಲವೇನೇ ಹಸೆಯುವಳೇ? ೪೫

ನೀರಿಲ್ಲದ್ ಕೆರೆಯಲ್ಲಿ ಬೇರಿಲ್ಲದ ಶಶಿಹುಟ್ಟೆ
ನಾರಿಲ್ಲದ್ ದಂಡೇ ಮಡುವಾರೋ ॥ ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೇ ೪೬

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲ ॥ ಬೆಡಗೀನ
ಶೀತೆದಂಡ್ಯಲ್ಲವೇನೇ ಹಸೆಯುವಳೇ? ೪೭

ಗೋಡೆಯು ಮೇಲೊಂದು ಪಾರಿವಾಳದ ಹಕ್ಕಿ[೧]

---

೧ ನಡುಮನೆಯೊಳಗೆಲ್ಲ ಪಾರಿವಾಳದ ಹಕ್ಕಿ ॥ ನಾಲಿಗೆಯಿಂದ್ಹಾ ನುಡಿಯಿಲ್ಲೆ

ನಾಲೀಗೆಯುಂಟು ನುಡಿಯಿಲ್ಲ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೀಳೇ ೨೮

ನಡುಮನೆಯೊಳಗೆಲ್ಲ ಪಾರಿವಾಳದ ಹಕ್ಕಿ
ನಾಲಿಗೆಯಿದ್ದೂ ನುಡಿಯಿಲ್ಲೆ ॥ ಸಂಜೀಯ
ದೀಪಲ್ಲವೇನೇ ಹಸೆಯುವಳೇ? ೨೯

ಹಾದಿಯಲ್ ಹುಟ್ಟುವದು ಹಾದಿಯಲ್ ಬೆಳೆಯುವದು
ಹಾದಿಮೇಲ್ ಹೋಪವ್ರ ಶರಗ್ಹಿಡಿದು ಎಳೆಯುವದು
ಜಾಣೆ ಕನ್ನಡವಾಽ ತಿಳಿದ್ದೀಳೇ ॥ ೩೦

ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾಽ ಶಿವ ಬಲ್ಲಾ ॥ ನಾಚ್ಕೆಽ
ಮುಳ್ಳಲ್ಲವೇನೇ ಹಸೆಯುವಳೇ? ೩೧

ಮರದೊಳಗೆ ಮರ ಹುಟ್ಟಿ ಮರಚಕ್ರ ಕಾಯಾಗಿ
ತಿನಬಾರದ್ಹಣ್ಣೂ ಬಲು ರುಽಚಿ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೀಳೇ ೩೨

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ಹಶಿಮಾಣೆಯು
ತಿಂಬೂವರೇನೇ ಹಸೆಯುವಳೇಽ? ೩೩

ರೆಕ್ಕ್ಯುಂಟು ಹಾಽರ್‌ಲಾಽರೆ ಕುಕ್ಕ್ಯುಂಟು ಕೂಗ್‌ಲಾರೆ[೧]
ಕಚ್‌ದವ್ರೀಗೆ ತಾನೇ ಕಚ್‌ಲಾಽರೇ ॥ ಯನ್ನಽ
ಕಚದವ್ರಿಗ್ ಉರಿಯಾಽ ಬಿಡುವೇನೇ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೀಳೇ ॥ ೩೪

---

೧ ಹಾರೂಲೆ ಹಕ್ಕಲ್ಲ ಪೋಡೂಲೆ ನವಿಲಲ್ಲ

ಕನ್ನಡವ ಹೇಳ್ವಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ನಾರ್ರ್ಯೋರ್ ತಿಂಬ
ಶುಂಟ್ಯಲ್ಲವೇನೇ[೧] ಹಸೆಯುವಳೇ ೫೫

ಯಾರು ಹತ್ತದ ಮರವ ನಾ ಹತ್ತಿ ಬರುವೇನೇ
ತನ್ನಾರೆ ಇಳಿದೂ ಬರುವೇನೇ ॥ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೆ ॥ ೫೬

ಕನ್ನಡವ ಹೇಳ್ವಲಿಕೆ ಇನ್ನು ಸೋಜಿಗವೇನೇ ?
ಪನ್ನಂಗಧರನಾ ಶಿವಬಲ್ಲಾ ॥ ರುಕ್ಮಿಣಿಗ್ ಹಚ್ಚಿದಾ
ಚವ್ಳ್ಯಲ್ಲವೇನೇ ಹಸೆಯುವಳೇ? ೫೭

ಅಪ್ಪ ತಂದಾ ಯೆಮ್ಮೆ ಕಚ್ಚಿದರೆ ಕರೆವಾದು
ತಾನಾಗಿ ಹಾಲು ಇಳಿವಾದೂ ॥ ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೇ ೫೮

ಕನ್ನಡವ ಹೇಳ್ವಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ನಾರ್ರ್ಯೋರ್ ತಿಂಬ
ಕಬ್ಬಲ್ಲವೇನೇ ಹಸೆಯುವಳೇ ೫೯

ನಾನು ಇಟ್ಟಾ ವಸ್ತು ನನಗೆ ಕಾಣಾ ಬಾರ
ಮತ್ತೊಬ್ಬರಿಗ್ ಕಂಡೂ ಅತಿ ಚೋದ್ಯ ॥ ಬೆಡಗೀನ
ಜಾಣೆ ಕನ್ನಡವಾ ತೆಳಿದ್ ಹೇಳೇ ॥ ೬೦

ಕನ್ನಡವ ಕೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾ ಶಿವಬಲ್ಲ ॥ ನಾರ್ರ್ಯೋರಿಡುವ
ಕೂಕ್ಮಲ್ಲವೇನೇ ಹಸೆಯುವಳೇ ? ೬೧

ಅಂಗಡಿಯಲಿ ಬರುವದು ಜಂಬೆ ನೇರಿಲ ಹಣ್ಣು
ಕೊಂಬಾವರುಂಟು ತಿಂಬವರಿಲ್ಲ ॥ ಬೆಡಗೀನ
ಜಾಣೆ ಕನ್ನಡವಾ ತಿಳಿದ್ ಹೇಳೇ ॥ ೬೨

---

೧ ಶುಂಠಿಯ ಕೊಂಬಲ್ಲವೇನೇ ಹಸೆಯುವಳೇ ?

ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ ?
ಪನ್ನಂಗಧರನಾಽ ಶಿವ ಬಲ್ಲಾ ॥ ನಾರಿಯೊರ್ ಬಳಸ್ಸ
ಜಾಜಿನ ಕಲ್ಲಲ್ಲವೇನೇ ಪಸೆಯುವಳೇ? ೬೩

(ಇಲ್ಲಿ ಕೊನೆಯು ಸಾಲಿನ ಕೆಲವು ಅಕ್ಷರಗಳ ಮೊದಲು ಬರೆದು
ಕೊಂಡಿದ್ದ ಹಾಳೆಯಿಂದ ಹರಿದು ಹೋಗಿವೆ,
ತಾತ್ಪೂರ್ತಿಕವಾಗಿ ಜಾಜಿನ ಕಲ್ಲಲ್ಲವೇನೇ ಎಂದು ಸೇರಿಸಿದೆ.)

ಕರಿದು ಕರಿದೂ ಎಂದು ಜರತ್ನಾನೆ ಮಾಡುವಿರೀ
ಕರಿಯು ಮಂಡೆಯೂ ಕಪ್ಪುಂಟು ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇ ॥ ೬೪

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾಽ ಶಿವ ಬಲ್ಲ ॥ ನಾರ್ಯೋರ್ ಕೊಳ್ಳನ
ಕರಿಯು ಮಣಿಯಲ್ಲೇನೇ ಹಸೆಯುವಳೇ?॥ ೬೫

ನಡುಮನೇಯೊಳಗೆಲ್ಲ ಪಾರಿವಾಳದ ಹಕ್ಕಿ
ನಾಲಿಽಗೆಯಿದ್ದು ನುಡಿಯಿಲ್ಲೇ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇ ೬೬

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ
ಪನ್ನಂಗಧರನಾಽ ಶಿವ ಬಲ್ಲ ॥ ಸಂಜೀಽಯು
ದೀಪಲ್ಲವೇನೇ ಹಸೆಯುವಳೇ? ೬೭

ಗೋಡೇಯು ಮೇಲೊಂದು ಪಾರಿವಾಳದ ಹಕ್ಕಿ
ನಾಲೀಗೆಯುಂಟುಽ ನುಡಿಯಿಲ್ಲ ॥ ಬೆಡಗೀನ
ಜಾಣೆ ಕನ್ನಡವಾಽ ತಿಳಿದ್ದೋಳೇ ೬೮
ಕನ್ನಡವ ಹೇಳಲಿಕೆ ಇನ್ನು ಚೋದ್ಯಗಳೇನೇ?
ಪನ್ನಂಗಧರನಾಽ ಶಿವ ಬಲ್ಲ ॥ ಗೋಡೇಽಯು
ಶೇಡ್ಯಲ್ಲವೇನೇಽ ಹಸೆಯುವಳೇ? ೬೯

(ಹಾಲಗುಂಬಳಕಾಯಿ । ಚೊಟ್ಟು ಮೇಲಿರುವ ಕಾಯಿ
ಕಂಚುಕವ ಬಟ್ಟೆಯಲಿ ಕಟ್ಟಿನೊಳಗಿರುವ ಕಾಯಿ
ಇದು ಮುಂದಿನ ಒಗಟಿನ ಪದ್ಯಕ್ಕೆ ಒಂದು ಪಾಠಾಂತರ
ಎಂದು ತಿಳಿಯಬಹುದು.)

ಹಾಲಗುಂಬಳಕಾಯಿ ಮೇಲೆ ಮುಚ್ಚಳ ಕಾಯಿ
ಮಕ್ಕಳೂಟದ ಕಾಯಿ ದೊಡ್ಡೊರಾಟದ ಕಾಯಿ ॥ ಬೆಡಗೀಸ
ಜಾಣೆ ಕನ್ನಡವಾs ತಿಳಿದ್ದೇಳೆ ॥೧ ೭೦

ಕನ್ನಡವ ಹೇಳುವಲೆ ಇನ್ನು ಚೋದ್ಯಗಳೇನೇ ?
ಪನ್ನಂಗಧರನಾs ಶಿವ ಬಲ್ಲ ॥ (ಅತ್ತಿಗೆ)
ನಿನಗಿಲ್ಲವೇನೇ ಹಸೆಯವಳೇ? ೭೧

ಚೆಂದ ಚೆಂದ ಮರಕ್ಕೆಲ್ಲ ನಂದನದ ಶಶಿ ಹುಟ್ಟಿ
ಅದ್ಕೆ ಸಾವಿರದಾs ಮಿಡಿಯಾದೋs ॥ ಅತ್ತಿಗೆ,
ಬಲ್ಲಾದ ಜಾಣೇss ಬಿಡಿಸ್ದೇಳೇ ॥ ೭೨

ಕನ್ನಡಾಡಲಿಕೆ ಇನ್ನು ಸೋಜಿಗವೇನೇ?
ಅದ್ಕೆ ಸಾವಿರದಾ ಮಿಡಿಯಾದೊ ರುಗುಮಿಣಿ ।
ಅಡ್ಕ್ಯಲ್ಲವೇನೇ ಕಡು ಜಾಣೇ? ॥ ೭೩

(ದಿ. ಶೇಷಿ ಗುನಗ ಹೇಳಿದ ಪದ್ಯಗಳು ಇವೆರಡು.)

---

೧ ಈ ಒಗಟಿಗೆ ಪಾಠಾಂತರ ದಿ. ಶೇಷಿ ವೆಂಕಪ್ಪ ಗುನಗ ಹಳಕಾರು ಇವರು ಸಂಗ್ರಾಹಕನಿಗೆ ಹೇಳಿದ್ದು :

ಹಾಲಗುಂಬಳ ಕಾಯಿ ಜೋಡೀನಲಿರುವದು
ಬಾಲsರಿಗ್ಯೆಲ್ಲs ಅತಿ ಪ್ರೀತಿ ॥ ಅತ್ತಿಗೆ,
ಬಲ್ಲಾದ ಜಾಣೇ, ಬಿಡುಸ್ದೇಳೇ
ಕನ್ನಡಾಡಲಿಕೇs ಇನ್ನು ಸೋಜಿಗವೇನೇ?
ಪನ್ನಂಗಧರನಾs ಅರಸೇಯು ॥ ರುಗುಮಿಣಿ
ನಿನಗಿಲ್ಲವೇನೇ ಕಡು ಜಾಣೇ ॥

ಹಶ್ಯ ಹಶ್ಯಾ ಬಳ್ಳಿ ಮಶ್ಯಾವರ್ಣದ ಬಳ್ಳಿ
ಕುಶಲಾಃದ ಬಳ್ಳೀs ಯೆಲೆಯಿಲ್ಲೇ ॥ ಬೆಡಗಿನ
ನಾರಿ ಕನ್ನಡವಾs ತಿಳಿದ್ಹೇಳೇ ? ೭೪

ಕನ್ನಡವನಾಡಲಿಕೆ ಇನ್ನೂs ಸೋಜಿಗವೇನೇ?
ಪನ್ನಂಗಧರನಾs ಶಿವ ಬsಲ್ಲs ॥ ಅಂತರದ
ಬಳ್ಳಲ್ಲವೇನೇ ಹಶೆಯುವಳೇ ॥ ೭೫

ನಡ್ಮನೆಯೊಳಗೆಲ್ಲ ಗಡಗsಡ ಗುಟ್ಟುವದು
ಯಂತಾದೊ ಯೇನೋ ಶಿವ ಬsಲ್ಲs ॥ ಬೆಡಗಿನ
ನಾsರಿ ಕನ್ನಡವಾs ತಿಳಿದ್ಹೇಳೇ ॥ ೭೬

ಕನ್ನಡವನಾಡಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾs ಶಿವ ಬಲ್ಲs ॥ ಗೋದಿಯು
ಕಲ್ಲಲ್ಲವೇನೇ ಹಸೆಯುವಳೇ? ॥ ೭೭

ಮಡದೀಯು ಕಯ್ಯಲಿ ಅಡವಿಗ್ಹೋಗುತಿತ್ತು
ಬಡಿದಾsಟ ಮಾಡೀs ಬರುತಿತ್ತು ॥ ಬೆಡಗೀನ
ಜಾಣೆ ಕನ್ನಡವಾs ತಿಳಿದ್ಹೇಳೇs ॥ ೭೮

ಕನ್ನಡವ ಹೇಳಲಿಕೆ ಇನ್ನು ಚೋದಿಗವೇನೇ?
ಪನ್ನಂಗಧರನಾs ಶಿವ ಬಲ್ಲಾ ॥ ನಾರ್ಯೋರ್ ಕಡಿವಾs
ಕತ್ಯಲ್ಲವೇನೇ ಹಸೆಯುವಳೇ ॥ ೭೯

---

೨ ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲ । ಸ್ತ್ರೀಯರಿಗಿರುವ
ಎರಡಲ್ಲವೇನೇ ಹಸೆಯುವಳೇ

ಇನ್ನೊಂದು ಪಾಠದಲ್ಲಿ ಸ್ಪಷ್ಟವಾಗಿ ಸ್ತ್ರೀಯರಿಗಿರುವ
ಮೊಲೆಯಲ್ಲವೇನೇ ಹಸೆಯುವಳೇ ಎಂದು ಹೇಳಲಾಗಿದೆ.

ನಾರ್ಯೋರ । ಮಂಡ್ಯಲ್ಲವೇನೇ ಹಸೆಯುವಳೇ?
ಇನ್ನೊಂದು ಪಾಠದಲ್ಲಿ ನಾರಿಯೊರ್ ಕಟ್ಟುವ
ಮಂಡ್ಯಲ್ಲವೇನೇ ಹಸೆಯುವಳೇ? ಎಂದು ಉಂಟು

ಒಕ್ಕಾಲಲ್ ನಿಲ್ವದು ಮಂಟಪ ಸುತ್ವದು
ತಂಗಿ ಮುಕ್ಕಳ ಅಂಗಳಕೆ ಕರೆವದು
ನಾರೀ ನೀ ಬಲ್ಲಾದರ್ಹೇಳೇ ಇದರರ್ಥವ
ಜಾಣೇ ನೀ ತಿಳಿದಾರ್ ಹೇಳೇ ॥ ೮೦

ಒಕ್ಕಾಲಲ್ ನಿಲ್ವದು ಮಂಟಪ ಸುತ್ವದು
ತಂಗಿ ಮುಕ್ಕಳ ಅಂಗಳಕೆ ಕರೆವದು
ಕೋಳಿಗಳಲ್ಲವೇನೇ? ಜಾಣರ ಜಾಣೆ,
ಕೋಳಿಗಳಲ್ಲವೇನೇ? ॥ ೮೧

ಬೆಳಿಯು ಪತ್ರಲವುಟ್ಟು ಹನ್ನೆರಡು ನೆರಿಹೊಯ್ದು
ಗಂಡನಿಲ್ಲಾದ್ದಕ್ಕೆ ಬಸುರಾಯಿತೆಂಬದು ॥
ನಾರಿ ನೀ ತಿಳಿದರ್ಹೇಳೇ ಇದರರ್ಥವಾ ।
ಜಾಣೆ ನೀ ತಿಳಿದಾರ್ ಹೇಳೇ ॥ ೮೨

ಬೆಳಿಯು ಪತ್ರಲವುಟ್ಟು ಹನ್ನೆರಡು ನೆರಿಹೊಯ್ದು
ಗಂಡನಿಲ್ಲಾದ್ದಕ್ಕೆ ಬಸುರಾಯಿತೆಂಬದು
ಕೇದಿಗೆ ಗಿರಿಯಲ್ಲವೇನೇ? ಜಾಣರ ಜಾಣೆ
ಕೇದಿಗೆ ಗಿರಿಯಲ್ಲೇನೇ? ॥ ೮೩

ಅರಿಶ್ನಿ ಪತ್ತಳವುಟ್ಟು ಅರವತ್ತು ನೆರಿಹೊಯ್ದು
ಅರಸನಿಲ್ಲಾದ್ದಕ್ಕೆ ಬಸುರಾಯಿತೆಂಬದು
ನಾರೀ ನೀ ಬಲ್ಲಾರ್ಹೇಳೇ ಇದರರ್ಥವ
ಜಾಣೇ, ನೀ ತಿಳಿದಾರ್ಹೇಳೇ ॥ ೮೪

ಅರಶ್ನಿ ಪತ್ತಳವುಟ್ಟು ಅರವತ್ತು ನೆರಿಹೊಯ್ದು
ಅರಸನಿಲ್ಲಾದ್ದಕ್ಕೆ ಬಸುರಾಯಿತೆಂಬದು
ಶಾವಂತಿಗೆ ಹೂಗಲ್ಲೇನೇ? ಜಾಣರ ಜಾಣೆ,
ಶಾವಂತಿಗೆ ಹೂಗಲ್ಲೇನೇ? ೮೫

ಕುಮಟಿ ಪೇಟೆಯಲ್ಲಿ ತಗಟಿಂದ ತೂಗುವದಲ್ಲ
ಅದು ಇದ್ದನಕ ನಿನಗೆ ಸರಿಯಲ್ಲ ಅತ್ತಿಗೆ
ಬಲ್ಲದ ಜಾಣೆ ಬಿಡುಸೇಳೇ ೪೬

ಕನ್ನಡಾಡಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಅರಸೇಯು ॥ ರುಗುಮೀಣಿ
ಎಣ್ಯಲ್ಲವೇನೇ ಕಡುಜಾಣೆ ೪೭

ಬೆಂದ ಬೆಂದ ಮರಕ್ಯೆಲ್ಲ ನಂದನದ ಶಶಿಹುಟ್ಟಿ
ಅದ್ಕೆ ಸಾವಿರದ ಮಿಡಿಯಾದೊ ॥ ಅತ್ತಿಗೆ
ಬಲ್ಲಾದ ಜಾಣೇ ಬಿಡಿಸ್ಹೇಳೇ ॥ ೪೮

ಬೆಂದ ಬೆಂದ ಮರಕ್ಯೆಲ್ಲ ನಂದನದ ಶಶಿ ಹುಟ್ಟಿ
ಅದ್ಕೆ ಸಾವಿರದ ಮಿಡಿಯಾದೊ ॥ ಅತ್ತಿಗೆ,
ಅಪ್ಕ್ಯಲ್ಲವೇನೇ ಕಡುಜಾಣೇ? ॥ ೪೯

ಒಗಟು : ಅಂಗಯ್ಯ ಕೊಟ್ಟರೇ ಮುಂಗಯ್ಯ ನುಂಗುವದು
ಸಿಂಗರ್ಕನಲ್ಲಾ ಸಿವ ಬಲ್ಲಾ[೧] ॥ ಬೆಡಗೀನಾ
ಜಾಣೆ ಕನ್ನಡವಾ ತಿಳಿದ್ಹೇಳೇ ॥ ೬೦

ಉತ್ತರ : ಕನ್ನಡ ಹೇಳ್ವಲ್ಲೀ ಬಾಳ ಸೋಜಿಗವಲ್ಲ
ಪನ್ನಂಗಧರನಾ ಸಿವ ಬಲ್ಲ ನಾರ್ಯವ್ರಿಡುವಾ[೨]
ಪಲ್ಕಲ್ಲವೇನೇ ಹಸಿಯುವಳೇ ? ೬೧

ಮರದಲ್ಲಿ ಹುಟ್ಟುವದು ಮರದಲ್ಲಿ ಬೆಳೆಯುವದು
ಮಾರಾಯರ ಕೂಡೇ ಸೆರಮಾತು ॥ ಬೆಡಗೀನಾ
ಜಾಣೇ ಕನ್ನಡವಾ ತೆಳದ್ಹೇಳು ॥ ೬೨

---

೧ ಸಿಂಗಳಿಕನಲ್ಲ ಶಿವ ಬಲ್ಲಾ ಎಂದೊಂದು ಪಾಠದಲ್ಲಿದೆ.
ಇನ್ನೊಂದರಲ್ಲಿ ಬಂಗಾರವಲ್ಲ ಬಳೆಯಲ್ಲ ಎಂದಿದೆ.

೨ ನಾರಿಯೊರ್ ತೊಡುವಾ ಕುಪ್ಪಸಲ್ಲವೇನೇ ಹಸೆಯುವಳೇ

ಕನ್ನಽಡ ಹೇಳ್ವಲ್ಲೀ ಬಾಽಳ ಸೋಜಿಗವಲ್ಲ
ಪನ್ನಂಗಧರನಾ ಸಿವ ಬಲ್ಲಾ ॥ ಜಾಣರಳೂ
ಕೊಳಗಲ್ಲವೇನೇ ಹಸಿಯುವಳೇ ೯೩

ಹಸುರಿ ಪತ್ತ್ಲನುಟ್ಟು, ಅರವತ್ತೂ ನೆರಿ ಹೊಯ್ದು
ಪುರುಷಾನಿಲ್ಲಾದಾಕೆ ತಾ, ಬಸುರ್ಯಂದಾಳೇ
ಜಾಣೇ ನೀ ಬಲ್ಲಾದಾರ್ ಹೇಳೇ ॥ ಇದರರ್ಥವಾ
ಪೋರೀ ನೀ ತಿಳಿದಾರ್ ಹೇಳೇ ॥ ೯೪

ಕನ್ನಡವ ಹೇಳಲಿಕೆ ಇನ್ನು ಸೋಜಿಗವೇನೇ?
ಪನ್ನಂಗಧರನಾ ಶಿವ ಬಲ್ಲಾ ॥ ನಾರ್ಯವರ್ ಸೂಡ್ವಾ
ಗೊಂಡೆ ಹೂಗಲ್ಲವೇನೇ ಹಸೆಯುವಳೇ ॥ ೯೫

೨ ಬಲ್ಲಾದರ್ಬ್ಬೀಳೀ ಅರತಾವಾ

ಪಶುಪತೀ ಯೆಲಿಯಾಯ್ತೋ ಪನ್ನೀರಿಲ ಗೆಂಟಾದೋ
ಮುತ್ತೂ ಕೂತಂತೇಽ ಕೂತಾದೋ ॥ ದಂಬಲುದಾಡಾ
ಬಲ್ಲದ ಜಾಣೆ ಹೇಳೀ ಪದುನಾಽವಾಽ
ಬಲ್ಲಾದರ್ಬ್ಬೀಳೀ ಅರುತಾವಾಽ ೯೬

ಅಂತಂತಾ ಹಾಡಾ ಹನ್ನೈಡಾ ನಾ ಬಲ್ಲೇ
ಪನ್ನಂಗಲು ಶಿವನೇ ಪದುನವೇ ॥ ನಿ ಹಂಬುಲ್ಬಾಡಾ
ಮೆಣಸಿನ ಕಾಲಲುದೇಽ ಅರತಾಽವೇಽ ೯೭

ಬೆಂದೂ ಮಣ್ಣಿನ ಮೇನೇ ಬೇವೀನಾ ಗಿಡು ಹುಟ್ಟೇಽ
ಯೆಲಿಗೇಽ ಸಾಽವಿರದಾಽ ಮಿಡಿ ಬಿದ್ದೀ । ದಂಬಲುದ್ಬಾಡಾಽ
ಬಲ್ಲಾದರ್ಬ್ಬೀಳೀಽ ಲರುತಾಽವಾಽ ॥ ೯೮

ಅಂತಂತಾಽ ಹಾಡೂಽ ಹನ್ನೈಡೂಽ ನಾಽ ಬಲ್ಲೇಽ
ಪನ್ನಂಗಲು ಶಿವನೇಽ ಪದುನವೇಽ ॥ ನ ಹಂಬಲುದ್ದಾಡಾಽ
ತೊಂಡೀಽ ಮಿಡಿಯಲುದೇಽ ಅರುತಾಽದೋಽ ॥ ೯೯

ಕರಿಯ ಕಂಬುಳಿ ಜಾಣೆ ಕರೆದರೆ ಮಾತನಾಡಾ
ಹಂಗಾರಾದ್ಹೊಳಿಯಾಽ ಸರದಾರಾ ಯಲನಾರೀ
ಬಲ್ಲಾದರ್ ಹೇಳೀ ಅರುತಾವಾಽ ೧೦೦

ಅಂತಂತಾ ಹಾಡಾ ಹನ್ನೈಡಾ ನಾಽ ಬಲ್ಲೇಽ
ಹಂಗಾರದ್ಹೊಳಿಯಾಽ ಸರದಾರಾ ಯಲನಾರೀ
ಮಣಕನ ಮರಿಯಲದೇ ಅರತಲ್ಲಾ ೧೦೧

೩. (ಅ) ಜಾಣೇ ನೀ ಬಲ್ಲಾದರ್ಹೇಳೀ

ಊರ ಮುಂದ್ಹೊಂದೂ ದೇವಾಂಗದ ಗಿಡ ಹುಟ್ಟಿ,
ನಾನಾ ಜಾತ್ಯೋರೆಲ್ಲ ಬಂದೀ ನೋಡ್ವಂತಽದ್ಹೂ
ನಾರೀ ನೀ ಬಲ್ಲಾಡರ್ ಹೇಳೀ ॥ ಬೆಡಗೀನ
ಜಾಣೇ ನೀ ಬಲ್ಲಾದರ್ ಹೇಳೀ ॥ ೧೦೨
(ನೀ ಬಲ್ಲಾದಽರ್ ಬಿಡುಸ್ ಹೇಳೂ)

ಹುತ್ತಿನೊಳಗ್ ಹುಟ್ಟ್ಯಽದೂ ಹುತ್ತಿನೊಳಗೆ ಬೆಳವಽದು
ಮೊಗ ಬಾಯ್ ಮುಚ್ಚೀರುಗ[1] ಬೆರಳಿಗ ಮಾತಾಡ್ವಽದು
ನಾರೀ ನೀ ಬಲ್ಲಾದರ್ಹೇಳೀ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೀ ॥ ೧೦೩

---

೧ ಮೂಗು ಬಾಯ್ ಮುಚ್ಚಿದರೆ ಬೆರಳು ಮಾತಾಡ್ವುದು

ತೋಟದೊಳಗ್ ಹುಟ್ವದು ತೋಟದೊಳಗೆ ಬೆಳವದು
ರಾಯರ ಕೊಳ್ಳೀಗೆ ಬರ್‍ವಂತದು
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ೧೦೪

ಯೆರಡ್ ಕಾಲಲಿರವದು ನಂಗಳಲಿಡವದು
ತಂಗಿಯು ಮಕ್ಕಳು ಬಾರೆಂದು ಕರೆವದು
(ತಂಗೀ ಮಕ್ಕಳ ಅಂಗಳಕೆ ಕರೆವದು)
ನಾರೀ ನೀ ಬಲ್ಲಾದರ್ ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ ಹೇಳೇ ॥ ೧೦೫

ಬೂಮೀಲಿ ಹುಟ್ವದು ಬೂಮಿಲಿ ಬೆಳವದು
ಬೂಮ್ ಬೂಮಿಯೆಲ್ಲ ಪರಿಮಳವೇ
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೦೬

ಮೂರ್ ಕಾಲಾಗಿರ್ವದು ಮೂರ್ ಕಾಲಾಗಿರ್ವದು
(ಮೂರ್ ಕಾಲಾಗಿರ್ವದೂ ಅಂಗೈಮೇನಾಡ್ವದೂ - ಪಾಠ)
ಮುಂಗೈಯಲಿ ನೀರು ಹೊರ (ವರ) ವಂತದೂ
(ಹಾರಾರೀ ನೀರಾ ಕುಡಿವಂತಾದೂ)
ನಾರೀ ನೀ ಬಲ್ಲದರ್ ಹೇಳೇ ॥ ಬೆಡಗೀನ
ಜಾಣೆ ನೀ ಬಲ್ಲಾದರ್ ಹೇಳೇ ॥ ೧೦೭

---

೧ ಅಂಗಳದಲ್ಲಿದುವದು ಎಂದು ಇಲ್ಲವೆ ಅಂಗಳದಲ್ಲಿ ಆಡ್ವದು ಎಂದು ಇದ್ದಿರಬಹುದು ಇನ್ನೊಂದು ಪಾಠದಲ್ಲಿ ನುಂಗಳಿಸಿ ನೀರ ಕುಡಿವಂತಾದು ಎಂದು ಬೇರೆ ಸಾಲಿದೆ

ಮುಂಗಳಿಸಿ (ನುಂಗಳಿಸಿ) ಮೇವದು ಎಂದು ಒಂದು ಪಾಠದಲ್ಲಿದೆ

೨ ಅತ್ತ್ಯಾಗೆ ಎಂದು ಒಂದು ಪಾಠದಲ್ಲಿದೆ

ನಾಕ್ಕಾಲಾಗಿರ್ವದು ನಾಕ್ ಕಾಲಾಗಿರ್ವದು
ಗೊಡ್ಡಿ ಹತ್ತಿ ವೋಡ್ವದು
ನಾರೀ ನೀ ಬಲ್ಲಾದರ್ ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೦೮

ಗಂಜೀ ಸಾಲೀಗೆ ಒಂಬಯ್ಯೂರ್ ನೆರಿ ಹೊಯ್ದೀ[೧]
ಗಂಡ್ಸನಿಲ್ಲದ ಬಾಲೆ ಬಸುರಂಬದೂ
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೦೯

ಅರಶಿನ ಸಾಲೀಗೂ ಅರವತ್ತೇಳು ನೆರಿ ಹೊಯ್ದೀ
ಪುರುಶನಿಲ್ಲದ ಬಾಲೆ ಬಸರಂಬದೂ
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೧೦

ಹಾದೀಲ್ ಹುಟ್ವದು ಲ್ಹಾದೀಲಿ ಬೆಳವದು
(ದಾರೀಲಿ ಹುಟ್ವದು ದಾರೀಲಿ ಬೆಳವದು ಪಾಠ)
ನಾರ್‍ಯರ ಸೆರಗಲ್ಲಿ ಸೇರ್ವಂತದೂ
(ನಾರ್‍ಯರ ಸೆರಗ ಸೇರ್ವಂತಾದೂ)
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೧೧

ಕಲ್ಲಾಗೆ ಲ್ಹುಟ್ಟುವದು ಕಲ್ಲಲ್ಲೆ ಬೆಳವದೂ
ಕಲ್ಲು ಕಲ್ಲೆಲ್ಲ ಪರಿಮಳ
ನಾರೀ ನೀ ಬಲ್ಲಾದರ್ಹೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಹೇಳೇ ॥ ೧೧೨

---

೧ ಕೊಂಬರ ಸಾಲೀಲೀ ವಂಬಯ್ಯೂರ ಹಲಿ ಹೊಯ್ದೀ

ಯಡಗೈಲಿ ತಿಂಬೂದು ಬಲಗೈಲಿ ಕಾರೂದು೧
(ಗುಡುಗುಡುಗುಡುಗುಡು ಗುಡುವಂsತಃದೂ)
ನಾರೀ ನೀ ಬಲ್ಲಾದರ್ಥೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಥೇಳೇ ॥ ೧೧೩

ಮರದೊಳಗೆ ಹುಟ್ವsದು ಮರದೊಳಗೆ ಬೆಳವದುs
ಆಕೇಸದೊಳಗೇ ಪರಿಮಳಾಗ್ವಂತಾದೂ ।
ನಾರೀ ನೀ ಬಲ್ಲಾದರ್ಥೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರೇಳೇ ॥ ೧೧೪

ತಂಪಲ್ಲಿ ಹುಟ್ವsದೂ ಗಾಳೀಗೆ ಅಲವsದೂ
ದೇವರ ತಲಿಮೇನೆ ಬರವಂತಾದೂ ।
ನಾರೀ ನೀ ಬಲ್ಲಾದರ್ಥೇಳೇ ॥ ಬೆಡುಗೀನ
ಜಾಣೇ ನೀ ಬಲ್ಲಾದರ್ಥೇಳೇ ॥ ೧೧೫

ಕೆರಿಯು ಯೇರಿಯು ಮೇನೆ ಬಿದುದೀನ ಹೂಗಲುದಿ
ಮಂಜು ತಾಗಿದರೇs ಉದ್ರುವಂತಾದೂ ॥
ನಾರೀ ನೀ ಬಲ್ಲಾದರ್ಥೇಳೇ ॥ ಬೆಡಗೀನ
ಜಾಣೇ ನೀ ಬಲ್ಲಾದರ್ಥೇಳೇ ॥ ೧೧೬

ಬೂಮಿಯೊಳಗ್ ಹುಟ್ವದೂ ಆಕೇಸದಲಿ ಬೆಳವಾದೂs
ನಾರ‍್ಯರ ಮುಡಿಮೇನೇ ಅಲಿವಂsತಾದೂ
ನಾರೀ ನೀ ಬಲ್ಲಾದರ್ಥೇಳೇ ॥ ಬೆಡಗೀನ
ಜಾಣೇ ನೀ ತಿಳಿದಾರ್ಥೇಳೇ ೧೧೭

ಮುಳ್ಳಾಗೆ ಹುಟ್ವದೂ ಮುಳ್ಳಾಗೆ ಬೆಳವದೂ
ಮುಳ್ಳೊಳಗೆ ಮುಗುಳೂ ವಡಿವಂತಾದೂ
ನಾರೀ ನೀ ಬಲ್ಲಾದರ್ಥೇಳೇ ॥ ಬೆಡಗೀನ
ಜಾಣೇ ನೀ ತಿಳಿದಾರ್ಥೇಳೇ ೧೧೮

---

೧ ಎಡಗೈಲಿ ತಿಂಬsದು ಬಲಗೈಲಿ ಕಾರ್ವsದು ಪಾಠ ಭೇದ

೩. (ಬ) ಯೋಗೀ ಬಿಡಿಸ್ಹೇಳುತೀನೋ

ಕೇಳಲಿ ಕೇಳಾಲೋ ಲೇ ಕೇಳೋ ನೀ ಜಾಣಽ
ಯೋಗೀ ಬಿಡಿಸೇಳುತೀನೋ ॥ ೧೧೯

ಊರ ಮುಂದ್ವೊಂದೂ ದೇವಾಂಗದ ಗಿಡ ಹುಟ್ಟಿ
ನಾಽನಾ ಜಾತ್ಯೋರೆಲ್ಲ ಬಂದೀ ನೋಡ್ವಂತಽದೂ
ಲೇ ಜಾಣ, ಬಿಡಿಸೇಳಂದೀಯಲ್ಲೋ
ತೇರೂಗೋಳಲ್ಲವೇನೋ? ॥ ೧೨೦

ಹುತ್ತದೊಳಗ್ ಹುಟ್ವಽದು ಹುತ್ತಿನಲ್ಲೆ ಬೆಳವಽದು
ಮೊಗ ಬಾಯ್ ಮುಚ್ಚೀರು ಬೆರಳಗೆ ಮಾತಾಡ್ವಽದೂ
ಲೇ ಜಾಣ, ಬಿಡಿಸೇಳಂದೀಯಲ್ಲೋ[1]
ಕಿನ್ನುರಿ ಬುರುಡ್ಯಲ್ಲವೇನೋ ? ೧೨೧

ತೋಟದೊಳಗ್ ಹುಟ್ವಽದು ತೋಟದೊಳಗೆ ಬೆಳವ್ಽದು
ಶಾಯುರ ಕೊಳ್ಳೀಗೇಽ ಬರವಂಽತಽದೂ
ಲೇ ಜಾಣ, ಬಿಡಿಸೇಳಂದೀಯಲ್ಲೋ
ರುದ್ರಾಕ್ಷಿ ಸರವಲ್ಲವೇನೋ ? ॥ ೧೨೨

ಯೆರಡ್ ಕಾಲಲಿರವಽದು ನಂಗಳಲಿಡವ್ವಽದು
ತಂಗಿಯು ಮಕ್ಕಳು ಬಾರೆಂದು ಕರೆವಽದು
(ತಂಗೀ ಮಕ್ಕಳ ಅಂಗಳಕೆ ಕರೆವಽದು)
ಲೇ ಜಾಣ, ಬಿಡಿಸೇಳಂದಿಯಲ್ಲೋ
ಕೋಳಿಗಳಲ್ಲವೇನೋ ? ೧೨೩

---

೧ ಇನ್ನೊಂದು ಪಾಠದಲ್ಲಿ ಜಾಣ ಉತ್ತರಿಸಿ ಹೌದೆನ್ನುತ್ತಾನೆ.
ಹೌದೂ ಲ್ಹಾದೂಽ ವತ್ತಲ್ಲವೇನೇ ?

ಬೂಮೀಲಿ ಹುಟ್ವದು ಬೂಮಿಲಿ ಬೆಳವದು
ಬೂಮಿ ಬೂಮಿಯೆಲ್ಲ ಪರಿಮಳವೇ
ಲೇ ಜಾಣ, ಬಿಡಿಸೇಳಂದಿಯಲ್ಲೋ
ಮಲ್ಲೂಗಿ ಹೂವಲ್ಲವೋ ॥ ೧೨೪

ಮೂರ್ ಕಾಲಾಗಿರ್ವದು ಮೂರ್ ಕಾಲಾಗಿರ್ವದು
ಮುಂಗೈಯಲಿ ನೀರ್ಶ ಹೊರ (ವರ) ವಂತದೂ
ಲೇ ಜಾಣ, ಬಿಡಿಸೇಳಂದಿಯಲ್ಲೋ
ಗಂದದ ಕೊರುಟಲ್ಲವೇನೋ ? ೧೨೫

ನಾಕ್ಕಾಲಾಗಿರ್ವದು ನಾಕ್ ಕಾಲಾಗಿರ್ವದು
ಗೊಡ್ಡಿ ಹತ್ತಿ ವೋಡ್ವದು
ಲೇ ಜಾಣ, ಬಿಡಿಸೇಳಂದಿಯಲ್ಲೋ
ಹಂದೀಯ ಗೋಳಲ್ಲವೇನೋ? ॥ ೧೨೬

ಗಂಜೀ ಸಾಲೀಗೇ ಒಂಬಯ್ನೂರ್ ನೆರಿ ಹೊಯ್ದೀ
ಗಂಡನಿಲ್ಲದ ಬಾಲೆ ಬಸುರಂಬದೂ
ಲೇ ಜಾಣ, ಬಿಡಿಸೇಳಂದಿಯಲ್ಲೋ
ಗೊಂಡೇ ಹೂಗಲ್ಲದೇನೋ? ॥ ೧೨೭

ಅರಿಶಿನ ಸಾಲೀಗೂ ಅರವತ್ತೇಳು ನೆರಿ ಹೊಯ್ದೀ
ಪುರುಷನಿಲ್ಲದ ಬಾಲೆ ಬಸುರಂಬದೂ
ಲೇ ಜಾಣ, ಬಿಡಿಸೇಳಂದಿಯಲ್ಲೋ
ಸೇವಂತಿ ಹೂಗಲ್ಲವೇನೋ ? ೧೨೮

ಹಾದೀಲ್ ಹುಟ್ಟದು ಹ್ಲಾದೀಲಿ ಬೆಳವದು
ನಾರ್ಯರ ಸೆರಗಲ್ಲಿ ಸೇರ್ವಂತ್ಯದೂ
ಲೇ ಜಾಣ, ಬಿಡಿಸೇಳಂದೀಯಲ್ಲೋ
ಪತ್ರಾಣಿ[೧] ಗಿಡವಲ್ಲವೋ? ೧೨೯

---

೧ ಉತ್ರಾಣಿ

ಕಲ್ಲಾಗೆ ಹುಟ್ಟುವದು ಕಲ್ಲಲ್ಲೇ ಬೆಳವsದು
ಕಲ್ಲು ಕಲ್ಲೆಲ್ಲಾs ಪರಿಮsಳs
ಲೇ ಜಾಣ, ಬಿಡಿಸೇಳಂದಿಯಲ್ಲೋ
ಕ್ಯಾದೂಗಿ ಹೂವಲ್ಲವೋ ?॥ ೧೩೦

ಯಡಗೈಲಿ ತಿಂಬೂದು ಬಲಗೈಲಿ ಕಾರೂದು
(ಗುಡುಗುಡುಗುಡುಗುಡು ಗುಡುವಂsತsದೂ)
ಲೇ ಜಾಣ ಬಿಡಿಸೇಳಂದಿಯಲ್ಲೋ
ಗೋದೀs ಕಲ್ಲಲ್ಲವೋ? ॥ ೧೩೧

ಮರದೊಳಗೆ ಹುಟ್ವsದು ಮರದೊಳಗೆ ಬೆಳವದು
ಆಕೇಸದೊಳಗೇ ಪರಿಮಳಾಗ್ವಂತಾದೂ ।
ಸುರಗೀ ಹೂಗಲ್ಲವೇನೋ ಯೇ ಜಾಣ,
ಹೌದೂ ಮಾತಲ್ಲವೇನೋ? ॥ ೧೩೨

ತಂಪಲ್ಲಿ ಹುಟ್ವsದೂ ಗಾಳೀಗೆ ಅಲವsದೂ
ದೇವರ ತಲಿಮೇನೆ ಬರವಂತಾದೂ
[1]ಅಳ್ಳೀ ಹೂಂಗಲ್ಲವೇನೋ ಯೇ ಜಾಣs
ಹೌದೂ ಮಾತಲ್ಲವೇನೋ ? ॥ ೧೩೩

ಕೆರಿಯು ಯೇರಿಯು ಮೇನೆ ಬಿರುದೀನ ಹೂಗಲುದಿ
ಮಂಜು ತಾಗಿದರೇ ಉದ್ರುವಂತಾದೂ ॥
ಯರಜಿಲ[2] ಹೂಗಲ್ಲವೇನೋ ಯೇ ಜಾಣs
ಹೌದೂs ಮಾತಲ್ಲವೇನೋ? ॥ ೧೩೪

---

೧ ತಾವರೆ ಹೂಂಗಲ್ಲವೇನೋ ?

೨ ಯರಜಿಲ ಅಂದರೆ ರಂಜಲ, ಬಕುಳ

ಬೂಮಿಯೊಳಗ್ ಹುಟ್ವದೂ ಆಕೇಸದಲಿ ಬೆಳವಾದೂ
ನಾರ್‍ಯರ ಮುಡಿಮೇನೇ ಅಲಿವಂತಾದೂ
ಸಿಂಗಾರ ಹೂಂಗಲ್ಲವೇನೋ ಯೇ ಜಾಣ
ಹೌದೂ ಮಾತಲ್ಲವೇನೋ? ॥ ೧೩೫

ಮುಳ್ಳಾಗೆ ಹುಟ್ನದು ಮುಳ್ಳಾಗೆ ಬೆಳವದೂ
ಮುಳ್ಳೊಳಗೆ ಮುಗುಳೂ ವಡಿವಂತಾದೂ
ಕ್ಯೇದಿಗಿ ಹೂಂಗಲ್ಲವೇನೋ ॥ ಯೇ ಜಾಣ
ಹೌದೂ ಮಾತಲ್ಲವೇನೋ ? ೧೩೬

೪. ಬಲ್ಲಾದರೆ ಬಿಡುಸ್ಹೇಳೀ

ಹಾದೀಲಿ ಹುಟ್ಟುವದು ಬೀದೀಲಿ ಬೆಳವದು
ಬಂದ ಬಂದಂತವರ ಸೆರಗ್ಹಿಡಿವದು
ನಾರೀ ನೀ ಬಲ್ಲಾದರ್ಹೇಳೇ ॥ ಗುಣನಿಭ
ವಕ್ತ್ರೀ ನೀ ಬಲ್ಲಾದರ್ಹೇಳೇ ॥ ೧೩೭

ಹಾದೀಲಿ ಹುಟ್ಟುವದು ಬೀದೀಲಿ ಬೆಳವದು
ಬಂದ ಬಂದಂತವರ ಸೆರಗ್ಹಿಡಿವದು
ಉತ್ತರಾಣಿ ಗಿಡವಲ್ಲವೇ ? ೧೩೮

ತೋಟದಲ್ಲಿ ಹುಟ್ವದು ಬಳ್ಳ್ಯಾಗಿ ನೇರ್ವದು
ತಾಯರ ಕೊರಳಲ್ಲಿ ಇರುವಂಥಾದೂ
ನಾರೀ ನೀ ಬಲ್ಲಾದರ್ಹೇಳೇ ॥ ಗುಣನಿಭ
ವಕ್ತ್ರೀ ನೀ ಬಲ್ಲಾದರ್ಹೇಳೇ ೧೩೯

ತೋಟದಲ್ಲಿ ಹುಟ್ವದು ಬಳ್ಯಾಗಿ ನೇರ್ವದು
ರಾಯರ ಕೊರಳಲ್ಲಿ ಇರುವಂಥಾದು
ರುದ್ರಾಕ್ಷಿ ಸರವಲ್ಲವೋ ? ೧೪೦

ಅಡವಿಯಲ್ಲಿರುವದು ಕಡನಲ್ಲ ಮಿಕವಲ್ಲ
ನಾಕು ಕಾಲುಂಟು ತಲೆಯಿಲ್ಲ
ನಾರೀ ನೀ ಬಲ್ಲಾದರ್ಹೇಳೇ ॥ ಗುಣನಿಭ
ವಕ್ತ್ರೇ ನೀ ಬಲ್ಲಾದರ್ಹೇಳೇ ॥ ೧೪೧

ಅಡವಿಯಲ್ಲಿರುವದು ಕಡನಲ್ಲ ಮಿಕವಲ್ಲ
ನಾಕು ಕಾಲುಂಟು ತಲೆಯಿಲ್ಲ ಜಾಣ,
ಮಂಚಲ್ಲವೇನೋ ಜಾಣ ? ॥ ೧೪೨

ಹುತ್ತಾಗೆ ಹುಟ್ವದು ಹುತ್ತಾಗೆ ಬೆಳವದು
ಹುತ್ತಾಗೆ ಮುಗುಳೂ ವಡುವಂತಾದ್ದೂ
ನಾರೀ ನೀ ಬಲ್ಲಾದರ್ಹೇಳೇ ॥ ಗುಣನಿಭ
ವಕ್ತ್ರೇ ನೀ ಬಲ್ಲಾದರ್ಹೇಳೇ ॥ ೧೪೩

ಹುತ್ತಾಗೆ ಹುಟ್ವದು ಹುತ್ತಾಗೆ ಬೆಳವದು
ಹುತ್ತಾಗೆ ಮುಗುಳೂ ವಡುವಂತಾದ್ದೂ
ಆಣಬೆಯ ಮೊಕೆಯಲ್ಲವೇನೋ? ಜಾಣ,
ಹೌದೂ ಮಾತಲ್ಲವೇನೋ ? ॥ ೧೪೪

ಮಣ್ಣಲ್ಲಿ ಹುಟ್ವದು ಬಳ್ಯಾಗಿ ನೇರ್ವದು
ಬೆರಳು ಬಾಯ್ ಮುಚ್ಚಿದರೆ ಮಾತಾಡ್ವಂತಾದೂ ॥ ನಾರೀ ನೀ
ಬಲ್ಲಾದರೆ ಬಿಡುಸ್ಹೇಳೇ ॥ ೧೪೫

ಮಣ್ಣಲ್ಲಿ ಹುಟ್ವದು ಬಳ್ಯಾಗಿ ನೇರ್ವದು
ಬೆರಳು ಬಾಯ್ ಮುಚ್ಚಿದರೆ ಮಾತಾಡ್ವಂತಾದೂ
ಸುರತಿಯ ಬುರುಡ್ಯಲ್ಲವೋ? ಜಾಣ,
ಹೌದೂ ಮಾತಲ್ಲವೇನೋ? ॥ ೧೪೬

ತೊಡಿ ಬಾಯ್ ಮುಚ್ಚಿದರೇ ಬೆರಳಲ್ ಮಾತಾಡ್ವದು
ನಾರೀ ನೀ ಬಲ್ಲಾದರ್ಢೇಳೇ ॥ ಬೆಡಗಿನ
ನಾರೀನೀ ಬಲ್ಲಾದರ್ಢೇಳೇ ॥ ೧೪೭

ತೊಡಿಬಾಯ್ ಮುಚ್ಚಿದರೇ ಬೆರಳಲ್ ಮಾತಾಡ್ವದು
ಯಾಲಕ್ಕಿಯಲ್ಲವೇನೇ ಯೋ ಜಾಣ,
ಹೌದೂ ಮಾತಲ್ಲವೇನೋ? ॥ ೧೪೮

ಕಿರಿಕಿರಿ ಗೆಣ್ಣುಂಟು ಕಬ್ಬಿನ ಕೋಲಲ್ಲ
ಬೆನ್ ಮೇನೆ ಮುಳ್ಳುಂಟು ಹಲಸಿನ ಕಾಯಲ್ಲ
ಮೂರು ಕಣ್ಣುಂಟು ತೆಂಗಿನ ಕಾಯಲ್ಲ
ನಾರೀ ನೀ ಬಲ್ಲಾದರ್ಢೇಳೇ ೧೪೯

ಕಿರಿಕಿರಿ ಗೆಣ್ಣುಂಟು ಕಬ್ಬಿನ ಕೋಲಲ್ಲ
ಬೆನ್ ಮೇನೆ ಮುಳ್ಳುಂಟು ಹಲಸಿನ ಕಾಯಲ್ಲ
ಮೂರು ಕಣ್ಣುಂಟು ತೆಂಗಿನ ಕಾಯಲ್ಲ
ಔಡಲ ಗಿಡವಲ್ಲವೇನೋ ? ೧೫೦

ಮುಳ್ಳಲ್ಲಿ ಹುಟ್ಟುವದು ಮುಳ್ಳಲ್ಲಿ ಬೆಳೆಯುವದು
ಮುಳ್ಳಲ್ಲಿ ಮುಗುಳು ವಡಿವಂಥದ್ದಾs
ನಾರೀ ನೀ ಬಲ್ಲಾದರ್ಢೇಳೇ ಗುಣನಿಧ
ವಕ್ರೀ ನೀ ಬಲ್ಲಾದರ್ಢೇಳೇ ॥ ೧೫೧

ಮುಳ್ಳಲ್ಲೆ ಹುಟ್ಟುವದು ಮುಳ್ಳಲ್ಲಿ ಬೆಳೆಯುವದು
ಮುಳ್ಳಲ್ಲೆ ಮುಗುಳು ವಡೆವಂತಾದ್ದು
ಕ್ಯಾದುಗಿ ಕೊನಿಯಲ್ಲವೇ? ॥ ೧೫೨

ಕುಂಬಾರ ಸಾಲೀಲಿ ಯೆಂಬಯ್ಯುನ್ನಿರ್ ಹಲಿ ಹೊಯ್ದಿ
ಗಂಡಿಲ್ಲದ ಗರತೀ ಬಸುರೆಂಬಾದೂ
ನಾರೀ ನೀ ಬಲ್ಲಾದರ್ಢೇಳೇ ॥ ಗುಣನಿಧ
ವಕ್ರೀ ನೀ ಬಲ್ಲಾದರ್ಢೇಳೇ ॥ ೧೫೩

ಕುಂಬಾರ ಸಾಲೀಲಿ ಯೆಂಬಯ್ಯೂರ್ ಹಲಿ ಹೊಯ್ದಿ
ಗಂಡಿಲ್ಲದ ಗರತೀ ಬಸುರೆಂಬಾದೂ
ಸಾವಂತಿ ಹೂಗಲ್ಲವೋ? ॥ ಜಾಣ
ಹೌದೂ ಮಾತಲ್ಲವೋ? ॥ ೧೫೪

ನಾಕ್ ಕಾಲಾಗಿರ್ವದು ಮಂಟಪ ಸುತ್ವದು
ಹಾರ್ ಹಾರ್ ನೀರs ಕುಡಿವಂತಾದೂ
ನಾರೀ ನೀ ಬಲ್ಲಾದರ್ಹೇಳೇ ॥ ಗುಣನಿಭ
ವಕ್ತ್ರೀ ನೀ ಬಲ್ಲಾದರ್ಹೇಳೇ ॥ ೧೫೫

ನಾಕ್ ಕಾಲಾಗಿರ್ವದು ಮಂಟಪ ಸುತ್ವದು
ಹಾರ್ ಹಾರ್ ನೀರs ಕುಡಿವಂತಾದೂ ॥ ಯೋ ಜಾಣ
ಗಂದದ ಕೊರಟಲ್ಲವೋ? ೧೫೬

೫. ಅದು ನಿನಗೆ ತಿಳಿಲಿಲ್ಲೇನೇ ?

ಬೇಲ್ಯಾಗ ಹುಟ್ಟುವದು ಬೆಟ್ಟಕ್ಕೆ ಹಬ್ಬುವದು
ಕಾಯ್ ಕಡಿದು ಬಾಯ್ ಮುಚ್ಚಿ ಬೆರಳಲ್ಲಿ ಮಾತಾಡಿಸೋದು
ವಯ್ಯಾರಿ ಜಾಣೆ ಅದು ನಿನಗೆ ತಿಳಿಲಿಲ್ಲೇನೇ? ॥
ಪುಂಗಿಯು ಕಾಯಲ್ಲೇನೇ? ॥ ೧೫೭

ನೆತ್ಯಾಗ ತಿನ್ನುವದು ಪಕಡಿಯಾಗ ಚೆಲ್ಲುವದು
ಅದು ನಿನಗೆ ತಿಳಿಲಿಲ್ಲೇನೇ ?
ವಯ್ಯಾರಿ ಜಾಣೆ ಬೀಸುವ ಕಲ್ಲಲ್ಲೇನೇ? ॥ ೧೫೮

ದಾರ್‍ಯಾಗ ಹುಟ್ಟುವದು ದಾರ್‍ಯಾಗ ಬೆಳೆಯುವದು
ದಾರಿಲ್ಹೋಗುವ ಅಣ್ಣನ ಸೆರಗ್ಹಿಡಿದು ಜಗ್ಗುವದು
ಪೋರಿ ನೀ ಬಲ್ಲೆಯೇನೇ? ವಯ್ಯಾರಿ ಜಾಣೆ
ಉತ್ತರಾಣಿ ಕಡ್ಯಲ್ಲೇನೇ? ॥ ೧೫೯

ಊರ ಮುಂದಲ ಒಂದು ದೇವೇಂದ್ರ ಮರ ಹುಟ್ಟಿ
ಊರ ನಾರೇಲೆಲ್ಲ ನೆರೆದು ಕಂಕಣ ಕಟ್ಟಿ
ಪೋರಿ ನೀ ಬಲ್ಲಿರೇನೇ ? ವಯ್ಯಾರಿ ಜಾಣೆ
ಹೂವಿನ ತೇರಲ್ಲೇನೇ? ॥ ೧೬೦

ತೋಟದಲ್ಲಿ ಹುಟ್ಟುವದು ತೋಟದಲ್ಲಿ ಬೆಳೆಯುವದು
ಊಟಾದ ಹೊತ್ತಿಗೆ ನೀಟಾಗಿ ಬರುವದು
ಪೋರಿ ನೀ ಬಲ್ಲಿರೇನೇ? ವಯ್ಯಾರಿ ಜಾಣೇ
ಬಾಳಿಯ ಎಲೆಯಲ್ಲೇನೇ? ೧೬೧

ಅಂಗಳದಲ್ಲಿ ನಿಂದಿರವದು ಕೆಂಗಳಿಸಿ ಕೂಗುವದು
ತಂಗಿ ಮಕ್ಕಳನೆಲ್ಲ ಅಂಗಳಕೆ ಕರೆಯುವದು
ಪೋರಿ ನೀ ಬಲ್ಲಿರೇನೇ? ವಯ್ಯಾರಿ ಜಾಣೇ
ಕೋಳಿಯು ಹುಂಜಲ್ಲೇನೇ? ॥ ೧೬೨

೬. ಹೇಳ್ತೇನೆ ಬಾರೋ

ಏರ್ಮಾಗಿರಮಾ ದೇವನೆ ಬಲ್ಲಾ
ಮತ್ಯಾರಿಗೇನು ಗೊತ್ತಿಲ್ಲಾ ॥
ಬೂಮೀ ತಾಯೀ ಸರ್ಪಾಃಸನ ಗಚ್ಚು
ಸುತ್ತೇ ಗಟ್ಟಿವು ರಲ್ಲಾ ॥ ೧೬೩

ಪಾತಾಳಲೋಕಾ ಜಲಃಸಮುದ್ರಾ
ನೀರೇ ಇರವ್ರೋ ದಾ(ದ)ಲ್ಲಾ ॥
ನೀರೀನ ಮೇಲೇ ಏಬ್ಬ ಸರಾಣಾಃ
ತಪಾಸು ಮಾಡ್ತ್ಯಾನಲ್ಲಾ ॥ ೧೬೪

ಯಾತಾಃರಿಂದಾ ತಪಃಸು ಮಾಡ್ತ್ಯಾನೆ
ಏಡದ ಹೇಳಬೇಕಲ್ಲಾ ॥
ಏಡದು ಇದ್ರೂ ಹೇಳಾದಿದ್ದರೆ ।
ನೀನಗೆ ಬಿಡವ್ರೋರಲ್ಲಾ ॥
ನಿನಃಗೆ ಬಿಡವ್ರೋರಲ್ಲಾ ನಿ ।
ನ್ನಪ್ಪಗೆ ಬಿಡವ್ರೋರಲ್ಲಾ ॥ ೧೬೫

ನೀರೀನ ಮೇಲೇ ಏಬ್ಬ ಶರಾಣಾಃ
ತಪಾಸು ಮಾಡ್ತ್ವಾದೂ ಹೇಳ್ತೇನೆ ನೋಡೋ
ನೀರೀನ ಮೇಲೇ ತಪಾಸ ಮಾಡ್ವದೂ
ಕೆಪ್ಪೆ ವಂದೂ ಅಲ್ಲೇನೋ ಗೆಣೆಯಾ ॥ ೧೬೬

ಕಾನಾಗೆ ಹುಟ್ವದೂ ಕಡವಲ್ಲ ಮಿಕವಲ್ಲಾ
ಬೆನ್ ಮೇಲೆ ಮೆಲಾಃಕ ತೆಗಿಯುವದೋ ॥
ನನ್ನಂತೆ ನೀನೂ ಜಾಣನ್ಯಾಃದಾರೇ
ಏಡದ ಹೇಳಬೇಕೊ ಈ ಬೇದಾ ॥ ೧೬೭

ವಡದೂ ಇದು ಹೇಳಾದಿದ್ದರೆ
ನೀನಗೆ ಬಿಡವೋರಲ್ಲಾ
ನಿನಽಗೆ ಬಿಡವೋರಲ್ಲಾ ನಿ ।
ನ್ನಪ್ಪಗೆ ಬಿಡವೋರಲ್ಲಾ ॥ ೧೬೮

ವಡಽದ ಹೇಳೋ ಗಿಡಽದ ಮೂಲಾ
ಇದು ವಂದು ಬೇದಾನೀಗಾ ॥
ಬೆನ್ನ ಮೇಲೆ ಮೆಲಕಾಽ ತೆಗ್ಯೋಡಾ ಗೆಣೆಯಾ
ಗೋದೀ ಕಲ್ಲೊಂದು ಅಲ್ಲೇನೋ ಗೆಣೆಯಾ?
ನಿನ್ನೆಂತೆ ಜಾಣಾ ಹೌದಾದ್ರೆ ನಾನೂ
ಹೇಳ್ತೇನೆ ಬಾರೋ ಯೆಲಾ ಗೆಣೆಯಾ ॥ ೧೬೯

೭. ಬಲ್ಲಂತೊರ್ ಹೇಲೀಲರತಾವಽ

ತಂದಾನೆಂದೀನೋ ತಾನಾಽತಂದದದನನ್ನಾಽ
ತಂದಾನಂದಿನಿನೋ ತಾಽನಾಽನಾಽಽ ॥
ವಂದಂಬುದೇನೇ ಅಡಕೆಯಾಽ ಪಲ ಕಾಽಣೆ
ನಾರೀ ಕಣ್ಣಡವ್ಯಾಽ ತೆಲದೇನೇ ಲೇ ಬಗ್ಗೋಣಽ
ಬಲ್ಲಂಽತೊರ್ ಹೇಲೀಽ ಲರತಾಽವಾಽಽ ॥ ೧೭೦

ಅರತಾಽ ಹೇಲೂಽವನ್ನ ಆರೂ ಮೂರು ದಿಂಗಾಽಲಾಽ
ಅರದಿಂಗಲಿಗರತಾಽಽ ಲವೂಽ ಜಾಽಣೋ ॥
ಅರದಿಂಗಲಿಗರತಾಽಽ ಲವು ಜಾಽಣಽ ಲರುಜಣ ಶ್ವಾಽಮೀಽ
ವಾಲೇಽ ಮೇಲೋ ಲೇ ಬಽರಽದೀನೋಽ ॥ ೧೭೧

ಯೆರಡಂಬೂದೇನೇಽ ಕಣ್ಣೂಽ ಕಂಗಲ ಕಾಣೆ
ನಾರೀ ಕಣ್ಣಡುವಾಽ ತೆಲದ್ ಹೇಲೇಽ ॥ ಬಗ್ಗೋಣ
ಬಲ್ಲಂತೋರ್ ಹೇಽಲೀಽ ಲರತಾಽಽವಾಽಽ ॥ ೧೭೨

ಮೂರಂಬುದೇನೇ ತೆಂಗಿನಾ ಪಲ ಕಾಣೇ
ನಾಕಂಬುದೇನೇ ಆಕಲಾಽ ವೊಲೆ ಕಾಣೇ ॥
ಐದಂಬೂದೇನೇ ಕಯ್ಯಾಽ ಹಸ್ತ ಕಾಣೇ
ಆರಂಬೂದೇಽನೇಽ ಆರೂಽತಿಯನು ಕಾಣೇ ॥ ೧೭೩

ಯೇಲಂಬೂದೇಽನೇಽ ಯೇಲೂಽ ರಕ್ಷವ ಕಾಣೇ
ಯೆಂಟಂಬುದೇನೇಽ ಗೆಂಟೇಯಾಽ ದನಿ ಕಾಣೇಽ ॥
ಪಂಬತ್ತಂಽಬುದೇನೇ ತುಂಬಿದ ಗರ್ಬವು ಕಾಣೇ
ಹತ್ತಂಬುದೇನೇಽ ಅತ್ತೀಯಾ ಮರ ಕಾಣೇ ॥ ೧೭೪

ಹನ್ನಂದಂಬುದೇನೇಽ ಹೊನ್ನೆಯಾಽ ಮರ ಕಾಣೇ
ಹನ್ನೈಡಂಬುದೇನೇಽ ಶೂಲೀಶಂದರು ಕಾಣೇಽ ೧೭೫

೮. ಬಲ್ಲಾದರ್ ಹೇಳೀ ಅಱುತಾವಾ

ಪತುಪತಿ ಯೆಲಿಯಾದೋ ಪನ್ನೇರಿಲ ಗೆಂಟಾದೋ
ಮುತ್ತೂ ಕೊತರಂತೇ ಕೊತಾದೋ ॥ ನಂಬಲುದಾಡಾಽ
ಬಲ್ಲದ ಜಾಣ್ ಹೇಳೇ ಪದುನಾಽವಾ
ಬಲ್ಲಾಽದರ್ಹೇಳೇಽ ಅರುತಾಽವಾಽ ॥ ೧೭೬

ಅಂತಂತಾ ಹಾಡಾಽ ಹನ್ನೈಯ್ದೂ ನಾಽ ಬಲ್ಲೇಽ
ಪನ್ನಂಗಲು ಶಿವನೇ ಪದೂಮುವೇ ॥ (ನ) ಹಂಬಲುದ್ದಾಡಾಽ
ಮೆಣಸಿನ ಕಾಲಲುದೇಽ ಅರತಾಽವೇಽ ॥ ೧೭೭

ಬೆಂದೂs ಮಣ್ಣಿನ ಮೇನೇs ಬೇವಿನಾ ಗಿಡು ಹುಟ್ಟೇs
ಯೆಲಿಗೇs ಸಾsವಿರದಾs ಮಿಡಿ ಬಿದ್ದೀ ॥ ದಂಬಲುದ್ದಾಡಾ
ಬಲ್ಲಾದರ್ಥೀಳೀs ಲರುತಾವಾ ॥ ೧೭೮

ಅಂತಂತಾs ಹಾಡೂs ಹನ್ನೈಡೂ ನಾs ಬಲ್ಲೇs
ಪನ್ನಂಗಲು ಶಿವನೇs ಪದುನsವೇ ॥ (ನ) ಹಂಬಲುದ್ದಾಡಾs
ತೊಂಡೀ ಮಿಡಿಯಲುದೇs ಅರುತಾದೋs ೧೭೯

೯. ಗಾಲಾಗಿ ಅಲೆವುದು

[ಅಂಬಿಗರಲ್ಲಿ ಹೋಮದಲ್ಲಿ ಅಂದರೆ
ದಿಂಡಿನಲ್ಲಿ (ಶೋಭನದಲ್ಲಿ) ಹೇಳುವ ಒಗಟು ಹಾಡು]

ಮರದೊಳಗೆ ಹುಟ್ಟುವದು ಮರದೊಳಗೆ ಬೆಳೆಯುವದು
ಮರದೊಳಗೆ ಗಾಲಾಗಿ ಅಲೆಯುವದು ॥ ಸಿಂಗಾರ
ಕೊನಿಯು ಆಕಾಸಕೆ ಗಮಗಮ ಅಂಬದು ॥ ೧೮೦

ಈಸರನ ಚರಣಕೆ ಹೋಗಿ ಬರುವೆ ಅಂದರೆ,
ಮಡದಿ ಸೌಬದ್ರೀ, ಮುಡೀಯೆಂದs (ಚೆಂದ) ೧೮೧

ಬಳ್ಳಿಯೊಳಗೆ ಹುಟ್ಟುವದು ಬಳ್ಳಿದೊಳಗೆ ಬೆಳವದು
ಬಳ್ಳಿಯೊಳಗೆ ಗಾಲಾಗಿ ಅಲೆವದು । ಮಲ್ಲಿಗಿ ಹೂವು
ಆಕಾಸಕೆ ಗಮಿಗಮಿ ಅಂsಬದು ॥ ೧೮೨

ಅದು ಯೆನ್ನ ಪಿರತಿ ಅಂsದನು
ಮಡದೀ ಸೌಬದ್ರೀs ಮುಡೀsಯುಂsದ ॥ ೧೮೩

ಮುಳ್ಳೊಳಗೆ ಹುಟ್ಟುವದು ಮುಳ್ಳೊಳಗೆ ಬೆಳೆವದು
ಮುಳ್ಳುಗಾಲಾಗಿ ಅಲೆವದು ॥ ಕ್ಯಾದೂಗಿ ಹೂವು
ಆಕಾಸಕೆ ಗಮಿಗಮಿ ಅಂಬಽದು ॥ ೧೮೪
ಅದು ಯೆನ್ನಾಽ ಪಿರತಿ ಅಂಽದನು
ಈಸ್ವರನ ಚರಣಕೆ ಹೋಗಿ ಬರುವೆ ಅಂದರೆ
ಮಡದಿ ಸೌಬದ್ರೀ ಮುಡಿಚೆಂದ (ಯೆಂದ) ೧೮೫

೧೦. ಅರ್ಥ ಬಿಡಿಸೋ

ಒಂದೂ ಲಂಬಽದು ವೇನು ಯೆಯ್ಡ್ಡು ಲಂಬದು ವೇನು?
ಬಲ್ಲಾಽದ ಸೂರಜಾಣ ಅರ್ತ ಬಿಡಿಸೋ ॥ ೧೮೬

ಯೋ, ಯೆಯ್ಡ್ಡು ಲಂಬದುವೇನು ಮೂರೂಽಲಂಬದು ವೇನು?
ಬಲ್ಲಾಽದ ಸೂರು ಜಾಣ ಅರ್ತ ಬಿಡಿಸೋ ॥ ೧೮೭

ಮೂರೂಽಲಂಬದುವೇನು ನಾಲ್ಕೂ ಲಂಬದು ವೇನು?
ಬಲ್ಲಾಽದ ಸೂರುಜಾಣ ಅರ್ತ ಬಿಡಿಸೋ ॥ ೧೮೮

ನಾಲ್ಕೂಽಲಂಬದು ವೇನು ಐದೂಽಲಂಬದು ವೇನು?
ಬಲ್ಲಾಽದ ಸೂರು ಜಾಣ ಅರ್ತ ಬಿಡಿಸೋ ॥ ೧೮೯

ಐದೂಽ ಲಂಬದುವೇನು ಆರೂಽಲಂಬಾದು ವೇನು?
ಬಲ್ಲಾಽದ ಸೂರುಜಾಣ ಅರ್ತ ಬಿಡಿಸೋ ॥ ೧೯೦

ಆರೂಽಲಂಬದು ವೇನು ಯೇಳೂಽ ಲಂಬದು ವೇನು ?
ಬಲ್ಲಾಽದ ಸೂರುಜಾಣ ಅರ್ತ ಬಿಡಿಸೋ ॥ ೧೯೧

ಆರ್ಯೇಳೂs ಲಂಬದು ವೇನು ಯೆಂಟೂ ಲಂಬದುವೇನು?
ಬಲ್ಲಾsದ ಸೂರು ಜಾಣ ಅರ್ತ ಬಿಡಿಸೋ ॥ ೧೯೨

ಯೆಂಟೂsಲಂಬದುವೇನು ವಂಬತ್ತೂ ಲಂಬದು ವೇನು?
ಬಲ್ಲಾsದ ಸೂರುಜಾಣ ಅರ್ತ ಬಿಡಿಸೋ ॥ ೧೯೩

ವಂಬತ್ತೂ ಲಂಬದುವೇನು ಹತ್ತೂs ಲಂಬದುವೇನು ?
ಬಲ್ಲಾsದ ಸೂರು ಜಾಣ ಅರ್ತ ಬಿಡಿಸೋ ॥ ೧೯೪

ಹತ್ತೂ ಲಂಬದು ವೇನು ಹನ್ನಂದೂs ಲಂಬದುವೇನು?
ಬಲ್ಲಾsದ ಸೂರುಜಾಣ ಅರ್ತ ಬಿಡಿಸೋ ॥ ೧೯೫

ಹನ್ನೊಂದೂ ಲಂಬದುವೇನು ಹನ್ನೆಡೂsಲಂಬದು ವೇನು?
ಬಲ್ಲಾsದ ಸೂರು ಜಾಣ ಅರ್ತ ಬಿಡಿಸೋ ॥ ೧೯೬

ಇನ್ನೊಂದು ತಂಡದವರು —

ವಂದೂs ಲಂಬದು ವೇನು ಕಾಕೇsಯ ಕಣ್ಣು ಕಾಣು
ಕೋsಲು ಕೋಲೆs । ಚಿನ್ನದ ಕೋsಲು ಕೋಲೇ ॥ ೧೯೭

ಯೆರಡೂs ಲಂಬದು ವೇನು? ಮನಸsರ ಕಣ್ಣು ಕಾಣ
ಮೂರೂsಲಂಬದು ವೇನು ಕಾಯೀsಯ ಕಣ್ಣು ಕಾಣ ೧೯೮

ನಾಲ್ಕೂsಲಂಬದು ವೇನು ಆಕsಳ ಮೊಲಿ ಕಾಣ
ಐದೂs ಲಂಬದು ವೇನು ಕಯ್ಯೀsಯ ಹಸ್ತ ಕಾಣ ೧೯೯

ಆರೂs ಲಂಬದು ವೇನು ಆರೂsಡ ಪಕ್ಷಿ ಕಾಣ
ಏಳೂs ಲಂಬದು ವೇನು ಯೋಳ್ ಹೆಡೇನಾಗ ಕಾಣ ೨೦೦

ಎಂಟೂs ಲಂಬದು ವೇನು ದೇವಾsರ ಗೆಂಟಿ ಕಾಣ
ವಂಬತ್ತು ಲಂಬದು ವೇನು ಒಂಬತ್ತಿಂಗ್ಳ ಗರ್ಬ ಕಾಣ
ಹೊತ್ತs ಲಂಬದು ವೇನು ಹತ್ತೀsಯ ಹೂಗು ಕಾಣ ೨೦೧

ಹನ್ನೊಂದೂs ಲಂಬದು ವೇನು ಹೊನ್ನೀsಯ ಹೂಂಗು ಕಾಣ
ಹನ್ನೆರಡೂs ಲಂಬದು ವೇನು ಹುಲಿ ತಾಯಿಯ ಮರಿ ಕಾಣ ೨೦೨

೧೧. ಹೊಡಚೊಂದು ಹೇಳಬೇಕು

ತೋಟದಲ್ಲಿ ಹುಟ್ಟಬಹುದು ಲಣ್ಣನೇ,
ನೀಟಾಗಿ ಬೆಳೆಯೋದೇ
ನೀನರ್ತ ಬಲ್ಲಾದಣ್ಣಾ ನೀನೀಗೇ
ತೆಳಿದಂಗೆ ಹೇಳಬೇಕೊ
ಜಾಣ ಬಲ್ಲಾದಣ್ಣಾ ನೀನೀಗೇ
ಹೊಡಚೊಂದು ಹೇಳಬೇಕು ॥ (ಅಡಿಕೆಮರ)

ಬೇಲೆಲ್ಲಿ ಹುಟ್ಟುವಾದೂ ಲಣ್ಣನೇ,
ಬೆರಳಲ್ಲಿ ಮಾತಾಡೂದು
ನೀನರತ ಬಲ್ಲಾದಣ್ಣಾ ನೀನೀಗೇ
ತೆಳಿದಂಗೆ ಹೇಳಬೇಕು
ಜಾಣ ಬಲ್ಲಾದಣ್ಣಾ ನೀನೀಗೇ
ಹೊಡಚೊಂದು ಹೇಳಬೇಕು ॥ (ಕೊಳಲು)

ಚೂರ್‍ಯಾದ ಸೂಡ್ಯವಳೂ ಅಣ್ಣನೇ,
ಹಸುರಾದ ಮೈಯುವಳೂ ಲಣ್ಣನೇ,
ಕೆದುರಾಡಿ ಮೇಯೂದೂ
ನೋಡರತ ಬಲ್ಲಾದಣ್ಣಾ ನೀನೀಗೇ
ತೆಳಿದಂಗೆ ಹೇಳಬೇಕು
ಜಾಣ ಬಲ್ಲಾದಣ್ಣಾ ನೀನೀಗೇ
ಹೊಡಚೊಂದು ಹೇಳಬೇಕು ॥ (ಕೋಳಿ)

ತಾಯಿ ಕೊರುಳಲ್ಲಿ ಲಣ್ಣನೇ
ಕಾಯಿಗೆ ಉದುರಾಕ್ಸೆ
ನೀನರತ ಬಲ್ಲದಣ್ಣಾ ನೀನೀಗೆ
ತೆಳಿದಂಗೆ ಹೇಳಬೇಕು
ಜಾಣ ಬಲ್ಲದಣ್ಣಾ ನೀನೀಗೆ
ಹೊಡಚೊಂದು ಹೇಳಬೇಕು ॥ (ಸೋರೆಕಿನ್ನುರಿ)

ದರಿಕೂಡ ಹೋಗಣ್ಣನಾ
ಸೆರ್‍ಗ ಹಿಡ್ದಿ ಯೆಳಿವೋಳೇ
ನೀನರ್ತ ಬಲ್ಲಾದಣ್ಣಾ ನೀನೀಗೇ
ತೆಳಿದಂಗೆ ಹೇಳಬೇಕು
ಜಾಣ ಬಲ್ಲಾದಣ್ಣಾ ನೀನೀಗೆ
ಹೊಡಚೊಂದು ಹೇಳಬೇಕು ॥ (ಸೀಗೆಬಳ್ಳಿ)

ಗದ್ಯದಲ್ಲಿ ಒಗಟುಗಳು

೧. ದೇವರು

೧ ಅಪ್ಪ ಸಪ್ ಹೊರ್‍ತ (ಸಪ್ ಅಂದರೆ ಸೊಪ್ಪು)

೨ ಮಗ ಹಶಿ ಹೊರ್‍ತ (ಹಶಿ ಎಂದರೆ ಹಸಿಯ ಹುಲ್ಲು)

೩ ಸುಟ್ಟ ಬೀಜವ ಬಿತ್ತಿ ಬೆಳೆಯಲಾರದ ಕಾಯಿ, ಬೆಟ್ಟದ ಛತ್ರವಾಗಿ
ತೊಟ್ಟಿಲ್ಲದಾ ಹಣ್ಣ ಮುಟ್ಟಿ ಕೊಯ್ದವನೊಬ್ಬ ಹುಟ್ಟು ಬಂಜೆಯ ಮಗ

೪ ಹರನ ಹಾರನ ಆಹಾರನ ಪುತ್ರನ ಮಿತ್ರ

೨. ಪ್ರಾಕೃತಿಕ

೫ ಅಲ್ಲಿಲ್ಲೆ ಇಲ್ಲಿಲ್ಲೆ, ಕುಮಟೆ ದಾರವಾಡದಲ್ಲಿಲ್ಲೆ
ಕಾಸ್ ಕೊಟ್ಟಿಲ್ಲೆ, ಬಾಯ್ ಹಾಕಿರೆ ಬೀಜಿಲ್ಲೆ

೬ ವಂದ್ ವಸ್ತು ಯೆಷ್ಟ್ ಕಡದ್ರೂ ತುಂಡಾಗ್ತಿಲ್ಲೆ

೭ ರೂಪವಿಲ್ಲ, ಬಣ್ಣವಿಲ್ಲ, ಇದನು ಬಿಟ್ಟರೆ ಗತಿಯಿಲ್ಲ

---

೧ ಶಿವ

೨ ಗಣಪತಿ

೩ ಗಣಪತಿ

೪ ರಾಮ, ಹರನ ಹಾರ ಹಾವು, ಅದರ ಆಹಾರ ಗಾಳಿ, ಗಾಳಿಯ
ಮಗ ಹನುಮಂತ, ಅವನ ಮಿತ್ರ ರಾಮ.

೫ ಆಣೆಕಲ್ಲು

೬ ನೀರು

೭ ನೀರು

೮ ಅಕಟಕಟ ಆಲದ ಮರ
ತೊಗಟಿಲ್ಲದ ಗೋಣಿಯು ಮರ
ನೀರಿಗೆ ಕರಗದ ಮರ
ಬೆಂಕಿಗೆ ಬೇಯದ ಮರ

೯) ಅಂಕಡೊಂಕಿನ ಮರ, ಬಾಣ ಬಿರುಸಿನ ಮರ
ಯಾರು ಹತ್ತಿದರು ಕಡಿಯಲಾರದ ಮರ
[ಸುಗ್ಗಿ ಶಿವರಾತ್ರಿಗೆ ಬತ್ (ಬತ್ತಿ) ಹೋಗುವಂತಾ ಮರ]

೧೦ ಯಮದೇವರ್ ಬಂದರೂ ಕಡಿಯಲಾಗದ ಮರ

೧೧ ಹುಲ್ಲಿಲ್ಲದ ಗೆದ್ದೆಲ್ ಹಲ್ಲಿಲ್ಲದ ಯೆಮ್ಮೆ ಮೇಯ್ತು

೧೨ ಮನೆ ಸುತ್ತು ಗೈಲ್‌ಗೈಲ್ ಅಂತದೆ

೧೩ ಎರ್ಡು ಜನ ಹೆಂಗಸ್ರು ಸೇರಿ ಒಬ್ಬ ಗಂಡ್ಸಿಗೆ
ಬಸ್ರು ಮಾಡಾರೆ ಅದೆಂಥದು ?

೧೪ ಆ ಮರ, ಈ ಮರ, ಬ್ರಹ್ಮ ಕಡಿಯಲಾರದ ಮರ

೧೫ ಅಪ್ಪನ ಕಿಸೆಯ ಕಾಸು ಏನು ಮಾಡಿದರೂ ಖರ್ಚಾಗುವದಿಲ್ಲ

೧೬ ಹಿತ್ಲ ತುಂಬಾ ಹೂಂಗಾತದೆ; ಕೊವ್ವೆ ಹೇಳ್ರೆ ಕೈ ಮುಟ್ಟ

೧೭ ಅಪ್ಪಿಮರ ಅಪ್ ಹಾಕುಕಾಗುದೆಲ್ಲ
ನೆಲ್ಲಿಕಾಯಿ ಲೆಕ್ಕ ಮಾಡುಕಾಗುದೆಲ್ಲ
ಕಣ್ಣಿಗ್ ಕಾಣ್ತು ಕೈಗ್ ಶಿಕ್ತಿಲ್ಲೆ

೮	ಕಬ್ಬಿಣ	೧೩	ಭೂಮಿ, ಗಂಗೆ
೯	ಹೊಳೆ ನೀರು	೧೪	ಆಕಾಶ
೧೦	ಗಾಳಿ	೧೫	ನಕ್ಷತ್ರ
೧೧	ಮೋಡ	೧೬	ನಕ್ಷತ್ರ, ತಾರೆಕಲ್ಲು
೧೨	ಮೊಲಗಾಲ (ಮಳೆಗಾಲ)	೧೭	ಆಕಾಶ, ನಕ್ಷತ್ರ

೧೮ ವಂದ್ ಬಟ್ಲ ಹಾಲು ನಮ್ ಹತ್ರ ಕುಡಿಲಿಕ್ಕಾಗುದಿಲ್ಲ
ವಂದ್ ಬಟ್ಲ ಹೂವು ನಿಮ್ಮ ಹತ್ರ ಸೂಡಲಿಕ್ಕಾಗುದಿಲ್ಲ

೧೯ ನೆಡು ಸಮ್ದುರದಾಗ್ ಹೋಗ್ ಹೋಗ್ತ ಅಡ್ಡಗಟ್ಟದೆ

೨೦ ಸೋತಿಲ್ ಸೋರಿ ನೆಟ್ಟ ಸಮುದ್ರಕ್ ಸೋಗ್ ಕೊಟ್ಟೆ
ದೊರ್ (ದೊರೆ) ವೊಯ್ಯನಾರ, ದೊರಿಹೆಂಡ್ತಿ ವಳಗ್ ಹಾಕ್‌ನಾರ

೩. ಮರ-ಬಳ್ಳಿ-ಹೂ

೨೧ ಹಾಲ್ ಹಾಲ್ ಹಶಿನ್ ಹಾಲು
ಕೋಡ್ ಕೋಡು ಮಿಗನಕೋಡು
ಕಾಯ್ ಕಾಯ್ ಹುಳಿ ಕಾಯಿ

೨೨ ಗಿಡಾನೇ ಜರಿ, ಅದ್ರ ಕಾಯಿ ಬಂಗಾರ

೨೩ ವಂದ್ ದುಡ್ನಲ್ಲಿ ಎಣ್ಣೆ, ಎಲೆ, ಕಾಳು ಕಡ್ಲೆ ತರೊ

೨೪ ಅಮ್ಮನ ಮುಕಳ್ಯಾಗ ಮಗ ಸಿಕ್ ಬಿದ್ದಾವ್ನೆ ಅದೆಂಥದು ?

೨೫ ಸೋಳಿ ಮನಿ ಮುಂದೆ ಸಿಂಗಾರ್ದ ಗಿಡಹುಟ್ಟಿ
ಸೋಳಿಗ್ ತಾಗಿ ಸೋಳಿ ಮಗಳ್ಗ್ ತಾಗಿ
ಹೊಳ್ವನ್ ಮೀನ್ಗ್ ತಾಗಿ, ಕೂಗೂ ಕೋಳಿಗ್ ತಾಗಿ, ಇನ್ನೂ ಮಿಕ್ಕದೆ
ಸೋಳಿ ಅಂದರೆ ಸೂಳೆ

---

೧೮ ಚಂದ್ರ. ನಕ್ಷತ್ರ

೧೯ ಸೂಲಿ (ಸೂರ್ಯ)

೨೦ ಸೂಲಿ, (ಸೂರ್ಯ)

೨೧ ಗರ್ಜಲ (ಕವಳಿಕಂಟಿ) ಗಿಡದ ಹಾಲು ಮುಳ್ಳು

೨೨ ಮೆಣಸಿನ ಗಿಡ

೨೩ ಎಳ್ಳಿನ ಗಿಡ

೨೪ ಗೋಡಂಬಿ ಬೀಜ

೨೫ ಮೀನು, ಕೋಳಿಗಳ ಮೇಲೋಗರಕ್ಕೆ ಹಾಕುವ ಅರಿಸಿನ, ಅಡಿಕೆಗೊನೆ

೨೬ ಉದ್ದ ಮರದ ಮೇಲೆ ಗಿಜಗನ ಹಕ್ಕಿ ಮೊಟ್ಟೆ ಹಾಕ್ತದೆ
ಮೊಟ್ಟೆ ಅಂದರೆ ತತ್ತಿ

೨೭ ಅಹಾ ಗಿಳಿಯೇ, ಮೋಹದ ಗಿಳಿಯೇ,
ಹಾದಿ ಮೇಲ್ ಹೋಪೋರ ಕೈಬೀಸಿ ಕರಿಯೇ

೨೮ ಹಿಂದೆ ನೂರಾರು ಜನ, ಮುಂದೆ ಕೆಂಪಿಟಪ್ಪಿ ಸಾಯಬ (ಟಪ್ಪಿ. ಟೊಪ್ಪಿ)

೨೯ ಘಟ್ಟದ ಮೇನ್ನ ಸೂ? ನಿತ್ತಲ್ಲೇ ಬಾಳಂತಿಯಾತದೆ

೩೦ ಗೆಣ್ಣು ಗೆಣ್ಣು ಗಿಡ ನೆಟ್ಟಿ, ಗಿಂಡಿಯಲಿ ನೀರೆರೆದಿ,
ಅಂದ ಹೂಂಗಿನ ಚೆಂದ ನೋಡೋ ಅಳಿಯ ಕೊಮಾರಾ
ಗೆಣ್ಣು ಗೆಣ್ಣು, ಅಲ್ಲಲ್ಲಿನ ಸಂದು ಗಂಟು

೩೧ ಶಣ್ಣ ಪೋರಗೆ ಕೆಂಪಿಪುಕಳಿ

೩೨ ಬುಡಗುಟ್ಟ, ಮೊಳದುಂಡು, ತೂ ಚಕ್ರ

೩೩ ಆಕಾಶದಿಂದ ಬೆಳ್ಳಿ ಗುಂಡ್ ಬೀಳ್ತು

೩೪ ಆಕಾಶದಲ್ ನೀರ ಮಂಟಪ

೩೫ ಮುಳ್ಳಿನ ಗಿಡದಲ್ಲಿ ಮಾಣಿಕ್ಯ

೩೬ ನೂರಾವಂದ್ ಎತ್ತಿಗೆ ವಂದೇ ಬಾಲ

೩೭ ಹುಟ್ಟುತ್ಲೆ ಸೀರೆ ಉಡ್ತು, ದೊಡ್ಡಾದ ಮೇಲೆ ದುಂಡಗಿರ್ತು

---

೨೭ ಕೇದಿಗೆ ಹಿಂಡು
೨೮ ಬಾಳೆಗೊನೆ ಕುಂಡಿಗೆ
೨೯ ಬಾಳೆ ಗಿಡ
೩೦ ಕಬ್ಬು
೩೧ ಶಣ್ಣ (ಸಣ್ಣ) ಮೆಣ್ಸಿನಹಣ್ಣು
೩೨ ಅನನಸ್
೩೩ ಹೊಂಬಾಳೆ ಅಡಕೆಮರದ ಎಳೇ
ಗೊಸೆಯ ಸಿಂಗಾರದ ಮೇಲಿನ ಹಾಳೆ
೩೪ ತೆಂಗಿನಕಾಯಿ
೩೫ ಗುಲಾಬಿ ಗಿಡ, ಹೂ
೩೬ ಬಾಳೆ ಗೊನೆ
೩೭ ಕಳಿಲೆ

೩೮ ಮೂರು ಕಣ್ಣುಂಟು, ತೆಂಗಿನ ಕಾಯಲ್ಲ ಆರು ಶರೆ ಉಂಟು, ಹೀರೆ ಕಾಯಲ್ಲ (ಶರೆ ಅಂದರೆ ಧಾರೆ. ಹೀರೆಕಾಯಿ ಸೆರೆಯಂತೆ ಉಬ್ಬಿದಭಾಗ) ಮೇಲೆ ಮುಳ್ಳುಂಟು ಹಲಸಿನ ಕಾಯಲ್ಲ

೩೯ ವಂದ್ ಮರಕ ಹತ್ದ್ರೆ ವಂದು ಕೆರೆದಿಂಬಕ್ ಹೋಗ್ತ್ರದೆ ದಿಂಬ ದಂಡೆ

೪೦ ವಿಜಾಪುರ ಹತ್ತಿ ಕೆರೆಯಲಿಪ್ಪ ತಾವರೆ ಹೂ
ತೋಟದಲ್ಲಿರುವ ಮೆಣಸಿನ ಕಾಯಿ
ನಾಕಕ್ಕೆ ವಂದೇ ತೊಟ್ಟು

೪೧ ಕಡ್ಡಿಯಂತ್ ಪೋರಂಗ್ ಬೆಳಿಟಪ್ಪಿ

೪೨ ಹುಟ್ಟುತ್ತಲೆ ಹುಡುಗನಿಗೆ ಟೊಪ್ಪಿಗೆ ಹಾಕಿರತಾರೆ

೪೩ ಗಟ್ದ ಕೆಳಗಿಂದ ಮೂರ್ ಸೂಳೆರು ಬರ್ತಾರೆ
ವಂದು ಕಾಡಿಗ್ ಹೋಗ್ತ್ರದೆ
ವಂದು ಮರಕ್ ಹತತದೆ
ವಂದು ಕೆಳಗಿಳದ್ ಹೋಗ್ತ್ರದೆ

೪೪ ಕಲ್ಲಲ್ ಹುಟ್ತ್ರು, ಕಣಕಣ ಗುಡ್ತ್ರು, ಬಾನ್ದಲ್ ಹೋಗ್ತ್ರು, ಕಡುಚೆಂಡಾಡ್ತ್ರು

೪೫ ಆಕಾಶಕ್ ಹೋಯ್ಕಂಡ್ ಚಾಮರ ಬೀಸ್ತ್ರು

---

೩೮ ಔಡಲ ಕಾಯಿ
೩೯ ಶೀತೆದಂಡೆ, ಮರದ ಮೆಲೆ ಪರಾವಲಂಬಿ ಸಸ್ಯ ಆರ್ಕಿಡ್ ಜಾತಿ
೪೦ ಬೂರಲ ಹತ್ತಿ, ಹೂ, ಕಾಯಿ, ಬೀಜ, ನಾಕು ನಾಲ್ಕು
೪೧ ಹಿತ್ತಂಡೆ ಹುಲ್ಲು
೪೨ ಬದನೆಕಾಯಿ
೪೩ ಕೇದಿಗೆ ಹೂ, ಶೀತೆದಂಡೆ ಹೂ, ತಾವರೆ ಹೂ
೪೪ ಬಿದಿರುಮರ
೪೫ ಬಿದಿರುಮರ

೪೬ ಯನ್ನಪ್ಪ ವಂದ್ ಯೆಮ್ಮೆ ತಂದಿದ್ದ, ಕಲ್ ಕಟ್ದ ವಿನಾ ಕರೀತೇ ಇಲ್ಲೆ

೪೭ ಬಾರಕೂರಕ್ಕ ಬದಿ ಮೇಲ್ ಬಸಿರಿ

೪೮ ಅಂಬಾರದಲ್ ಅಂಬು ಜೋಲ್ತು
ಅಂಬಾರ. ಅಂಬರ, ಆಕಾಶ

೪೯ ತೊಟ್ಲೊಂದು ಶಿಶು ಎರಡು

೫೦ ಅಜ್ಜ ಮಗ್ಗಲಲ್ ಇಂಗಾಳ (ಕೆಂಪು ಕೆಂಡ)

೫೧ ಸರಕ್ಕನೆ ಬರ್ತ್ತು, ಮುಡಿಕಂಡ್ ಕೂರ್ತ್ತು
ಮುಡಿಕಂಡ್, ಮುರುಟಿಕೊಂಡು, ಮುದುಡಿಕೊಂಡು

೫೨ ಅಪ್ಪ ತಪ್ಪ ಬೋಳಿಮಗ, ದೇವರ ತಲೆ ಮೇಲ್ ಉಚ್ಚೆ ಹೊಯ್ತ್ತಿರುವ

೫೩ ಗಟ್ಟದ ಕೆಳಗಿನ ಬಟ್ಟೆ ದೇವರ ಮುಂತಟಿ ಉಚ್ಚೆ ಹೊಯ್ತು

೫೪ ಹಸಿರ ಹಾವು ಹರಿತಾ ಮೊಟ್ಟೆ ಹಾಕ್ತು

೫೫ ಕಂಡಿ ಕೊಡ್ಲಕ್ಕ ಕುಂಡೆ ಮೇಲೆ ಬಸುರಿ
ಕೊಡ್ಲು, ದರಿ, ತಗ್ಗಿನ ಕೊಳ್ಳ

೫೬ ಅಪ್ಪ ಕೆಮಿಹರ್ಕಿ, ಮಗ ಮುಯ್ಟ್ಯ
ಮುಯ್ಟ್ಯ ಅಂದರೆ, ಮುದುಡಿದವ, ಮುದುಡಿದಂತೆ ದುಂಡು
ಅಪ್ಪ ದಂಡೀದಾರ
ದಂಡಿ ಅಂದರೆ, ದೇಟು ಕಾಂಡ

೪೬	ಬೈಣೇ (ಬಗಿನೆ) ಮರ	೫೨	ಶೀಯಾಳ (ಎಳನೀರು)
೪೭	ಬಾಳೆ	೫೩	,, ,,
೪೮	ನುಗ್ಗೆಕಾಯಿ	೫೪	ಯಾಲಕ್ಕಿ ಗಿಡ
೪೯	ಶೇಂಗಾ	೫೫	,, ,,
೫೦	ಕೆಂಪು ಗೊಂಡೆ (ಚೆಂಡು) ಹೂ	೫೬	ಕೆಮುಡಿ(ಕೆಮ್ಮುಂಡೆ ಕಲ್ಲಂಗಡಿ ಬಳ್ಳಿ, ಎಲೆ, ಹಣ್ಣು ದಂಟು
೫೧	ಅಡಿಕೆ ಕೊನೆ		

೫೭ ವಂದ್ ಮರ ಐದ್ ಮನೆ ಕಟ್ಟಿದ

೫೮ ವಂಪಜ್ಜಿ ಮಡ್ಲಲ್ ಬೆಂಕೆ ತಕಂಡಿ ವೋಡ್ತೆ ಹೋತಿದು

೫೯ ದಾರ ಅದೆ, ಹೇರಿಕಾಯಲ್ಲ; ಹುಳಿಯುದೆ ಹುಳಸೆಹಣ್ಣಲ್ಲ;
ಗೋಲದೆ ನಿಂಬಿಹಣ್ಣಲ್ಲ. ಗೋಲ, ದುಂಡಗೆ ವರ್ತುಲಾಕಾರ

೬೦ ತಲೆಯ ಮೇಲೆ ಹುಲ್ಲು ಹೊತ್ತವಳು
ಹೊಟ್ಟೆಯಲ್ಲಿ ಪನ್ನೀರು ಕೊಡ ಹೊತ್ತವಳು
ಮುಖದಲ್ಲಿ ಮೂರು ಕಣ್ಣು ಇದ್ದವಳು
ದೇವರಿಗೆ ಬೇಕಾದವಳು, ಹಾಗಿರುವಾಗ ಇದರ ವಗಟು ?

೬೧ ಕೆರೆಯಲ್ಲಿ ಹುಟ್ಟುವದು, ಕೆರೆಯಲ್ಲಿ ಬೆಳೆಯುವದು
ಕೆರೆನೀರ ಕುಡಿವದು, ಕೆರೆವಂಡೆಮೇಲೆ ಕುಣಿದಾಡುವದು

೬೨ ತಾಳ್ ಗಿಂಡೆ, ತತ್ತ್ಳ್ ಗಿಂಡೆ, ಮುಚ್ಲ ತೆಗೆದ್ರು ಮುನ್ನೂರ್ ಗಿಂಡೆ
ಗಿಂಡೆ–ಗಿಂಡಿ. ತತ್ತ್ಳ್–ತಳತಳಿಸುವ

೬೩ ಅಪ್ಪ ಜಾಕಳಿ, ಮಗ ಪುರೂಟಿ, ಅಬ್ (ಅಬ್ಬೆ) ಚಪ್‌ಹರ್ಕಿ

---

೫೭ ತೆಂಗಿನ ಮರ ಅದರ ಹೆಡೆ

೫೮ ಹಬ್ಬರಿಗೆ (ಕನಕಾಂಬರ) ಗಿಡ ಇಲ್ಲವೆ ಕೆಂಪು ಗೊಂಡೆ ಹೂ ಗಿಡ

೫೯ ನೆಲ್ಲಿಕಾಯಿ

೬೦ ತೆಂಗಿನ ಕಾಯಿ

೬೧ ತಾವರೆ

೬೨ ಸಾವಂತ್ರಿ (ಸೇವಂತಿಗೆ ಹೂ)

೬೩ ಜಾಕಳಿ ಅಂದರೆ ಎತ್ತರ ತೆಂಗಿನ ಮರ
ಪುರೂಟಿ ಅಂದರೆ ದುಂಡನ್ನ ತೆಂಗಿನ ಕಾಯಿ
ತೆಂಗಿನ ಗೊನೆಯು ಚಾಪರಿಕೆ

೬೪ ಅಬ್ ಕರಿದ: ಮಗ ಬೆಳಿದ
ಮಗಳ ಮಗಳು ಹೊನ್ನ ಬೊಂಬೆ

೬೫ ಅಪ್ಪ ಆಕಾಶಕ್ ಹೋದ
ಅಣ್ಣ ಯಾಪಾರಕ್ ಹೋದ
ತಾಯಿ ನೀರ ತಂತು
ಅಕ್ಕ ಸೋಬನಕ್ ಹೋತು

೬೬ ಶವಣೂರ ಬಣ್ಣ. ಶಾಶ್ಮೆ (ಸಾಸಿವೆ) ಗಿಂತೂ ಶಣ್ಣ

೬೭ ಆಕಾಶಕ್ ಹೋಗಿ ಅತ್ತಿ ತಂದ
ಪೇಟಿಗ್ ಹೋಗಿ ಅಣ್ಣನ ತಂದ

೬೮ ದೊಪ್ಪನೆ ಬಿತ್ತು ಅಪ್ಪೆಕಾಯಿ, ಹೆಕ್ಕುವವರಿದ್ದಾರೆ, ತಿನ್ನುವವರಿಲ್ಲ

೬೯ ವಂದ್ ಹೊರೆ ಮಡ್ಲು, ಮಡ್ಲಲ್ಲಿ ಸೂಳಿರ್ ಕೇರಿ ಕಟ್ಟಿ,
ಸುಂಕದ ಕಟ್ಟಿ ಕಟ್ಟಿ, ಮುಂದ್ ಕಾಂಬು ಪೇಟಿ ಕಟ್ಟಿ,
ಮತ್ ಅರ್ಧ ಹೊರ್ (ರೆ) ಮಡ್ಲ ಹೆಚ್ಚದೆ

೭೦ ವಂದ್ ಮನಶಂಗೆ ಮೈಯೆಲ್ಲಾ ಬೂದಿ, ತಲೆಗೈಲ್ಲಾ ರುದ್ರಾಕ್ಷಿಸರ

೭೧ ಬಂಕಾಪುರದ ಬಾಳಿಕಾಯಿ, ಕೆರಿಲಿರುವ ತಾಂಬರೆಳ್ಳಿ ಹೂಗು
ಗೊಡ್ಡಿ(ಗುಡ್ಡ) ಮೇನ್ನ ಗೋರಿ ಮೆಣಸು: ಮೂರ್ಕು ವಂದೇ ತೊಟ್ಟು

---

೬೪ ಬೆಳ್ಳಟ್ಟೆ, ಬೆಳ್ಳಾಟೆ ಗಿಡ ಹಸಿರೆಲೆಗಳು ಬೆಳಿಎಲೆಗಳೂ ಇರುವ ಗಿಡ
ಹೂ ಸಣ್ಣ ಕೆಂಪು ಹೂ

೬೫ ಅಡಕೆಮರ ಅಡಕೆಬೇರು ಸಿಂಗಾರ (ಹೂ)

೬೬ ಹರಗಿ (ಹರಿವೆ) ಬೀಜ

೬೭ ಸಿಂಗಾರ ಕೊನೆ, ಅಡಕೆ

೬೮ ಅಡಿಕೆಮರದ ಸೋಗೆ (ಟೊಂಗೆ)

೬೯ ಕ್ಯಾದಗಿ ಕೊನೆ, ಗಿಡ

೭೦ ಔಡಲ ಗಿಡ

೭೧ ಬೂರಲ ಮೊಕೆ (ಮೊಗ್ಗೆ ಹೂ ಕಾಯಿ)

೭೨ ಆಕಾಸಕ್ ಹೋಗುದು ಸಿಂಗಾರಗೌರಿ
ಅಪ್ಪ ಭೂಮಂಡ್ಲಕ್ ಹೋತ, ಮಗ ಅಂಗಡಿಗ್ ಹೋತ

೭೩ ಅಡಿ ಕಂಬ; ನೆಡು (ನಡುವೆ) ಮಡಕೆ
ಕಡಕುಡಿಕೆ ಮೇಲೆ ಹುಲ್ಲು

೪. ಶರೀರ ಅವಯುವ

೭೪ ಅಕ್ಕನ ಕೆರೆತರಬೇಕಂತ, ಇದು ಅಕ್ಕಿಲ್ಲಂತೆ,
ಅಕ್ಕಿಲ್ಲದಿರೆ ಸಾಲ ತರಬೇಕ ಅಂದದ್ದು,
ಸಾಲ ತಂದ್ರೆ ತೀರ್ಸವ್ರೋರ್ ಯಾರು? ನಾಯೀವೆ ಗಿಡ್ಡಣ್ಣ
ಈವೆ ಇರುವೆನು

೭೫ ಸಿದ್ದಾಪುರ ಪೇಟೆಯಲ್ಲಿ ಬಿದ್ದು ಹುಟ್ದ ಬೆಳ್ಳುಳ್ಳಿ
ಜಾತಿಗಾರ ಬೆಳ್ಳುಳ್ಳಿ; ವಳ್ಳೆ ವಳ್ಳೇ ಹುಡ್ಗರ್ ಸಿಕ್ರೆ
ತೂಕಾ ಮಾಡೂ ಬೆಳ್ಳುಳ್ಳಿ

೭೬ ಕಂಬ; ಕಂಬದ ಮೇಲೆ ದಿಂಬ ದಿಂಬದ ಮೇಲೆ ಶಿವನ ಕೋಟೆ
ಶಿವನ ಕೋಟೆ ಮೇಲೆ ಎರಡು ಮುತ್ತುಗಳಿರುತ್ತವೆ

---

೭೨ ಅಡಿಕೆಮರದ ಸಿಂಗಾರಕೊನೆ ಅಡಿಕೆ ಕೊನೆ ಹೂ
ಅಡಿಕೆಮರದ ಬೇರು ಅಡಿಕೆ

೭೩ ತೆಂಗಿನಮರ, ನಡುವೆ ಮಡಕೆ ಅಂದರೆ, ತೆಂಗಿನ ಕಾಯಿ
ಕುಡಿಕೆಮೇಲೆ ಹುಲ್ಲು, ಮೇಲಿನ ತೆಂಗಿನ ಹೆಡೆ ಎಲೆಗಳು

೭೪ ಹೆಬ್ಬೆಟ್ಟು, ಹೆಬ್ಬೆರಳು

೭೫ ಮದುವೆಯಾಗಿರವ ಗಂಡು ಹೆಣ್ಣುಗಳ ಸುಂದರ ಮಗಳು

೭೬ ಕಾಲು, ಡಿಂಭ (ಶರೀರ) ಮೋರೆ, ಎರಡು ಕಣ್ಣು

೭೭ ಎರಡು ಮಂದಿ ನಡೆಯೋರು, ಎರಡು ಮಂದಿ ಕೆಲಸ ಮಾಡೋರು,
ಎರಡು ಮಂದಿ ಕೂತು ಕಾಂಬೋರು ಒಬ್ಬ ಕೂತು ತಿಂಬವ
ಇಪ್ಪತ್ನಾಲ್ಕು ಮಂದಿ ಕೊಬ್ಬಿಳಿಸೋರು ಅದೆಂಥದು ?

೭೮ ಗರಗರಕು ತಿನ್ನುದೆ, ಬಾನಕ್ ಬಲ್ಲಿ (ಬಳ್ಳಿ) ಬೀಸ್ತದೆ

೭೯ ಸಂಬಾರ ಬಟ್ಟೆಗ್ ತುಂಬತದೆ

೮೦ ಎರಡು ಮಾಯ್ನ (ಮಾವಿನ) ಹಣ್ ಬಿತ್ತು:
ಹತ್ ಜನ ವೋಡದ್ರು; ಐದ್ ಜನ ಹೆಕ್ದ್ರು
ಹೆಕ್ದವರ್ ತಿನ್ನಲಿಲ್ಲ; ಮತ್ತೊಬ್ಬ ತಿಂದಾ
ತಿಂದೊನ್ ಸಾಯಲಿಲ್ಲ; ಮತ್ತೊಬ್ಬ ಸತ್ತ

೮೧ ದಪ್ಪನೆ ವಂದ್ ಅಪ್ಪೆಕಾಯ್ ಬೀಳ್ತು
ಯೆರಡು ಜನ ನೋಡ್ತೊ; ಹತ್ ಜನ ಕೊರಿತೊ
ಮೂವತ್ತೆರಡು ಜನ ತಿಂತೊ

೮೩ ಹತ್ತು ಅಂದ್ರೆ ಮುಚ್ತಿಲ್ಲೆ, ಇಪ್ಪತ್ತು ಅಂದ್ರೆ ಮುಚ್ತು

೮೪ ಬಾಮಿ, ಬಾಮಿ ಮ್ಯಾಲೊಂದ್ ಕೊಂಬು

---

೭೭ ಎರಡು ಕಾಲು ಎರಡು ಕೈ ಕಣ್ಣು ಬಾಯಿ ಮತ್ತು ದೇಹ ಇಪ್ಪತ್ತು
ಬೆರಳು ಕೈ ಕಾಲು ನಾಲ್ಕು, ಬಾಯಿ, ಬಾಲ, ಹೊಟ್ಟೆ

೭೮ ದನ ಮೇವುದು

೭೯ ಸಂಬಾರ ಬಟ್ಲು, ಸಂಬಾರ ಜೇನಸು ಹಾಕುವ ಕರಡಿಗೆ ಇಲ್ಲಿ ಹೊಟ್ಟೆ

೮೦ ಹತ್ತು ಕಾಲ್ ಬೆರಳು ಐದು ಕೈಬೆರಳು ಬಾಯಿ ತಿಂದಿತು ಹಣ್ಣು ಸತ್ತವು

೮೧ ಅಪ್ಪೆ, ಶ್ರೇಷ್ಠ ಉಪ್ಪಿನಕಾಯಿ ಮಾವಿನಕಾಯಿ ಎರಡುಜನ ಎರಡು
ಕಣ್ಣು, ಹತ್ತು ಕೈಬೆರಳು, ಮೂವತ್ತೆರಡು ಹಲ್ಲು

೮೩ ಬಾಯಿ

೮೪ ಬಾಯಿ, ಮೂಗು

೮೫ ದೊಡ್ಡ ಗುಡ್ಡೆವಳಗೆ (ಗುಹೆಯೊಳಗೆ ಎಂದರೆ ಸರಿ) ಕೆಂಪು ಹಾವು

೮೬ ನಡುಮನೆಯಲ್ಲಿ ಕೊಡಿಬಾಳೆ ಎಲೆ

೮೭ ಒಂದು ದಂಡಿಗಿ, ಎರಡು ಬಾವಿ, ಅದೆಂಥದು ?

೮೮ ಕೆಳ್ಗನ ಮನಿ ಅಕ್ಕ, ಮೇನ್ನ ಮನಿ ಅಕ್ಕ
ಅವ್ರ್ಗೆ ವಂದ್ ಹೊತ್ತೂ ಸುಕ ಇಲ್ಲ
ಹೊಡ್ದಾಡತೆ ಇರುದ ಹಗ್ಲ ಹೊತ್ತಿಗ

೮೯ ಮಂಜ ಮಂಜಿರ್ಕಿಲ್ ಸುಮ್ನ ಬಿದ್ ಬಿಟ್ರ್ರಾಯ್ತು ಅಕ್ಕ-ತಂಗಿ
(ಮಂಜಾರ್ಕಿ, ತೆಂಗಿನ ಹೆಡೆ)

೯೦ ವಂದ್ ಬೋಳ್ ಹುಲ್ಲ ಅಣ್ಣ ಕೈಲೂ ಕೊವ್‌ಕಾಗುದೆಲ್ಲ
ತಮ್ನ ಕೈಲೂ ಕೊವ್ಕಾಗುದೆಲ್ಲ

೯೧ ಶಣ್ ಪೋರಗೆ ಶಣ್ ಬೆಳಗಲ್ಲ ಕಂಟೆ

೯೨ ಅಂಕುಡೊಂಕಾದ ಬಾವಿ. ನಾರಾಯಣ ಕಟ್ಟಿಸಿದ ಬಾವಿ,
ಬಗ್ಗಿ ನೋಡಿದರೆ ಒಂದು ಹನಿ ನೀರು ಇಲ್ಲ

೯೩ ಕಿತ್ರೆ ಬಾಡುದಿಲ್ಲ; ನೆಟ್ರೆ ಚಿಗ್ರುದಿಲ್ಲ

೯೪ ಕೊಂಬಿನ ಮ್ಯಾಲೊಂದು ಹಕ್ಕಿ;
ಹಕ್ಕಿ ಮ್ಯಾಲೊಂದು ಕಪ್ಪು ಕಾಡಿಗೆ ಗುಡ್ಡಾ

---

೮೫ ನಾಲಿಗೆ
೮೬ ನಾಲಿಗೆ
೮೭ ಮೂಗು
೮೮ ಕೆಳಗಿನ ರೆಪ್ಪೆ ಮೇಲಿನ ರೆಪ್ಪೆ
೮೯ ಕೆಳಗಿನ ಕಣ್ ಜವೆ,
ಮೇಲಿನ ಕಣ್ ಜವೆ
೯೦ ಬೋಳುತಲೆ ಬೋಳ ಅಂದರೆ ಗುಡ್ಡ
೯೧ ಹಲ್ಲು
೯೨ ಕಿವಿ
೯೩ ಕೂದಲು
೯೪ ಮೋರೆ, ಹಣೆ, ಕೂದಲು

೯೫ ಚಿಟ್ ಚಿಟ್ ಪೆಟ್ಗೆ, ಚೀನಿ ಪೆಟ್ಗೆ
ಅವವ್ರ ಮಕ್ಕಳ ಕಂಡಲ್ಲಿ ಅಳೂ ಪೆಟ್ಗೆ

೯೬ ಹಾಕಿದ್ದನ್ನೆಲ್ಲಾ ಅರೆಯುವೆ, ಹಿಟ್ಟಿನ ಗಿರಣಿ ನಾನಲ್ಲ:
ಬೇಡಾಗಿದ್ದನ್ನು ಹೊರ ಹಾಕುವೆ

೯೭ ಕಣ್ಣಿಗ್ ಕಾಣ್ತೈಲ್ಲೆ; ಕೈಗ್ ಶಿಕ್ತು

೯೮ ಬೆಳಿ ಸಮುದ್ರದಲ್ ಕರಿ ಕಲ್ಲು

೯೯ ಬಾಗಿಲ ಮುಂದಿನ ಹೊಳೆ: ಕೆಸರಿಲ್ಲೆ ನೀರಿದ್ದು

೧೦೦ ಐದ ಜನ ಬಟ್ಟಕ್ಕೊ ವಂದೇ ಬಾಳಿಲ್ ಊಟ ಮಾಡ್ತೊ

೧೦೧ ತಟ್ಟ ಗಡಿಗೆಲಿ ಕೆಟ್ಟ ಮೊಸರು
(ತಟ್ಟ, ತಟ್ಟು ಅಂದರೆ, ರಂಧ್ರವುಳ್ಳ)

೧೦೨ ಅಪ್ಪ ತೋಡಿದ ಬಾವಿ ಉಪ್ಪು ನೀರು: ಕುಡಿಯಲಾರದ್ದು

೫. ಆಹಾರ

೧೦೩ ಚಂದನೆ ಚೆಲುವೆಯರು (ದುಂಡು ದೇಹದವರು) ಅವರಿಬ್ಬರು
ಗಡಾನೆ ಗಡುಗೆಯರು (ಇಲಿಬುಡ್ಕನಂತೋರು) ಅವರಿಬ್ಬರು
ಹುಳುಕನ್ (ಹುಳುಕಿನ) ಟೊಣಪ್ಯಾರು ಅವರಿಬ್ಬರು

೧೦೪ ತತ್ತಗಿಂಡಿ, ತಾರಗಿಂಡಿ, ಒಡೆದು ನೋಡಿದರೆ ಮುತ್ತಿನ ಗಿಂಡಿ

---

೯೫ ಮೊಲೆ, ಚಿಟ್ ಪೆಟ್ಗೆ ಸಣ್ಣ ಪೆಟ್ಟಿಗೆ, ಚೀನಿ(ರೇಸಿಮೆ) ಪೆಟ್ಟಿಗೆ
೯೬ ಹೊಟ್ಟೆ
೯೭ ಕಿವಿ, ಕಣ್ಣು ಎಂದೂ ಹೇಳಬಹುದು
೯೮ ಕಣ್ಣು
೯೯ ಕಣ್ಣು
೧೦೦ ಕೈಬೆರಳು
೧೦೧ ಸುಂಬಳ (ಸಿಂಬಳ)
೧೦೨ ಉಚ್ಚಿ
೧೦೩ ಹೋಳಿಗೆ ಕರಿಗಡಬು ದೋಸೆ
೧೦೪ ದಾಳಿಂಬದ ಹಣ್ಣು

೧೦೫ ಹಸಿರು ಕೋಟೆ ಒಳಗೆ ಬಿಳಿ ಕೋಟೆ
ಮತ್ತೆ ಕೆಂಪು ಕೋಟೆ; ಅದರಲ್ಲಿ ಕಪ್ಪು ಸೈನಿಕರು

೧೦೬ ಅಂಗಿ ಚಡ್ಡಿ ಕಳೆದಾ; ಬಾವಿಯಾಗ ಜಿಗಿದಾ

೧೦೭ ಅಪ್ಪನ ತೋಟದಲ್ಲಿ ಇಂತಿಂಥಾ ಬದ್ನೆ ಕಾಯಿ
ತೊಟ್ಟಿಲ್ಲಾ ತುದಿ ಇಲ್ಲಾ
ಶಿದ್ದೆ, ಶಿದ್ದೆ ಮೇಲ್ ಮುದ್ದೆ, ಹುಲ್ಲ ಮೇಲ್ ಹುಳ

೧೦೮ ಕಟ್ಟೆಯೆರಗು (ಕಟ್ಟಿರುವೆ) ಕಂದನ್ನ ಹಾಕಿ,
ಒಂಬತ್ ಮೊಗೆ ಹಾಲ ಕರೆದು, ಬೀಗರು ಬಿಜ್ಜರುಂಡು
ಮತ್ತೂ ಮೂರು ಮೊಗೆ ಹಾಲು ಉಳತ್ತು (ಉಳಿಯಿತು)
ಇದೇನಾಶ್ಚರ್ಯ ಹೇಳಿ, ಸಿದ್ದಾಪುರದ ಸುಬೇದಾರರು
ತಗಣೆ ಮೂಗದಾಣ ಹಾಕ್ಕಂಡ್ ಬಂದ್ರು

೧೦೯ ಗುಡುಗುಡು ಗುಟ್ಟಿತ್ತು ನಾರಿ; ಒಡೆದು ಮೂಡಿತು ನಾರಿ,
ಗಡ್ಡೆಯಲ್ಲ, ಗೆಣಸಲ್ಲ, ಮಡಿವಾಳನ ಬೇರಲ್ಲ
ಹೇಳಿದವ ಜಾಣ ಹೇಳದವ ಕೋಣ

---

೧೦೫ ಕಲ್ಲಂಗಡಿ ಹಣ್ಣು

೧೦೬ ಬಾಳೆಹಣ್ಣು, ಬಾಳೆಕೊನೆ

೧೦೭ ಬೆಣ್ಣೆಮುದ್ದೆ, ತಲೆ, ಮಂಡೆ, ಹೇನು

೧೦೮ ಇಲ್ಲಿ ಕಟ್ಟೆಯೆರಗು ಗುರೆಳ್ಳು, ಕೈಲಿ ತಿಕ್ಕಿ ತೆಗೆದ ಹಾಲು ಎಣ್ಣೆ
ತಗಣೆ ಅಂದರೆ ತತ್ತರಣೆ ಬುರುಡೆ ಮಣ್ಣಿನ ಪಾತ್ರೆ. ಆ ಪಾತ್ರೆ
ಹಗ್ಗದಲ್ಲಿ ಕಟ್ಟಿಕೊಂಡು, ಬಗಲಲ್ಲಿ ಇಟ್ಟುಕೊಂಡು, (ನೀರು
ಹಾಕಿಕೊಂಡು) ಕುಡಿಯಲು ಬಂದ ಮೂಗ್‌ದಾಣ ಅಂದರೆ,
ಪ್ರಾಣಿಯ ಮೂಗಿಗೆ ಸುರಿದ ದಾರ, ಇಲ್ಲಿ ಹಗ್ಗ

೧೦೯ ಹೊದಲು (ಅರಳು)

೧೧೦ ಕಿರೀಟವುಂಟು; ರಾಜನಲ್ಲ

೧೧೧ ಶಿವಲಿಂಗರಾಯನೂ ಮೂರು ತಿಂಗಳಾ
ನೆಲದಡತಾಗ್ (ಅಡಿಗೆ) ತಪಾಸ್ (ತಪಸ್ಸು) ಮಾಡಿ,
(ಗುಡ್ಡಿ ಹನುಮಂತಯ್ಯನವರು ಬಂದು ಎಬ್ಬಿಸುವಂತವರಾಗಿ: ಪಾಠ)
ಕೋರೀರಾಯರು ಯೆಬ್ಬಿಸಿಕೊಂಡೂ
ಗೋಣಿರಾಯರ ಜತೆಗೂಡಿಕೊಂಡೂ
ಗಾಡಿಯನ್ನೆ ತುಂಬಿಸಿಕೊಂಡೂ
ಯಸಳೂರ ಪೆಂಟೆಗೆ (ಪೇಟೆಗೆ) ಹೋಗುವಂತವನಾದ
ಅನ್ನದ ರಾಯನ ಜೊತೆಗೂಡಿಕೊಂಡು
ಶಿವಲಿಂಗರಾಯನು ನರಲೋಕಕ್ ಹೋಗ್ವಂತವನಾದ
(ಸ್ವರ್ಗದ ಬಾಗಿಲಲ್ ಹೊಕ್ಕು ನರಕದ ಬಾಗಿಲಲ್
ಪಾರಾಗ್ ಹೋಗ್ತಾರೆ)

೧೧೨ ಅಗ್ನಿ ಬರಮದೇವರೇ, ಅಗ್ನಿ ಬರಮದೇವರೇ,
ಮೂರ್ ತಿಂಗಳಾ ನೆಲದಡತಾಗ್ ತಪಾಸ್‌ವಂದ್ನೆ ಮಾಡ್ದೆ
ಕೋರೀರಾಯರ್ ಬಂದ್ ತಪಾಸ್ ಮಾಡ್‌ದ್ರು
ಕಬ್ಬಿಣ ತಾಗ್ತಂಬೂ ಲವಲವಿಕಿ ಮೇಲೆ, ಗಡ್ಡ ಮೀಸಿ ಕೆತ್ಕಂಡಿ
ಗಂಗಾನದಿಗ್ ಹೋಗ್ ಸಾನ (ಸ್ನಾನ) ಮಾಡ್ದೆ
ಬಸಪ್ಪನೋರ್ ಬಂದ್ ಹೇರ್‌ಕೊಂಡ್ ಹೋದ್ರು
ಕೆಂಚಾಲ್ ಮೇನ್ ತೂಗ್‌ದ್ರು

---

೧೧೦ ಬದನೆಕಾಯಿ

೧೧೧ ಶಿವಲಿಂಗರಾಯ ಉಳ್ಳಾಗಡ್ಡೆ, ನೆಲದಡಿ ಇದ್ದುದು, ತಪಸ್ಸು ಗುದ್ದಲಿ
ಯಿಂದ ಮೇಲೆ ತೆಗೆದದ್ದು. ಗೋಣಿಚೀಲದಲ್ಲಿ ತುಂಬಿದ್ದು

೧೧೨ ಅನ್ನದೊಡನೆ ಮೇಲೋಗರವಾಗಿ ತಿನ್ನಲ್ಪಟ್ಟ;
ಇದ್ದುಗೆ ಗಡ್ಡೆ ಬಸಪ್ಪ ಎತ್ತು, ಕೆಂಚಾಲ್ ತಕ್ಕಡಿ.

೧೧೩ ಗಟ್ದಿ ಕೆಳಗಿಂದ ತಂದಿದ್ ಕಾಯಿ
ಸುಲ್ದ್ ಹಾಂಗೂ ಸಿಪ್ಪೆನೇಯು

೧೧೪ ಹೀಗೆ ಕೊಯ್ದ್ರೆ ಶಂಖದಾರಿ
ಹಾಗೆ ಕೊಯ್ದ್ರೆ ಚಕ್ರದಾರಿ
ಮೂಸಿ ನೋಡಿದರೆ ಕಣ್ಣೀರಿ

೧೧೫ ಭಣ್ಣ ಉಟ್ಕಂಡ್ ಮಣ್ಣಲ್ ಹೋಗ್ ಕುಣಿತವ

೧೧೬ ಬಣ್ಣವು ನೋಡಲು ಹಸಿರು ಕೆಂಪೂ ಕರಿದೂ
ಯೆಂತಾ ಜೀವನವೇ

೧೧೭ ಗಿಡ ತುಂಬ ಮುಸಿ ಕೆಂಡ

೧೧೮ ವಂದ್ ಬೆಲೆ (ಬೆಳೆ)ಗೆ ಬೇಲಿ ಕಟ್ಟ್ಯಾನಿಲ್ಲ
ನೀರ್ ಹೊಯ್ದ್ಯಾನಿಲ್ಲ; ವರ್ಸಕ್ ವಂದ್ ಬೆಲೆ (ಬೆಳೆ)

೧೧೯ ಜೀವಿದ್ದ ಮನ್ಸನ ಸತ್ತ್ರಮೇಲೆ
ಜಗ್ದ್ ವಗ್ದ ಮೇಲೆ ಜೀವ ಬತ್ತ್ರದೆ, (ಬತ್ತ್ರದೆ-ಬರುತ್ತದೆ)

೧೨೦ ಶರವಾರ ಗರತೀ ಗಂಡ, ಗರತೀ ವಲಗಿನ ಮಿಂಡ
ಶರವಾರ (ಬಾಕಿ ಸಾಮಾನು) ಹಾಕಿ ತಿಂದರೂ ಶಪ್ಪೆ (ಸಪ್ಪೆ)ನೇಯು

---

೧೧೩ ಉಳ್ಳಾಗಡ್ಡೆ — ೧೧೬ ನೇರಲ ಹಣ್ಣು
೧೧೪ ಉಳ್ಳಾಗಡ್ಡೆ — ೧೧೭ ನೇರಲ ಹಣ್ಣು
೧೧೫ ಅರಿಸಿಣ — ೧೧೮ ಹುತ್ತಿನಲ್ಲಿ ಬೆಳೆವ ಅಣಬೆ
೧೧೯ ಸುಗ್ಗಿಕಾಯಿ (ದೆಡಿ) ಹಗ್ಗಿ (ಹರಿವೆ) ದೆಡಿ
೧೨೦ ಉಳಿದ ಸಾಮಾನು ಗರತಿಯ ಗಂಡ, ಉಪ್ಪು ಗರತಿಯ
ಮೋಹದ ಮಿಂಡ

೧೨೧ ಹುಟ್ಟುತಲೆ ಹಸಿರಾಗಿ ಬೆಲೆ (ಳೆ)ಯುತಲೆ ಕೆಂಪಾಗಿ,
ತೊಟ್ಟನೆ ತೆಗೆದು ಕಣ್ಣಿಗೆ ನುರಿದ್ರೆ ಹಾಯ್ ಹಾಯ್ ಅಂತವೆ

೧೨೨ ದಾನ್ನಿ (ಧಾನ್ಯ)ದಲ್ ದಾನ್ಯ; ನವದಾನ್ಯ
ಯಾವ ದಾನ್ನಿದಾಗೆ ನಾಲ್ಕ್ ಬೇಳೆ ಬತ್ತದೆ ?
ರಾಗಿಲಿ? ಹತ್ತಿಕಾಳಲಿ? ಹತ್ತಿಲಿ? ಪಚ್ಚೆಸರಲಿ?
ಯಾವದರಲ್ ಅದೆ? ಬಿಡ್ಸುದು ಹೇಗೆ ?

೧೨೩ ಮುಳ್ಳುಂಟು ಗಿಡವಲ್ಲ; ದುಂಡಗಿರುವದು ಗಾಲಿಯಲ್ಲ
ನೀವು ಕಂಡರೆ ಬಿಡ್ವವರಲ್ಲ

೧೨೪ ಮುಳ್ಳಿನ ಹಕ್ಕಿ ಹೊಳ್ಳೆಲಿ ಮೊಟ್ಟೆ ಹಾಕ್ತು

೧೨೫ ಬಿತ್ತುಡ, ಬೆಳೆಯುಡ, ಯೆತ್ ನೀರ ಹಾಕಡ
ಎಲ್ಲಿಂದ ಬಂದೆ, ಮುತ್‌ನಂಥ ಪದಾರ್ಥವೇ ?

೧೨೬ ತಾ ಸಣ್ಣ ಆದ್ರೂ ಮಕ್ಕಳ ತೀಡ್ಸೂದ (ಅಳಿಸುವದು) ಬಿಡ್ತಿಲ್ಲೆ

೧೨೭ ಮಡಿ ಉಟ್ಟ್ಯ, ನಾರದಲ್ಲ; ಕಿರೀಟದೆ, ರಾವಣಲ್ಲ
ಬಾಲ ಅದೆ ಹನುಮಂತನಲ್ಲ

---

೧೨೧ ಮೆಣಸಿನ ಕಾಯಿ

೧೨೨ ಸಾಸಿವೆ ಕಾಳು. ಇದರ ಒಳಗೆ ನಾಲ್ಕು ಭಾಗ

೧೨೩ ಚಕ್ಕುಲಿ

೧೨೪ ಹಲಸಿನ ಕಾಯಿ. ಹೊಳ್ಳೆ ಅಂದರೆ ಬೀಜಗಳನ್ನು ಸುತ್ತಿದ
ಪೊಳ್ಳು ಚೀಲ, ನೀರ ತೊಳೆ

೧೨೫ ಕಳಲೆ, ಇಲ್ಲಿ ಅಡ ಶಬ್ದ ನಿಷೇಧಸೂಚಕ ಬೇಡ ಎಂಬ ಅರ್ಥ;
ಬಿತ್ತಬೇಡ ಮುಂತಾಗಿ

೧೨೬ ಸಣ್ಣ ಮೆಣಸು, ಕಚ್ಚುವ ಇರಿವೆ

೧೨೭ ಅಡಕೆ

೧೨೮ ಗಿರಗುಡತದೆ, ತಲೆ ಹೆಟ್‌ತದೆ
ಮೋವ (ಹ)ದ ಹಳ್ಳಾಗಿ ಹರೀತದೆ
ಮಗು ಹುಟ್ಟಿದ ಮೇಲೆ ಮುದ್ದಾಡುತ್ತದೆ
ಗುಡ್ಡೆಯಾಗಿ ಬೀಳ್ತದೆ

೧೨೯ ಸಣ್ಣ ಪೋರಗೆ ಮೈಯ್ಯಟ್ಟು (ಷ್ಟು) ಕಜ್ಜಿ

೧೩೦ ಕರೀ ಮಂಟಪದ ಮೇಲೆ ಹಾಕುವ ಹಾಸಿಗೆ
ತೆಗೆಯುವ ಹಾಸಿಗೆ, ತಿನ್ನಲು ಬೇಕು ಈ ಹಾಸಿಗೆ

೧೩೧ ವಬ್ಬಣ್ಣ (ಮೈಸುಟ್ಕೊಂಡು) ಇಳಿತಾ, ಮತ್ತೊಬ್ಬಣ್ಣ ಹತ್‌ತಾ

೧೩೨ ಗಿಡ್ಡ ಕರೀ ಮುನಶಂಗೆ ಬೆಳೀ ನಾಮ

೧೩೩ ಕರಿ ಸೀರೆ ಗರತೀ, ಪೇಟೆಯೊಳಗೆ ಇರತೀ
ರೊಕ್ಕ ಕೊಟ್ರೆ ಬರತೀ

೧೩೪ ಬಿಳಿ ಬಟ್ಟಂಗೆ ಕಪ್ಪು ಟೊಪ್ಪಿ

೧೩೫ ಬಾಯ್ಗ್ ಬಿತ್ತು; ಬಡಬಡ ಗುಡ್ತು

೧೩೬ ಅಂಕಡೊಂಕು (ಕೊಂಬು) ಸು, ಅದರ ತಮ್ಮ ಸಾ

೧೩೭ ಅಪ್ಪಪ್ಪನಂತಾ ಕಾಯಿ ಚಕ್ರದಂತಾ ಹೂ

---

೧೨೮ ಗಾಣ, ಗಾಣದಲ್ಲಿ ಹಾಕಿದ ಕಬ್ಬು, ಕಬ್ಬಿನ ಹಾಲು ಹಳ್ಳವಾಗಿ ಹರಿಯುತ್ತದೆ. ಕಬ್ಬಿನ ಸಿಪ್ಪೆ ಗುಡ್ಡೆ

೧೨೯ ಹಲಸಿನ ಕಾಯಿ
೧೩೦ ದೋಸೆ
೧೩೧ ದೋಸೆ
೧೩೨ ಉದ್ದಿನಕಾಳು
೧೩೩ ಉದ್ದಿನಕಾಳು
೧೩೪ ಬಾವಡೆ ಬೀಜ ಅಳಸಂದಿ ವರ್ಗದ್ದು
೧೩೫ ಹೊದಲು (ಅರಳು)
೧೩೬ ಸುಂಟಿ ಕೊಂಬು ಸಾಸಿವೆ
೧೩೭ ಮೆಣಸಿನ ಕಾಯಿ ಹೂ

೧೩೮ ಪರಿ ಪಡೂದು, ತೆರೆ ಬಿಡಿಸೂದು, ಪುತ್ತ ನುಂಗೂದು

೧೩೯ ಪಸೆ ಕಿಸಿ, ಕಾಲ್ ಕಿಸಿ, ಕೆಂಪಿದ್ ತಿಂಪ್ಕಂಪ್ ಬೆಳೀದ ಉಗಿ

೧೪೦ ಯೆಗೇಗ್ಲ ಹಣ್ಣು, ಹಿಜಾರ ಬಣ್ಣ,
(ಯೆಗೇಗ್ಲ ಅಂದರೆ ಪ್ರತಿ ಹೆಗಲಿಗೆ. ಅಂದರೆ ಬಳ್ಳಿಯು ನೆಲದಡಿಯು ಕಾಂಡಕ್ಕೆ)
ತಂದ್ ಕೊಡಣ್ಣ; ಬೀಜಿಲ್ಲಾದ ಹಣ್ಣ

೧೪೧ ಅಂಗಿ ತೆಗೆದರೆ ನುಂಗಣ್ಣ

೧೪೨ ಚಿಂಪ್ ಚಿಂಪ್ ಹಕ್ಕಿಗೆ ಸಾವಿರ ಕಣ್ಣು

೧೪೩ ತಿರುಗಿ ಬಿತ್ತು ತಿಂಗಳ ದೇವರು

೧೪೪ ವಂದ್ ವಲಿ ಮೇನೆ ಆರ್ ಜನ್ರು ಸುಡ್‌ತ್ರು

೧೪೫ ವಂದ್ ವಸ್ತ (ವಸ್ತು), ಕೊಕ್ಕೆ ಕೊಕ್ಕೇಯು

೧೪೬ ಹಿಂದ್ ಕಟ್ ಮುಂದ್ ಕಟ್ ವಂದ್ ತಂಡ
ಸೂಜಿ ಮೊಕದೋರು ವಂದ್ ತಂಡ
ಸಾವ್ರ ಕಣ್ ವಂದ್ ತಂಡ
ಕೈ ಮುಗಿವ್ರೋರ್ ವಂದ್ ತಂಡ

---

೧೩೮ ಹಲಸಿನ ಹಣ್ಣು ತಿನ್ನುವದು

೧೩೯ ಹಲಸಿನ ಹಣ್ಣು ತೊಳೆ ಬೀಜ

೧೪೦ ಗೆಣಸು

೧೪೧ ಬಾಳೆ ಹಣ್ಣು

೧೪೨ ದೋಸೆ

೧೪೩ ದೋಸೆ

೧೪೪ ಮುಳ್ಕನ ರೊಟ್ಟಿ ಆರು ರಂಧ್ರಗಳ ಕಾವಲಿ

೧೪೫ ಹುಳಸಿ ಬೆಟ್ಟೆ (ಹುಳಸೆಕೋಡು) ಕೊಕ್ಕೆ ವಕ್ರ
ಇಳ್ಳಿಗೆಕೊಟ್ಟೆ (ಇಡ್ಲಿ ಹಿಟ್ಟನ್ನು ಹಾಕಲು ಮಾಡಿದ ಹಲಸಿನೆಲೆಕಟ್ಟು)

೧೪೬ ಶಾವಿಗಿ (ಸೇವಿಗೆ) ದೋಸೆ ಗೆಣಸಲೆ (ಟಿಪ್ಪಣಿ ನೋಡಿ)

೧೪೭ ಇಂದ್ ಹುಟ್ದ ಪೋರ್ನ ಇಂದೇ ಕುತ್ಗಿ ಮುರಿತರ

೧೪೮ ಚಕ್ರಭೀಮನ ಕೋಟೆಗೆ ವಕ್ರವಕ್ರ ಮುಳ್ಳು

೧೪೯ ದೊಣ್ಣೆಯಂತಾ ಪೋರ, ಹೆಡಿಗೆಯಂತಾ ತೊಪ್ಪಿ

೧೫೦ ದವುಡಿಯಂತಾ ಹಕ್ಕಿ (ಹೊಕ್ಕುಳು) ಗೆರಸಿಯಂತಾ ರಟ್ಟೆ
(ಕಾಸಿನಂತಾ ಹಕ್ಕಿ ಇನ್ನೊಂದು ಪಾಠ)
ಮೋಡ್ಯಂತಾ (ಮೂಡೆಯಂತಾ) ಹೊಟ್ಟೆ
ಬಲ್ಲವರು ಇದರರ್ಥವನು ಪೇಳಿ ಸರ್ವಜ್ಞ
ಮುಡೆ-ಮೂಡೆ, ಅಕ್ಕಿಯನ್ನು ಹಾಕಲು ಕಟ್ಟುವ ಹುಲ್ಲುಪೆಟ್ಟಿಗೆ

೧೫೧ ಕಾನಲ್ ಕರಿಯಣ್ಣ; ಗೆದ್ದಿಲ್ ಮಿಂಚಣ್ಣ

೧೫೨ ಮುಕಳ್ಯಾಗ ಗುಟ್ಟ, ತಲೆ ಮೇಲೆ ಜುಟ್ಟ

೧೫೩ ಬೆಳಿಗೆರೆಲ್ ಬೆಳಿಯೆಮ್ಮೆ ಮೇಯ್‌ತು

೧೫೪ ಯೆಲಗಿಲ್ದೆ ಗಿದ್ದ ಪೋರ ಹೊಳೆ ಮೀಸಾಡ್ತ

೧೫೫ ಕಾಯಿ ಕಕ್ಕು ಮುಕ್ಕು ಯೆಲೆ ಚಲ್ಲಾಪಿಲ್ಲಿ
(ಮೈಯೆಲ್ಲಾ ಹುಗುಳು) ಹೂವು ಸುಂದರ ಸೂಳೆ

೧೫೬ ಅಂಬಾರ್ದ್ ಮೇನ್ ಆಡು ಪೋರ
ತುಂಬಿ ಕಟ್ಕ ತೂಗು ಪೋರ
ಉಂಬೂಕೆ ಬಾರೋ ಮಿಡಿಪೋರಾ

---

೧೪೭ ಕೊಟ್ಟೆರೊಟ್ಟಿ, ಅಂದರೆ ಇಡ್ಲಿ
೧೪೮ ಚಕ್ಕುಲಿ
೧೪೯ ಆಳಂಬೆ, ಅಣಬೆ
೧೫೦ ಸೋರೆಕಾಯಿ
೧೫೧ ಕೈ ಜಬ್ಬು, ಸಣ್ಣ ಮೀನ
೧೫೨ ಅನಾನಸು
೧೫೩ ಬೆಣ್ಣೆ
೧೫೪ ಬೆಣ್ಣೆ
೧೫೫ ಹಾಗಲಕಾಯಿ ಬಳ್ಳಿ
೧೫೬ ಮಾವಿನಕಾಯಿ,

೧೫೭ ವಂದ್ ಹಕ್ಕಿ ಮುಳ್ಳಿನಲ್ ಪೊಟ್ಟೆ ಇಡ್ತು
ವಂದ್ ವಸ್ತು ವಳಗಿನಿಂದಲೇ ಕಾಲ್ ನೀಡ್ತು

೧೫೮ ಬಡಿ (ಬಡ) ಬಡಿ ಬಟ್ಟಂಗ್ ಹೆಡ್ಗೆ ತುಂಬಾ ಮುಂಡಾಸ
ಪೇಟೆಯಿಂದ ತರುವದೇಕೆ ? ನನ್ನ ಜುಟ್ಟು ಕೊಯ್ವುದೇಕೆ?
ನನ್ನ ಮುಂದೆ ಅಳುವದೇಕೆ ?

೬. ಪ್ರಾಣಿ ವರ್ಗ

೧೫೯ ನಾಲ್ಕು ಹಸಿ ಮರ,
ನಾಲ್ಕು ಹಾಲ ಮರ.
ಯೆರಡು ಒಣ ಮರ
ಒಂದು ತಟಪಟೆ ಮರ

೧೬೦ ವಂದ್ ಪ್ರಾಣಿ, ಕಚ್ಚಲಿಕ್ ಬೆನ್ ಮೇಲೆ ಹೊಟ್ಟೆ

೧೬೧ ವಂದ್ ಯೆತ್ತು, ಮೊಕದ ಬದಿ ಹೋಗುದಿಲ್ಲ; ಅಡ್ಡಡ್ಡ

೧೬೨ ಕೆಂಪು ಕುದುರೆ, ಮಧ್ಯದಲ್ ಡೊಂಕು

೧೬೩ ಮೈಯಲ್ಲಿ ನೂರಾರು ಕಣ್ಣಿದ್ದವಳು
ತಲೆಮೇಲೆ ಬಾಲ ಇದ್ದವಳು
ಹುಂತಿನ ಹುಳ ಹೆಕ್ಕಿ ತಿನ್ನುವವಳು
ಹಾಗಾದರೆ ಇದರ ವಗಟು ?

---

೧೫೭ ಕೆಸುವಿನ ಬೀಣು, ಕೆಸವೆ ಬೀಳು
ಕೆಸು, ಕೆಸವೆ. ಶಾಂಬೀಗಿಡ

೧೫೮ ಉಳ್ಳಾಗಡ್ಡೆ

೧೫೯ ನಾಲ್ಕು ಕಾಲು, ನಾಲ್ಕು ಮೊಲೆ.
ಎರಡು ಕೋಡು, ಒಂದು ಬಾಲ (ದನ)

೧೬೦ ಕೊಣಜು ಕಡಜೀರಿಗೆಹುಳ

೧೬೧ ಏಡಿ

೧೬೨ ಚಗಳಿ (ಕೆಂಜಿರುವೆ)

೧೬೩ ನವಿಲು

೧೬೪ ಯೇರಡು ಬಾಯಿಗತ್ತಿ; ಯೆಂಟ್ ಹಲ್‌ಗತ್ತಿ

೧೬೫ ಮುಟ್ಟೆಲಿ ಕುಳಿತುಕೊಂಡು ಮೆಟ್ಟಲ್ಲಿ ಹೊಡಿತದೆ

೧೬೬ ನಿನ್ ನುಂಗಾಕ್ ಬರತಾನ್ ಉದ್ ಮೂಗಿನಾತ
ನಿನಗ್ಯಾರ್ ಹೇಳಿದ್ದು ? ನಾಕ್ ಕಾಲಾತ
ನನಗೊಬ್ಬ ಹೇಳ್ದ ಕರುಳಿಲ್ಲದಾತ
ಮತ್ತೊಬ್ಬ ಬರತಾನೆ ಶಿರವಿಲ್ಲದ ದಾಸ
ಇನ್ನೊಬ್ಬ ಬರತಾನೆ ಅಂಗಾಲ ಮೇಲ್ ಮಾಡಿ ನೀರ ಕುಡಿವಾತ

೧೬೭ ನಾಕ್ ಜನ ಬಟ್ಟಕೊಕ್ಕ ದೊಡ್ಡಮಳೆ ಬಂದ್ರೂ
ವದ್ದೆ ಆಗ್‌ತ್ತಿಲ್ಲೆ

೧೬೮ ಮಾಸೂರ್ ಹತ್ ಕಾಲ (ಕಾಲು)
ಕಾಗಾಲ್ ಬಣ್ಣದ ಗುಡ್ಡೆ
ತದಡಿ ಯೋಳ್ಳಿದ ಮೊಕೆ

೧೬೯ ನಾಗಬೆತ್ತ ಕಡ್ದವ್ರೆಲ್ಲ (ಕಡಿದವರಿಲ್ಲ)

೧೭೦ ಹತ್ ಕಾಲ ಆತ; ಗೆಂಟೆ ಬೂತ
ನೆಂಟ್ರು ಬಂದ್ರೆ ವಳ ಅಕ್ ಹೋತ

೧೭೧ ಇಂಡ್ ಹುಟ್ದಿ ಪೋರ ಇಂದೇ ಮರ ಹತ್‌ತ್ಯ

---

೧೬೪ ಏಡಿ (ಎಸಡಿ)

೧೬೫ ಜೇನುಹುಳು

೧೬೬ ಆನೆ, ಬಸವ, ಆನೆ ಕುತ್ತಿಗೆ ಗಂಟೆ, ಏಡಿ, ಕುರಿ

೧೬೭ ಏಮ್ಮೆಮೊಲೆ

೧೬೮ ಏಡಿ, ಯೋಳ್ಳಿ ಕಮುಲ, ಶಟ್ಲ್ಯ (ಸಿಗಡಿ,ಶಟ್ಲಿ)

೧೬೯ ಹಾವ (ಹಾವು) ಈ ನಾಗಬೆತ್ತ ಯಾರೂ ಕಡಿದವ್ರಲ್ಲ

೧೭೦ ಎಸಡಿ (ಏಡಿ)

೧೭೧ ಚಗಳಿ (ಕೆಂಜಿರುವೆ)

೧೭೨ ಹೆಕ್ಕ (ಹೆಕ್ಕಿ) ತಿಂಬವನಿಗೆ ಚಕ್ರ ಮುಂಡಾಸು

೧೭೩ ಆಲರ್ಾಗಿರೂ ಗಿರಲೀ ಬಣ್ಣಾ, ಪುಕ್ಕಾಕೊಯ್ದು ತೇರ್ ಕಟ್ಟಿ
ರಾಯರ್ ಬಂದ್ ಬೆಲಿಮಾಡಿ

೧೭೪ ದನ ಮೂಳಿ ಹಾಕ್ತದೆ, ಮೂಳಿಯೇ ಕರು ಹಾಕ್ತದೆ

೧೭೫ ವಂದ್ ಗಿಂಡಿಲಿ ಯೆರಡ್ ಯೆಣ್ಣೆ

೧೭೬ ವಂದ್ ಮಡಕಿಲಿ ಬೆಲ್ ಪಾಯ್ಸ; ಕಾಯ್ ಪಾಯ್ಸ

೧೭೭ ಸಣ್ಣ ಗಿಲಾಯದ ಮನೆ, ಅದಕ್ಕೆ ವಳಗೂ ಬಾಗಿಲಿಲ್ಲ.
ಹೊರಗೂ ಬಾಗಿಲಿಲ್ಲ

೧೭೮ ಒಂದ್ ಚರಿಗೀಲಿ ಎರಡು ತರದ ತುಪ್ಪ

೧೭೯ ಸುತ್ತ ಮುತ್ತ ಸುಣ್ಣದ ಗಾರು; ವಳಗ್ ಹೋಗೂಲ್ ದಾರಿಲ್ಲೆ

೧೮೦ ಯೆರ್ಡ್ ಪೊಳಪೊಳಿ ಯೆರ್ಡ್ ಪಿಳಿಪಿಳಿ
ನಾಕ್ ಹಶಿ ಪಟ್ಟಿ ಯೆರ್ಡ್ ವಣಪಟ್ಟಿ

೧೮೧ ಸಣ್ಣ ಮಾಣಿಗೆ ಮಣ್ಣ ಕೆಲಸ

---

೧೭೨ ಕೋಳಿ

೧೭೩ ಕೋಳಿಮರಿ

೧೭೪ ಕೋಳಿ ಮೊಟ್ಟೆ ಹಾಕುತ್ತದೆ ಮೊಟ್ಟೆಯೇ ಕೋಳಿ ಮರಿಹಾಕುತ್ತದೆ

೧೭೫ ಕೋಳಿ ತತ್ತಿಯ ಬಿಳಿದು ಹಳದಿ ರಸ

೧೭೬ ಇದೂ ತತ್ತಿಯ ಒಗಟು

೧೭೭ ,, ,, ,,

೧೭೮ ,, ,, ,,

೧೭೯ ,, ,, ,,

೧೮೦ ಕಿವಿ, ಕಣ್ಣು, ನಾಲ್ಕು ಕಾಲು, ಎರಡು ಕೋಡು

೧೮೧ ಕೊಂಡೋಟ ಎಂಬ ಹುಳ

೧೮೨ ಗಟ್ಟದ ಕೆಳಗಿಂದ ತಂದಿದ್ ಹುಡುಗಿ ಮಡಿಮಡಿ ದೋಸೆ ಯೆರಿತದೆ

೧೮೩ ಸಣ್ಣ ದನ ಮೇಲಿಂದ ಮೇಲೆ ನೀರ್ ಕುಡಿತದೆ

೧೮೪ ಆ ಊರಿಂದ ಈ ಊರಿಗೆ ಬಂದೆ; ಮುತ್ತಿನಾ ಡೇರ್‍ಯಾ ಹೊಡೆದೆ
ನಾ ಇಲ್ಲದ ಹೊತ್ನಲ್ಲಿ ಕದ್ದನಲ್ಲೆ ಶೆಟ್ಟಿ

೧೮೫ ಗುಡುಗುಡು ಗುತ್ಯಾ ಬಂದಿಪ್ಯ; ಗುಡ್ಡೆ ಮೇಲೆ ಮನೆ ಕಟ್ಟಿಪ್ಯ
ತುಪ್ಪನ ಕೊಡ ಪರರಿಗ್ ಕೊಟ್ಟಿಕ್ಕಿ
ಮಕ್ಕಳ ಪರದೇಶಿ ಮಾಡಿಕ್ಕಿ ವೋಡ್ ಹೋಗಿಪ್ಯ

೧೮೬ ಹೋದ ಪುಟ್ಟ, ಬಂದ ಪುಟ್ಟ, ಪುಟ್ಟನ ಹೆಜ್ಜೆ ಕಾಂಬೂದಿಲ್ಲ

೧೮೭ ಐದು ಜನ ಗಂಡಂದಿರುಂಟು; ದ್ರೌಪದಿಯಲ್ಲ

೧೮೮ ಅರಿಯ ಕಲ್ಲನೆ ಕಾಯ್ದು ಯೆರಿಯ ಮಣ್ಣನೆ ಮೇದು
ಹೊರನಾಡ ಪಕ್ಸಿ (ಪಕ್ಷಿ) ತಾನಂಬುದೂ
ಯೆಂತಾ ಜೀವನವೇ !

೧೮೯ ಅಪ್ಪ ಕೂತಕಳ್ತ, ಮಗ ಹಾರ್‍ತ
ಮೊಮ್ಮಗ ಊಟ ಮಾಡ್ತ

೧೯೦ ಮುಟ್ಟಿ ಹಿಡ್‌ದ್ರೆ ಮುಟ್ಟಿಗೆ ಸಾಲುದಿಲ್ಲ
ಮುಟ್ಟಿ ಬಿಡ್ಸ್‌ದರೆ ಇಡೀ ರಾಜಿಗೆ (ರಾಜ್ಯಕ್ಕೆ)ಲ್ಲಾ ಬೆಲಕು

೧೯೧ ಒಂದು ಎತ್ತಿಗೆ ಒಂದು ಕಣ್ಣು (ಪೂರಾ ಬಾಲ)

೧೯೨ ಯೆತ್ ಬಾಲ ವಳ್ಗೆ ನೀರ್ ಕುಡಿತದೆ

---

೧೮೨ ಜೇನು ಹುಳ ಜೇನು ಹುಟ್ಟು
೧೮೩ ಜೇನು ಹುಳ
೧೮೪ ಜೇನು ಹುಳ
೧೮೫ ಜೇನು ಹುಳ
೧೮೬ ಮೀನ
೧೮೭ ಕಾಮಧೇನು ಅದಕ್ಕೆ ಐದು ಮೊಲೆಗಳಿವೆ
೧೮೮ ಹಣತೆ
೧೮೯ ಹಂಡೆ, ಕೊಡಪಾನ, ತಂಬಿಗೆ
೧೯೦ ದೀಪ
೧೯೧ ಸೂಜಿ
೧೯೨ ದೀಪ

೧೯೩ ಹೊತ್ತು ಹೊತ್ತುವ ನೋಡಿ ಕೇರಿ ಕೇರಿಯ ಮುಂದೆ
ಬತ್ತು ಮರದ ಮೇಲೆ ಕುಣಿದಾಡುತಿಹುದು

೧೯೪ ಮೂರ್ ಜನ ಬಟ್ಟಕ್ಕೊ ವಂದೇ ತುಣ್ಣಲ್ ಉಜ್ಜಿ ಹೊಯ್ತು

೧೯೫ ವಂದ್ ಕೋಟೆ, ಅದರಲ್ಲಿ ಸೈನಿಕರು
ಸೈನಿಕರ ಮೈಯೆಲ್ಲ ಬೆಳ್ಳಗೆ; ತಲೆ ಮಾತ್ರ ಕಪ್ಪು

೧೯೬ ಹೊಟ್ಟೆಗೆ ಹೊಟ್ಟೆ; ವಟ್ಟೆಗೊಂದು ಗುಟ್ಟ

೧೯೭ ಹುಟ್ಟು ಕೈಕಾಲೆಲ್ಲ, ರಟ್ಟಿನೂ ಬಳಿಕೆಲ್ಲ
ಗುಟ್ಟಾದ ಬೀಮರಾ ತಾನುಂಬುದೂ ಯೆಂತಾ ಜೀವನವೇ !

೧೯೮ ಅಂಗೈ ಅಗಲದ ಗದ್ದೆ; ಗದ್ದೆಗೆ ನೀರು;
ನೀರಿಗೆ ಬೇರು, ಬೇರಿಗೆ ಬೆಂಕಿ

೧೯೯ ಕಟ್ಗೆ ತಿಂತು; ಹಿಟ್ ಹೇಲ್ತು

೨೦೦ ಕೆಂಪಣ್ಣ ಹಾಕಿ, ಬೆಳ್ಳಣ್ಣ ತೆಗಿ

೨೦೧ ಬೆಟ್ಕ ಹೋತ್ಲೆ ಕಟಪಟ ಅನ್ನುದೆ
ಮನಿಗ್ ಬತ್ಲೆ ಸೊಮ್ಮ್ಗ ಉಳಿತದೆ

೨೦೨ ಅರಕಟ್ಟು ಮುರಕಟ್ಟು ಮೂವತ್ತಾರು ಕಟ್ಟು
ಅರ್ಥ ಹೇಳಿದವಗೆ ಮೂರ್ ದೋಸೆ ಮೂರ್ ಸೇರ್ ತುಪ್ಪ
ಆರು ರೊಟ್ಟಿ ಸೇರು ತುಪ್ಪ ಅರ್ತ ಹೇಳಿದವಗೆ ಅರ್ದರಾಜಿ ಬಿಟ್ಟೆ

---

೧೯೩ ದೀಪ
೧೯೪ ಗಾಣ
೧೯೫ ಬೆಂಕಿಪೆಟ್ಟಿಗೆ, ಬೆಂಕಿಕಡ್ಡಿ
೧೯೬ ಬೀಸುವ ಕಲ್ಲು ಗೂಟ
೧೯೭ ಗೋದಿ ಬೀಸುವ ಕಲ್ಲು
೧೯೮ ದೀಪದ ಬುರುಡೆ ನೆಣೆ(ಬತ್ತಿ)
೧೯೯ ಬೆಂಕಿ ಬೂದಿ
೨೦೦ ರಾಗಿಕಲ್ಲು
೨೦೧ ಕೊಡಲಿ
೨೦೨ ತೇರು

೨೦೩ ಮನಿಕಿಂದೂ ಮೇನ್ ಮಂಗ್ಲಿ ಹಾರ್‍ತದೆ

೨೦೪ ಮನಿಮನಿಗ್ಯೆಲ್ಲಾ ಹೆಬ್ಬಾವು

೨೦೫ ಬುಡ್ ಬುಡ್ಕ್ ಅಂದ; ಬಾಲ ತಟ್ (ತೊಟ್ಟು) ಯೆಳ್ದ

೨೦೬ ನಾಲ್ಕು ಕಾಲುಂಟು; ಯೆರಡು ಕೈಯುಂಟು
ಒಂದು ಬೆನ್ನುಂಟು; ಹೊಟ್ಟೆಯಿಲ್ಲ

೨೦೭ ಉಂಡ್ಕಂಡು (ಉಂಡುಕೊಂಡು) ಉಟ್ಕಂಡು (ಉಟ್ಟುಕೊಂಡು)
ಬಿಚ್ಕಂಡು (ಬಿಚ್ಚಿಕೊಂಡು) ಹೆಟ್ಕಂಡು (ಹೆಟ್ಟಿಕೊಂಡು) ಮನಿಕತ್ರೊ
(ಮನಿಕತ್ರೊ ಎಂದರೆ ಮಲಗುತ್ತಾರೆ)

೨೦೮ ತಗಟೆಯಲ್ಲಿ ತೂಗುವದಲ್ಲ; ಅಂಗಡಿಯೊಳಗೆ ಮಾರುವದಲ್ಲ
ನಮ್ಮ ಮನೆಗೆ ಅದು ಇದ್ದ ಹೊರತು ಆಗುವದಿಲ್ಲ

೨೦೯ ಪುಕಳಿಲಿ ತಿನ್ನತದೆ; ಬಾಯಲಿ ಹೇಲತದೆ

೨೧೦ ಒಂದು ದಾರದಿಂದ ನೂರಾರು ಮನೆ ಕಟ್ಟುಲಾಗ್ತು

೨೧೧ ಅಂಗಾನುಂಗಿನಕ್ಕಿ ನುಂಗಿತು ನರಮನ್ಸನ
ಅಂಗಾಲು ಹೆರಗೆ, ತಲೆ ಹೆರಗೆ

---

೨೦೩ ಮನೆ ಹೊಡಕೆಯ ಹುಲ್ಲಕಟ್ಟು

೨೦೪ ಗಳ

೨೦೫ ಕೊಡಪಾನ

೨೦೬ ಕುರ್ಚಿ

೨೦೭ ಬಟ್ಟೆ ಉಟ್ಟುಕೊಂಡು ಹಾಸ್ಗೆ ಬಿಚ್ಕಂಡು ಬಾಗಿಲ ಎರೆಸಿ (ಮುಚ್ಚಿ)
ಕಂಡಿ, ಬಾಗಿಲಿನ ಒಗಟು

೨೦೮ ಸಗಣಿ

೨೦೯ ಉದ್ದ (ಉಜ್ಜು)ಗೊರಟು. ಬಡಗಿ ಹಲಗೆ ನುಣುಪಿಸುವ ಸಾಧನ

೨೧೦ ಬಲೆ

೨೧೧ ಅಂಗಿ, ನಿಲುವಂಗಿ

೨೧೨ ಉದ್ದ ರಾಮುಂಗೆ ಒಂದೇ ಹಲ್ಲು

೨೧೩ ಗಿಡ್ಡಿ ಪೋರಂಗೆ ಅಡ್ಡ ತುಣ್ಣಿ

೨೧೪ ಯೆಮ್ಮೆ ಕೋಡ ಹಿಡಿವರೆ ಆೖಗುಡತದೆ

೨೧೫ ಯೆಡಗೈಲ್ ಕಿಸಿಯುವದು. ಬಲಗೈಲ್ ಹಾಕುವದು

೨೧೬ ಅಂದಳಕ ಬಂದಳಕ ಮಿಂದನ್ನು ಉಣತಿಲ್ಲೆ (ಉಣ್ಣುವದಿಲ್ಲ)

೨೧೭ ಸಣ್ಣ ಪೋರ; ಮನೆ ಕಾಯ್ತು

೨೧೮ ಬಟ್ಟೆ ಸುಟ್ರೂ ಬಟ್ಟಿನ ಜನಿವಾರ ಸುಡತಿಲ್ಲೆ

೨೧೯ ಎರಡು ನಾಲಿಗೆ ಉಂಟು, ಸರ್ಪನಲ್ಲ

೨೨೦ ಒಂದೇ ಕಂಬ; ಕೋಳು ಕೂಡಿದ ಮನೆ

೨೨೧ ಅಗಲಿದ್ದರಲ್ಲಿ ನಿಗರಿದ್ದ ಹಾಕಿ, ಕೆಂಪದ ಹಾಕಿ ಬೆಳಿದ ತೆಗೆಯುವದು

೨೨೨ ಹುಡ್ಗ ಅದೆ ಮೇನ್ ಹೋಗ್ತಾನೆ
ಬತ್ ಕುದುರೆ ಹಾಕಂಡು ಸತ್ ಕುದುರೆ ತಕಂಡ ಹೋಗಿದಾನೆ

೨೨೩ ಕುನ್ನಿ ಪುಕಳಿಗ್ ಕೋಲ ತೂರಿದ್ರೆ ಕುಂದಾಪುರ್ಕ್ ಹೋತದೆ

೨೨೪ ವಂದ್ ಯೆತ್ತು ಕಾಡಿಗೆ ಹೋಗಿ ಯೆಟ್ಲೆ ಹೊಡಿತದೆ

---

೨೧೨ ಕೊಕ್ಕೆ
೨೧೩ ಕದ-ಮಿಡ (ಅಗಳಿ)
೨೧೪ ತೊಳಲಿಕಲ್ಲು, ಬತ್ತವನ್ನು ಅಕ್ಕಿ ಮಾಡಲು ಬಳಸುವ ದೊಡ್ಡ ಬೀಸುವ ಕಲ್ಲು
೨೧೫ ಶಿಕ್ಕ
೨೧೬ ಹರಿವಣ
೨೧೭ ಬೀಗದ ತಟ್ಟೆ
೨೧೮ ಹಾದಿ
೨೧೯ ಅಡಗತ್ತರಿ
೨೨೦ ಛತ್ರಿ
೨೨೧ ಒಲೆ ಸೌದಿ ಬೆಂಕಿ, ಬೂದಿ
೨೨೨ ಚಪ್ಪಲ್ ಹಾಗೂ ಕೋವಿ
೨೨೩ ಕೋವಿ
೨೨೪ ಕೋವಿ, ಯೆಟ್ಲೆ, ಕೂಗು

೨೨೫ ಕೋಣನ ಮುಕಳಿಗ್ ಕೋಲ ಹೆಟ್ಟಿದರೆ ಅಂಕೋಲೆಗ್ ಕೇಳ್ತದೆ

೨೨೬ ಮಳೆಗೂ ಅರಳುತ್ತದೆ ಬಿಸಿಲಿಗೂ ಅಥಳುತ್ತದೆ ನೆರಳಲ್ಲಿ
ಮುದುಡುವದು

೨೨೭ ಕಲ್ಲು ಬಸವಂಗೆ ಮರದ ಮೂಗೆದಾಣಿ

೨೨೮ ಗಾಡಿ ಹೋಗ್ತದೆ; ಬಂಡಾರ ಬೀಳ್ತದೆ; ಬಂಡಿ ಹೋಗ್ತು,
ಬಂಡಾರ ಚೆಲ್ತು

೨೨೯ ಇಡೀಇಡೀತ ಸುಂಗತಿಕ್ಕು. ಹೊಡಿಹೊಡಿ ಉದ್ರತಿಕ್ಕು

೨೩೦ ತಾಯಿ ದಡಾಲಿ; ಮಗಳು ಬೋಳಿ

೨೩೧ ಬುಳುಬುಳು ಬುಕ್ಕ; ಬಾಲ ಹಿಡ್ಕ ವಕ್ಕ
ಕಿದ್ರತದೆ. ಮೇವದಿಲ್ಲೆ

೨೩೨ ನಾಕ್ ಕಾಲ ಜಟ್ಟಯ್ಯ, ಎಲ್ಲರೂ ಹಿಡ್ಕ ಕುಟ್ಟಯ್ಯ

೨೩೩ ಅಪ್ಪ ಕೊತ್ಕ ಕಾಣ್ತ; ಮಗ ಪ್ರೋಡ್ತಾನಂಬರು

೨೩೪ ಮಿಂದ್ ಮಿಂದ್ಕಂಡಿ ಗಾಡ್ಗತನ ಮಾಡೂದು

---

೨೨೫ ಕಬ್ಬಿನ ಗಾಣ

೨೨೬ ಛತ್ರಿ

೨೨೭ ಗೋದಿಕಲ್ಲು-ಗುಟ್ಟ

೨೨೮ ಗೋದಿಕಲ್ಲು, ಗೋದಿಹಿಟ್ಟು

೨೨೯ ಗೋದಿಕಲ್ಲು, ಗೋದಿಹಿಟ್ಟು

೨೩೦ ವಳ್ಳು(ಒರಳು) ಗುಂಡ (ಗುಂಡು)

೨೩೧ ಮೀವ ತೆಂಗು (ತೆಂಗಿನ) ಬುರುಡೆ, ವಕ್ಕ ಎಳೆ

೨೩೨ ತೊಡ್ಲ ಕೊಕ್ಕೆ. ಬತ್ತದ ಕೈ ಕದಿರು ಬೇರೆ ಮಾಡಲು ಬಳಸುವ
ಕಾಲು ಮಂಚ (ಜಟ್ಟಯ್ಯ ಜಟ್ಟಿಯಂತೆ ಗಟ್ಟಿ ಮಂಚ

೨೩೩ ಅರೆವ ಕಲ್ಲು

೨೩೪ ಅರೆವ ಕಲ್ಲು ಗುಂಡು

೨೩೫ ಪತ್ತಿಯು ಮೆಲುವದು, ಪಕ್ಷಿಯಂತಿಹುದು
ಹಸ್ತದಿ ಮುಟ್ಟಿದರೆ ಕಚ್ಚುವದು

೨೩೬ ಅಂಗೈಯಂತಾ ಗೆ(ಗ)ದ್ದೆ; ಮುಂಗೈಯಂತಾ ಹಾಳಿ
ಹೆಡ್ಗೆ ಗೊಬ್ಬರ ಹಾಕಿದರೂ ಒಂದೇ ಕದಿರು

೨೩೭ ತಲೆಯಿಲ್ಲದ ಪೋರ ಅಂಕೋಲಿಗ್ ಹೋತ್ಯ
ಕೊಮಟಿಗೂ ಹೋತ್ಯ; ಕೋಲೆಜಿಗೂ ಹೋತ್ಯ
ಮತ್ತೆಲ್ಲಿಗೂ ಹೋತ್ಯ; ಮನಿಲೂ ಒಳಿತ್ಯ

೨೩೮ ಅರಸೂ ಮಗಳೀಗ್ ವರ್ಸಕೊಂದ್ ಹುಡ್ಗೆ (ಉಡಿಗೆ)

೨೩೯ ಸಣ್ಣ ಪೋರಾ. ಮುಕಳಿದೋರಾ

೨೪೦ ಸಣ್ಣ ಪೋರಗೆ ಇಟ್ಟುದ್ದ ಕಚ್ಚಿ

೨೪೧ ನಮ್ಮಜ್ಜ ಸತ್ ಕುರಿಯ ಬೆಟ್ಟಕ್ ತಕಂಡ್ ಹೋತ್ಯ
ಮನಿಗೂ ತತ್ಯ (ತರುತ್ತಾನೆ)

೨೪೨ ಕೈ ಹಾಕಿದರೆ ಬಾಯಿ ಬಿಡುತ್ತಾನೆ

೨೪೩ ಗಟ್ದ ಮೇಲಿನ ಬಟ್ಟಾ ಜುಟ್ ಹಿಡ್ದ್ ಹೊರ್ತು ಮಾತಾಡ್ತ್ಕಿಲ್ಲೆ

೨೪೪ ನಮ್ಮಜ್ಜಿ ಹೇತ್ ಹಾಕ್ತಿದು; ನಿಮ್ಮಜ್ಜಿ ಕೈ ಒಡ್ತಿದು

೨೪೫ ನಿಮ್ ಕಂಡ್ರೆ ಭಯಂಕರ
ನಿಮ್ಮದ್ರುಲ್ ನಂದೊಂದ್ ಅಲ್ಲಾಡ್ತು

---

೨೩೫ ದೀಪ
೨೩೬ ದೀಪ
೨೩೭ ಅಂಗಿ
೨೩೮ ಮನೆ ಹೊದಿಕೆ
೨೩೯ ಸೂಜಿ, ದೋರ, ದ್ವಾರ
೨೪೦ ನುಗಲುಂಡೆ (ನೂಲು ಸುತ್ತಿದ್ದ)
೨೪೧ ಕಂಬಳಿ
೨೪೨ ಬೀಗ
೨೪೩ ಗಂಟೆ
೨೪೪ ಶಾವಿಗೆ (ಸೇವಿಗೆ ಮುಟ್ಟಿ)
೨೪೫ ಬಾವಿ, ಕೊಡ

246 ಪಾತಾಳ್ಕ್ ಹೋತ್ಯ; ಪಾಪಿ ಹೊಡಿತ್ಯ
ತಾ ತಿಂಬದೆಲ್ಲ; ಬೇರ‍್ಯರಿಗೆ ಕೊಡತ್ಯ

247 ಹಾವಾಗ್ ಹರಿತಿದ, ಗೋವಾಗ್ ನೆಡಿತಿದ
ಉದ್ ಮಲ್ಲಿಗ್ಯಾಗ್ ಉದ್ರ್ಯದ

248 ಆರ್ ಕಾಲು, ಹುಡ್ಕಿರ್ ಶಿಕ್ಕ
ಹೋಪ್ ಹೊತ್ತಿಗೆ ಬಡಕಟೆ ಆಯ್ತು ಹೋಗ್ತ
ಬಪ್ ಹೊತ್ತಿಗೆ ಹೊಟ್ಟೆ ತುಂಬಕ ಬತ್ತ

249 ಹುಲಿ ಹೋಗಿ. ಮೂರ್ ಗುಡ್ಡೆ ಕೂಡ್ವಲಿ
ಮಂದ್ ಶಲ (ಶಲ–ಸಲ) ಹೋಗಿ ಬಾಯ್ ಹಾಕ್ತದೆ

ಆಭರಣ—ಅಲಂಕಾರ

250 ಹೆಣ್ಣಂಬೂ ಜಲ್ಮ (ಜನ್ಮ)ಕ್ಕ ಯಾವ ಚೆ(ಚಿ)ನ್ನವೂ ಹೆಚ್ಚಿನ್ದಲ್ಲ
ಬೇಕಾದದ್ ಮಂದ್ ಚೆನ್ನ ಹೆಚ್ಚಂದ

251 ಅಣ ಬನದ ಹಕ್ಕಿ; ಚಿನ್ನ ಬಣ್ಣದ ಹಕ್ಕಿ
ಚಿತ್ರಾರುಂಟು; ಪ್ರಾಣಗಳಿಲ್ಲ

252 ಅಮೀದ್ ಕಚ್‌ತದೆ (ಪಾಠ : ಅಮೀದ್ ತಟ್ಟೆ)
ಅಪ್ಪನ್ದ್ ಜೋಲ್ತದೆ (ಪಾಠ : ಅಜ್ಜನ್ದ್ ಜೋತಾಡ್ತದೆ)

---

246 ಬಲೆ
247 ನೇಗಿಲು, ಯೆರಡು ಯೆತ್ತುಗೋಳು. ಬಿತ್ತುವ ಬೀಜ (ಭತ್ತ)
248 ಶಿಕ್ಕ
249 ದರಕ್ (ತರಗೆಲೆ) ಕಲ್ಲಿ, ವಲೆ, (ಒಲೆ) ಗಡಗಿ
250 ಕೂಕಮ (ಕುಂಕುಮ)
251 ಬಾಸಿಂಗ
252 ಕಿವಿ ಬುಗುಡಿ, ಓಲೆ ಕಿವಿಗೆ ಹಾಕಿದ ಗೋಲ ಜೋತಾಡುವದು (ವಂಟಿ)

೨೫೩ ಜಗ್ಗಂತಿ ಜೆರ್ಗಿಲ್ ಹೊಕ್ಕು ಕುಣಿತಿದ

೨೫೪ ಚಿನ್ನದ ಹಾವು ಬಾಲ ಮುಂದಾಗ್ ವಟ್ಟಿಲ್ ಹೊಕ್ತದೆ.

೨೫೫ ಚಿಕ್ಕನ ಕೋಣೆ; ಚಿನ್ನದ ಬೀಗ

ಆಧುನಿಕ

೨೫೬ ವಂದರೊಳಗ್ ವಂದು ಸೇರಿ, ಅದರ ತಲೆಯು ಮೇಲೆ
ಒಂದು ಕೆಂಪದು ಕೂತು ವಳಗ ಹೋಗತದೆ ಹೊರಗೆ ಬರುತವೆ

೨೫೭ ಕಬ್ಬಿಣ ಓಡುವದು
ಗಾಳಿ ಮಾತಾಡುವದು
ಕಟ್ಟಿಗೆ ಹಾಡುವದು

೨೫೮ ಇಂದ್ ಯಾವ ವಾರ? ತಲೆಮೇಲೆ ಯೆಂತಾ ಇದ್ದು?

೨೫೯ ಜೀವವಿಲ್ಲದ ಹಕ್ಕಿ ಆಕಾಶದಲ್ ಹಾರ್ತದೆ

೨೬೦ ನಾಲ್ಕ್ ಚೌಕದ ಗದ್ದೆ, ನಾರಾಯಣ ಕಟ್‌ದ ಗದ್ದೆ
ಬಿತ್‌ದಕ್ಕೆ ವಂದ್ ಯೆತ್ತು

೨೬೧ ಬೆಳಿಗರದಲ್ಲಿ ಕರಿ ಬೀಜ ಬಿತ್ತಿ ಶಶೂದು

೨೬೨ ಕಾಲಿಲ್ಲದವನು, ಆದರೆ ದೂರ ಹೋಗುವನು
ವಿದ್ಯಾವಂತನು ಪಂಡಿತನಲ್ಲ, ಬಾಯಿಲ್ಲದವನು ಮಾತಾಡುವನು

---

೨೫೩ ಮೂಕ್ತಿ (ಮೂಗುತಿ)
೨೫೪ ,, ,,
೨೫೫ ,, ,,
೨೫೬ ಹಚ್ಚಿದ ಬೀಡಿ ಸಿಗರೇಟು
೨೫೭ ರೈಲು ರೇಡಿಯೋ
ಪಿಯಾನು
೨೫೮ ಮಂಡೆ Monday
೨೫೯ ವಿಮಾನ
೨೬೦ ಇಸ್ಪೀಟ ಎಲೆ, ಕಾಗದ
೨೬೧ ಶಶಿ ಅಂದರೆ, ಹತ್ತಿಯನ್ನು
ಬಿಡಿಸಿದಂತೆ ವಿಸ್ತರಿಸು
೨೬೨ ಪತ್ರ

೨೬೩ ದರೆ, ದರೆಗ್ಯೆಲ್ಲ ಮರ, ಮರ ಮರಕ್ಯೆಲ್ಲಾ ಯೆಲೆ,
ಯೆಲೆ ಯೆಲೆಗ್ಯೆಲ್ಲಾ ಕಲೆ, ಕಲೆ ಕಲೆಗ್ಯೆಲ್ಲಾ ಮಾತು
ಮಾತ್ ಮಾತಿಗ್ಯೆಲ್ಲಾ ನೀತಿ

೨೬೪ ನನ್ನ ನೋಡಿರದ ವಿದ್ಯಾವಂತರಿಲ್ಲ ಲೆಕ್ಕಣಿಕೆಯಿಲ್ಲ;
ನೀರಿನಂತೆ ಹರಿಯುಬಲ್ಲೆ; ಆದರೆ, ನೀರಲ್ಲ. ಹಾಗಾದರೆ
ನಾನು ಯಾರು ?

೨೬೫ ವಂದ್ ಇಲೆಕ್ಟ್ರಿಕ್ ಟ್ರೇನ ಪೂರ್ವದಿಂದ ಪಶ್ಚಿಮಕ್
ಹೊರಟಿದ್ದು; ಅದರ ಹೊಗೆ ಯಾವ ದಿಕ್ಕಿಗ್ ಹೋಗ್ತು ?

೨೬೬ ಒಬ್ಬ ವಂದ್ ಹುಡ್ಗಿ ನೋಡುಲ್ ಹೋಗಿರ್‍ತ. ಅವಳು ಕಾಪಿ-ತಿಂಡಿ
ಯೆಲ್ಲ ತಂದ್ ಕೊಡ್ತು. ನೀ ಯೆಷ್ಟ್ ಕಲ್ತದ್ದು ? ಕೇಳ್ತ. ಅವಳು
ಖಾಲಿ ಕಪ್ ಕವುಚ್ ಹಾಕಿಟ್ಟಿಕ್ ಹೋಗ್ತು, ಯೆಷ್ಟ ಹೇಳುದ್
ಹೇಳು.

೨೬೭ ವಬ್ಬ ಪರೀಕ್ಷೆಗೆ, ಟೆಸ್ಟಗೆ ಹೋಗಿರ್‍ತ. ಹೋಂಸಾಯನ್ಸ್ ಟೆಸ್ಟ್.
ಟೀ ಮಾಡೂಲ್ ಬೇಕಾದ್ದ ಯೆಲ್ಲಾ ಸಾಮಾನ ಇಟ್ಟಿದ್ದೊ.
ಚಹಾ ಪುಡಿ ವಂದಿಲ್ಲೆ. ಅವ ಟೀ ಮಾಡಿಕ್ ಬಂದ. ಹೇಗೆ ?

೨೬೮ ವಂದ್ ರಸ್ತೆ ರಾಶಿ ಇಕ್ಕಟ್ಟಾಗಿರ್‍ತು. ಯೆರಡು ವಾಹನ ವಂದೇ ಸಲ
ಹೋಪ್ಹಾಗ್ತಿಲ್ಲೆ. ವಂದ್ ಸಲ ಅಕಸ್ಮಾತು ವಂದ್ ಲಾರಿ ಡ್ರ್ಯಾವರ,
ಬಸ್‌ನ ಡ್ರ್ಯಾವರ ಯೆದರಾ ಯೆದರಾ ಬತ್ರೊ. ಅವು ಹೇಗೆ
ಸುರಕ್ಷಿತ ಬರ್‍ತೊ ?

೨೬೩	ಪುಸ್ತಕ	೨೬೬	C.U.P. ತಿರುವಿ P.U.C.
೨೬೪	ಶಾಯಿ	೨೬೭	ಎರಡು ಕಡ್ಡಿಗಳನ್ನು ಇಂಗ್ಲಿಷ್ T ಅಕಾರದಲ್ಲಿ ಜೋಡಿಸಿ
೨೬೫	ಹೊಗೆಯಿಲ್ಲೆ	೨೬೮	ಕಾಲ್ನಡಿಗೆಯಲ್ಲಿ ಬರುತ್ತಾರೆ

ಸಂಕೀರ್ಣ

೨೬೯ ಗಟ್ಟದ ಮೇನಿನ ಗಂಡು,
ಗಟ್ಟದಕಿಂತ ಕೆಳಗಿನ ಹೆಣ್ಣು
ಬೇಲಿಕೇರಿಲ್ ಲಗ್ನ

೨೭೦ ಸುಂಕದ ಕಟ್ಟೆಲಿ ಸೂಲದ ಮರ

೨೭೧ ಬಂಕಾಪುರದಲ್ ಹಕ್ (ಹಕ್ಕಿ) ಮಾತಾಡ್ತು

೨೭೨ ಬರ್ಕನ ಹೊಟ್ಟೆಲಿ ಬೈನಿ ಗುದಗಿ
(ಇಲ್ಲಿ ಬರ್ಕ ಎಂದರೆ ಅಡವಿಯ ಒಂದು ಕಾಡು ಪ್ರಾಣಿ. ಜಿಗರೆಯನ್ನು ಹೋಲುವ, ಆದರೆ ಸ್ವಲ್ಪ ಸಣ್ಣದಾದ ಈ ಪ್ರಾಣಿಯ ಮೈಮೇಲೆ ಮೊಗೆಕಾಯಿಯ ಮೇಲೆ ಇರುವಂತೆ ಬಣ್ಣದ ಪಟ್ಟೆಗಳಿರುತ್ತವೆ. ಬೈನಿ ಅಂದರೆ ಬಗಿನೆ ಮರ. ಗದುಗಿ ಗಡುತರ ಕೋಲು)

೨೭೩ ಹಂದಿ ಹೂ ಕೊಯ್ಯುತದೆ, ತುಂಬಿ ನೀರ ತರತದೆ;
ಕರಡಿ ಸಾರಿಸತದೆ

---

೨೬೯ ಅಡಕೆ, ಎಲೆ, ಸೊಣಕಾಯಿ (ಸುಣ್ಣ)
೨೭೦ ತೆಂಗಿನ ಕಾಯನ್ನು ಸಿಪ್ಪೆ ಸುಲಿವ ಶೂಲ
೨೭೧ ಅಡಿಕೆ ಸಿಪ್ಪೆ ತೆಗೆಯುವ ಶಬ್ದ
೨೭೨ ಹಲಸಿನ ಕಾಯಿ, ಹಣ್ಣು, ನಡುವಿನ ಗುಂಜು
೨೭೩ ಹಂದಿ (ತಾಗಿಸಿ) ಹೂ ಕೊಯ್ಯುತ್ತದೆ. ಹುಡುಗಿ ತುಂಬಿ ನೀರನ್ನು ಕೊಡದಲ್ಲಿ ತುರುತ್ತಾಳೆ. ಕರಡಿ ಅಂದರೆ ಕದಡಿ. ಸಗಣಿಯನ್ನು ನೀರಲ್ಲಿ ಕದಡಿ ಸಾರಿಸುತ್ತಾ

(ಇಲ್ಲಿ ಶಬ್ದಗಳ ಅರ್ಥ ಹಂದಿ, ತುಂಬಿ, ಕರಡಿ ಪ್ರಾಣಿಗಳನ್ನು ಸೂಚಿಸುವದಿಲ್ಲ)

೨೭೪ ಗಿಜಿಬಿಜಿ ಗಿಜಿಬಿಜಿ ಅವು ನಾಲ್ಕು
ಮುರಟಕ್ಕ ಮುರಟಕ್ಕ ಅವು ನಾಲ್ಕು
ಬೆವರಕ್ಕ ಬೆವರಕ್ಕ ಅವು ನಾಲ್ಕು

೨೭೫ ತಾಯಿ ನಿತ್ಯವೂ ಹೆರತ್ಲ್ಲ
ಹೆತ್ ವಂದ್ ಮಗು ೨೪ ತಾಸು ಬದ್ಕ್‌ತಿಲ್ಲೆ
(ಬದ್‌ಕ್ತಾ ಎಂಬುದೇ ಸರಿ)

೨೭೬ ದಾರಿತಲೆ (ಆದಿತಲೆ) ಮಾಸದಲಿ ದರ್ಬೆಅಪ್ಪನ ಹಿಂಡ್ತಿ ಕಾಟ

೨೭೭ ನೆಲದೊಳಗಿಪ್ಪುದು ಪುಲ್ಲಿ ಬಣ್ಣ
ಪುಕ್ಕ ಕೊಣೆಸ್ತು ಪಾರಿವಾಳ ಹಕ್ಕಿ
ಮೂರು ದೋರ (ದ್ವಾರ) ಬಾಯಲ್ಲೆಲ್ಲ ಉಚ್ಚಿ ಹೊಯ್ಯುತದೆ

೨೭೮ ವಂದಜ್ಜಿ ಮುಳ್ ಮುಳ್ಳು
ವಂದಜ್ಜಿ ಕನ್‌ಕನ್ನು (ರಂಧ್ರ ಎಂದು ಅರ್ಥ)
ವಂದಜ್ಜಿ ಬೂದಿ ಬೂದಿ

೨೭೯ ಹಿಂದೂ ಕುಂಡೆ, ಮುಂದೂ ಕುಂಡೆ
ಅಂತ್ರ ಕುಂಡೆ, ಕುಕುಂಡೆ (ನೆಲಕುಂಡೆ)

---

೨೭೪ ಮಳೆಗಾಲ, ಚಳಿಗಾಲ, ಬೇಸಿಗೆಕಾಲ
೨೭೫ ಕಾಲ, ದಿನದ ವೇಳೆ
೨೭೬ ಮಾರ್ಗಶಿರ. ಕುಶ (ದರ್ಭೆ) ಅವನ ಅಪ್ಪ ರಾಮ, ರಾಮನ ಹೆಂಡತಿ ಸೀತೆ, ಸೀತಕಾಲ
೨೭೭ ಕಬ್ಬಿನ ಬೇರು, ಕಬ್ಬಿನ ಗರಿ, ಕಬ್ಬಿನ ಗಾಣ, ಕಬ್ಬಿನ ಹಾಲು
೨೭೮ ಹಲಸಿನ ಕಾಯಿ (ಹಣ್ಣು), ಸಾಣೆಗೆ (ಜಾಳಿಗೆ), ಕುಂಬಳಕಾಯಿ
೨೭೯ ಆಕಳು, ಕರು, ಕರೆದವರು. ಪಾತ್ರೆ.

೨೮೦ ಮಣೆ ಮೇಲ್ ಮಣೆ, ಮಣೆ ಮೇಲ್ ಗಿಳಿ
ಗಿಳಿ ಮೇಲ್ ಮೈದಾನ, ಮೈದಾನ ತಪ್ಪಿರೆ ರಸ್ತೆ
ರಸ್ತೆ ಆಚೆ ಹುಳ

೨೮೧ ಕೆಂಡಬರ್ಗಿ ಹೂವ ಮುಂಡ್ಡವ ಯೆಲ್ಲ (ಇಲ್ಲ)
ಮಂಜ್ ಕೊದ್ರಿ ಹತ್‌ದವ ಯೆಲ್ಲ

೨೭೯ ಜಾಲ್ಯೋರ್ ಮಾಲ್ಯೋರ್ ಆದ ವಂದ್ ತಂಡ
(ಜಾಲಿಯುವರು, ಮಾಲಿಯುವರು ಎಂದು ಬಿಡಿಸಿ ಓದಿ)
ಹಿಂದ್ ಕಟ್ ಮುಂದ ಕಟ್ ಅದ ವಂದ್ ತಂಡ
ಬಾಯ್ ಕಟ್ ಬಂಡನ ಕಟ್ ಅದ ವಂದ್ ತಂಡ
೨೮೦ ಅಂಕದೊಂಕ ಸಂಕಪಾಲ ಮೂರು ಮುಕಳಿ
ಹತ್ತು ಕಾಲು (ಮೂರು ತಲೆ ಇನ್ನೊಂದು ಪಾಠದಲ್ಲಿವೆ)

೨೮೧ ವಬ್ಬವ. ಹೊಳೆ ಮಧ್ಯದಲ್ ವಂದ್ ನಿಂಬೆಮರ ಇದ್ದು. ಆ ಮರ
ದಲ್ ವಂದ್ ಮಂಗ ಕೂತ್ಕಂಡಿದ್ದು. ದಡದಲ್ ವಬ್ಬ ಮನ್ಸ ಇದ್ದ.
ಅವಂಗೆ ಲಿಂಬೆ ಹಣ್ ಬೇಕಾಜು, ಮೀಸಾಡೂಲ್ ಬತ್ತಿಲ್ಲೆ.
ದೋಣಿನೂ ಇಲ್ಲೆ. ಕೋಲು ಇಲ್ಲೆ. ಹೇಗ್ ತಕಂಜ ? (ತಕ್ಕೊಂಡ?)

---

೨೮೦ ಬಾಯಿ, ತುಟಿ, ಮೂಗು, ಹಣೆ, ಜೈತಲೆ, ಹೇನು
೨೮೧ ಬೆಂಕಿಕೆಂಡ. ಮಂಜು ಕೊದ್ರಿ-ಕುದುರೆ
೨೭೯ ಸೇವಿಗೆ. ಕಡಬು, ಎಲೆಯಿಂದ ಕಟ್ಟಿದ್ದು, ಕೊಳಗತಪ್ಪಲೆ (ತಪ್ಪೇಲಿ)
೨೮೦ ನೇಗಿಲು, ರೈತ, ಎರಡು ಎತ್ತು, ರೈತನ ಹಾಗೂ ಎರಡು ಎತ್ತುಗಳ
ಮುಕುಳಿ, ರೈತನ ಎರಡು ಕಾಲು, ಎತ್ತುಗಳ ಎಂಟು ಕಾಲು
೨೮೧ ಮಂಗಂಗೆ ವಂದ್ ಕಲ್ ಹೊಡೆತ, ಮಂಗ ಅವಂಗ್ ಲಿಂಬೆಹಣ್
ಕೊಯ್ದು ಹೊಡೆತು.

೨೮೨ ವಂದ್ ಸರೋವರದಲ್ ವಂದ್ ಪೇರಲಗಿಡ ಇದ್ದಿತ್ತ್, ಯೆರಡು ಜನ ಪೇರಲಕಾಯ್ ಕೊವ್ವಲ್ ಹೋಗೆನ್ತ್. ಒಬ್ಬವಂಗ್ ಈಸೂಲ್ ಬತ್ತ್. ವಬ್ಬವಂಗ್ ಈಸೂಲ್ ಬತ್ತಿಲ್ಲೆ.

ಈಸೂಲ್ ಬರುವವ ಮೇಲೆ ಮರಹತ್ಕಂಡಿ ಪೇರಲ ಹಣ್ ತಿಂತಾ. ಬುಡಕ್ಕಿದ್ದವ್ನೆ ಅವನಕಿಂತ ಹೆಚ್ ಹಣ್ ತಿಂತಾ ಹೇಗೆ?

೨೮೩ ಇಲ್ಲಿ ಪುಳುಪುಳು, ಅಲ್ಲಿ ಪುಳುಪುಳು
ಗುಡಿ ತನಕ ಪುಳುಪುಳು

೨೮೪ ಆಕಾಶದ ಮಧ್ಯದಲ್ ಏನಿದೆ ?
ಕೈ ಮುಂದೆ ಏನಿದೆ ?

೨೮೫ ಹಾಸ್ ಹಲಿಗೆ, ಹಜಾರ್‌ಗಂಬ. ಬೆಂಕಿಲ್ದೆ ಗಿದ್ದೆ
ಲಂಕಾಪಟ್ಣ ಸುಡ್ತು

೨೮೬ ವಂದು ಮನೆಗೆ ವಂಬತ್ತು ಬಾಗಿಲು

೨೮೭ ಆರಣೆ ಇಂಬಿಗೆ ಮನ್ಗ ತಿಕ್ಕು
ಆನೆ ಆಹಾರ ತಿನತಿಕ್ಕು

---

೨೮೨ ಬುಡ್ಕಿದ್ದವ ಶಿಟ್ ಬಂದ್ಕಂಡು ಕಲ್ ತೆಗ್ದ್ ಮೇಲಿದ್ದವಂಗ್ ಹೊಡ್ಯೂಲ್ ಹಣ್ಕ್ತ. ಮೇಲಿದ್ದವ ಶಿಟ್ ಬಂದು. ಪೇರಲ ಹಣ್ಣೇ ತೆಗ್ದ್ ಅವಂಗ್ ಹೊಡಿತ. ಅವ ಹೆಕ್ಕಂಡ್ ತಿನ್ತ.

೨೮೩ ಆಡಿನ ಹಿಕ್ಕೆ

೨೭೪ ಕಾ, ಕೊ

೨೮೫ ಎಲೆ. ಅಡಿಕೆ, ಸುಣ್ಣ

೨೮೬ ಮನುಷ್ಯ ಶರೀರ

೨೮೭ ಕತ್ತಿ. ಆರಣೆ ಎಂದರೆ ಹರಣೆ ಎಂಬ ಕ್ಷುದ್ರ ಪ್ರಾಣಿ

ಒಂದೇ ಉತ್ತರ

೧) ಒಮ್ಮೆ, ಗಂಡನ ಬಳಿ ಹೆಂಡತಿಯು 'ಒಲೆಯ ಮೇಲೆ ಏನಿದೆ?' ಎಂದು ಪ್ರಶ್ನಿಸುತ್ತಾಳೆ. ಅದೇ ಸಮಯಕ್ಕೆ ಪಕ್ಕದ ಮನೆಯಾತ ಗಂಡನ (ಯಜಮಾನನ) ಬಳಿ, 'ಇವತ್ತು ಆಫೀಸಿಗೆ ಹೋಗುವ ದಿಲ್ಲವೇ?' ಎಂದು ಕೇಳುತ್ತಾನೆ. ಆಗ ಯಜಮಾನ ಇಬ್ಬರಿಗೂ ಒಂದೇ ಉತ್ತರವನ್ನು ನೀಡುತ್ತಾನೆ. ಆ ಉತ್ತರವೇನು?

— ಹಾಲಿದೇ

೨) ಶ್ಯಾಮು ಸೈಕಲ್ ಮೇಲೆ ಹೋಗುತ್ತಿರುವಾಗ, ಒಬ್ಬ ಮುದುಕನು ಅವನನ್ನು ನಿಲ್ಲಿಸಿ, 'ನನ್ನನ್ನು ಸೈಕಲ್ ಮೇಲೆ ಅಲ್ಲಿಯ ವರೆಗೆ ಬಿಡುತ್ತೀಯಾ?' ಎಂದು ಕೇಳಿದನು. ಅಷ್ಟೇ ಹೊತ್ತಿಗೆ ಆತನ ಗೆಳೆಯನೊಬ್ಬ ಅವನ ಬಳಿ 'ಈ ಚೀಲದಲ್ಲಿ ಏನು ಇದೆ?' ಎಂದು ಕೇಳಿದನು. ಆಗ ಶ್ಯಾಮು ಇಬ್ಬರಿಗೂ ಒಂದೇ ಉತ್ತರವನ್ನು ನೀಡಿದನು. ಆ ಉತ್ತರ ಏನು?

— ಹತ್ತಿ

೩) ಈ ದಾರಿ ಯೆಲ್ಲಿಗ್ ಹೋಗ್ತು? ಹೇಳಿ ವಬ್ಬವ ಕೇಳ್ದ, ಮತ್ತೊಬ್ಬಳು ಕಣ್ಣಿನ ಅಂದ ಹೆಚ್ಚುದು ಯಾವದು? ಕೇಳ್ತು. ಇಬ್ಬರಿಗೂ ವಂದೇ ಉತ್ತರ

— ಕಾಡಿಗೆ

೪) ಒಬ್ಬ ಪೂಜಾರಿಯು ಕಿಟ್ಟುವಿನ ಬಳಿ, 'ಇವತ್ತು ದೇವಸ್ಥಾನಕ್ಕೆ ಬನ್ನಿ' ಎಂದನು. ಹಾಗೆ ಹೇಳುವಾಗ ಅವನು ಅಂಗಡಿಯಲ್ಲಿ ಸಾಮಾನನ್ನು ಕೊಳ್ಳುತ್ತಿದ್ದನು, ಆಗ ಅಂಗಡಿಯವನು 'ಯಾವ ಸಾಮಾನನ್ನು ಕೊಳ್ಳುತ್ತೀ? ಎಂದು ಕೇಳಿದನು.

ಆಗ ಕಿಟ್ಟು ಇಬ್ಬರಿಗೂ ಒಂದೇ ಉತ್ತರವನ್ನು ಕೊಟ್ಟನು. ಯಾವುದು?

— O.K

೫) ಒಬ್ಬ ವಕೀಲನ ಬಳಿ ಒಬ್ಬ ಸಾಧಾರಣ ಮನುಷ್ಯ ಬಂದು 'ಈ ಊರಿನಲ್ಲಿ ಯಾವ ಸಿನೆಮಾ ಶುರುವಾಗಿದೆ ? ಎಂದು ಕೇಳಿದನು. ಅನಂತರ, ವಕೀಲನ ತಮ್ಮನ ಮಗ ಬಂದು, 'ನಿನಗೆ ಮಕ್ಕಳೆಷ್ಟಾಗಿವೆ' ಎಂದು ಕೇಳಿದನು. ಆಗ ಆವನು ಇಬ್ಬರಿಗೂ ಒಂದೇ ಉತ್ತರ ಕೊಡುತ್ತಾನೆ. ಯಾವುದು?

— ಒಂದು ಗಂಡು. ಒಂದು ಹೆಣ್ಣು

೬) ವಬ್ಬವ ಹರ್ಗೆ ಸಪ್ನ ಕಟ್ಟಿಗೆ ಯೆಷ್ಟ್ ಬೆಲೆ? ಕೇಳ್ದ. ಅದೇ ಹೊತ್ತಿಗೆ ಮತ್ತೊಬ್ಬವ ತನ್ನ ಕರ ಬಿಟ್ಕಂಡ್ ಹೋದ್ದ್ ಕಂಡಿದ್ಯೋ? ಕೇಳ್ದ. ಆಗ ಇಬ್ಬರಿಗೂ ಒಂದೇ ಉತ್ತರ ಕೊಟ್ಟ. ಅದು ಏನು?

— ನಾ ಕಾಣೆ

ಲೆಕ್ಕದ ಒಗಟು

೧) ಇಬ್ಬರು ಯೆಣ್ಣೆ ಯಾಪಾರ ಮಾಡ್‌ದರು. ಅವ್ರುಹತ್ರ ಇರು ಪಾತ್ರ ವಂದ್ ನಾಲ್ಕ್ ಸೇರಿನ್ದು, ವಂದ್ ಯೇಳ ಸೇರಿನ್ದು. ವಂದ್ ಮೂರ್ ಸೇರಿನ್ದು. ಅವರಿಬ್ಬರು ಯೆಣ್ಣೆ ಯಾಪಾರ ಮಾಡ್ ಬರುವಾಗ ಪತ್ ಸೇರ್ ಯೆಣ್ಣೆ ಅವರ ಹತ್ರ ಶಿಲ್ಕುಳಿತು. ಐದ್ಮೈದ್ ಸೇರ್ ಯೆಣ್ಣೆ ಪಾಲ್ ಮಾಡ್‌ಕೊಳ್‌ಬೇಕು. ಹೇಗ್ ಪಾಲ್ ಮಾಡ್‌ಕೊಳ್‌ಬೇಕು ಅವರು ?

೨) ಆರ್ಯ, ಆರ್ಯನ ಹೆಂಡ್ತಿ, ಚೋರ್ಯ, ಚೋರ್ಯನ ತಂಗಿ; ಸುಟ್ಟಿದ್ ಮೂರ್ ರೊಟ್ಟಿ; ಬಾಗ ಮಾಡ್ದೆ ತಿನ್ನೊ. ಅದು ಹೇಗೆ?

೩) ವಬ್ಬವ ತನ್ನೂರಿಂದ ಮತ್ತೊಂದೂರಿಗೆ ವಜ್ರದ ಗುಂಡ ತಕಂ(ಡ್) ಬರೊ ಹೇಳ್ ಹೋಗ್ತ; ಹೋಪಾಗೂ ದೋಣೀ ದಾಂಟ್ ಹೋಗೊ. ಬಪ್ಪಾಗೂ ದಾಂಟ್ ಬರೊ.

ವಬ್ಬ ಮನಶ ಕೂತ್ಕಂಡ್ ಹೋಪಷ್ಟ್ ಇದ್ದ ದೋಣೆಲಿ ವಂದ್ ಗುಂಡು ತರೂಲಾಗ್ತು, ಮತ್ ವಂದ್ ಸಾಮಾನಾದ್ರೂ ಹಾಕಿದ್ರೆ ದೋಣಿ ಮುಳ್ಗಿ ಹೋಗ್ತು. ಆದ್ರೆ ಯೆರಡ ವಜ್ರದ ಗುಂಡ ತಕಂಡ್ ಬರ್ತ ಅದು ಹೇಗೆ?

---

೧) ಮೊದಲು ಮೂರು ಸೇರಿನ ಪಾತ್ರೆಯಿಂದ ಅಳೆದು ಮೂರು ಮೂರು ಆರುಸೇರು ಎಣ್ಣೆಯನ್ನು ಏಳು ಸೇರಿನ ಪಾತ್ರೆಯಲ್ಲಿ ಹಾಕಬೇಕು. ಆ ಮೇಲೆ ಆರು ಸೇರನ ಪಾತ್ರೆಯಿಂದ ನಾಲ್ಕು ಸೇರಿನ ಪಾತ್ರೆಗೆ ಎಣ್ಣೆ ತುಂಬಬೇಕು. ಕಡೆಗೆ ಮೂರು ಸೇರು ಎಣ್ಣೆಯನ್ನು ಆ ಎರಡು ಸೇರು ಇದ್ದ ಪಾತ್ರೆಗೆ ಹಾಕಲು ಐದು ಸೇರಾಯಿತು.

೨) ಆರ್ಯನ ಹೆಂಡತಿ, ಚೋರ್ಯನ ತಂಗಿ ಒಬ್ಬೇಳೆ.

೩) ವಂದ ಗುಂಡ ಹಾರಿಸಿ, ಅದು ಕೆಳಗೆ ಬರುವಷ್ಟರಲ್ಲಿ ಮತ್ತೊಂದ ಗುಂಡ ಹಾರಿಸಿ, ಅದರ ಹಿಡಿತ. ಇದೇ ರೀತಿ ಮಾಡ್ತ.

೪ ವಂದ್ ದೋಣಿ. ಅದು ನೂರಾನಲವತ್ತೊಂಬತ್ತು ಕೆ. ಜಿ. ಭಾರದ ಸಾಮಾನ ಮಾತ್ರ ಹೊತ್‌ಕತ್ತು. ದೋಣಿದಾಟ್ ಆಚೆ ದಡಕ್ ಹೋಗು ವವ ನೂರಾ ಐವತ್ ಕೆ, ಜಿ. ತೂಕದ ನಿಂಬೆಹಣ್ ತಕಂಡ್ ಹೋಗೊ. ವಂದ್ ನಿಂಬೆಹಣ್ ವಂದ್ ಕೆ. ಜಿ. ತೂಕದ್ದು.

ಅವ ನೂರಾಐವತ್ ನಿಂಬೆಹಣ್ಣ ದೋಣಿಲಿ ಹೋಗುವಾಗ ತಕಂಡು ಆಚೆ ದಡಕ್ ಹೋಗ್ತ. ಹೇಗ್ ಹೋಗ್ತ ?

೫ ವಂದಿಷ್ಟ್ ಜನ; ಯೆಷ್ಟೋ ಬಾಳೆಯೆಲೆ ಇದ್ದು. ಇಡೀ ಯೆಲೆ; ಹಾಗೆ ಹಾಕಿದರೆ. ವಂದ್ ಯೆಲೆ ಕಮ್ಮಿಯಾಗ್ತು, ಶಿಗ್ದ್ (ಸೀಳಿ) ಹಾಕಿದರೆ ವಂದ್ ಬಾಳೆ ಹೆಚ್ಚಾಗ್ತು. ಜನ ಯೆಷ್ಟು ? ಬಾಳೆ ಯೆಷ್ಟು ?

೬ ವಂದು ಕೆರೆಯಲ್ಲಿ ತುಂಬ ತಾವರೆ ಹೂವುಂಟು. ವಂದು ಹಿಂಡು ಹಕ್ಕಿ ಆ ಕೆರೆಗೆ ಹಾರಿ ಬಂದೊ. ವಂದೊಂದು ಹೂವಿನ ಮೇಲೆ ವಂದೊಂದು ಹಕ್ಕಿ ಕೂತುಕೊಂಡೊ. ವಂದ್ ಹಕ್ಕಿಗ್ ಹೂವ್ ಸಿಕ್ಕಲಿಲ್ಲ. ಹಿಂದಕ್ಕೆ ಹಾರಿ ಹೋದೊ. ಹೋದಷ್ಟು ಹಕ್ಕಿ ವಾಪಾಸ್ ಬಂದೊ. ವಂದೊಂದು ಹೂವಿನ ಮೇಲೆ ಯೆರಡೆರಡು ಹಕ್ಕಿ ಕೂತುಕೊಂಡೊ. ವಂದ್ ಹೂವ್ ಹೆಚ್ಚಾಯ್ತು. ಇವರ ವಗಟು ಕೆರೆಯಲ್ಲಿದ್ದ ಹೂವೆಷ್ಟು? ಹಾರಿ ಬಂದ ಹಕ್ಕಿಯೆಷ್ಟು?

---

೪ ಯೆರಡನೆಯದರಲ್ಲೂ ಹೀಗೆಯೇ. ದೋಣಿ ವಳಗೆ ನೂರಾನಲವತ್ತೊಂಬತ್ ಕೆ. ಜಿ. ತೂಕದ ಹಣ್ಣು ಮಾತ್ರ ಇರುವ ಹಾಗೆ ದೋಣಿಲಿರುವ ವಂದ್ ಹಣ್ ಹಾರಿಸಿ, ಅದು ಕೆಳ್ಗ್ ಬರ್ವಲ್ಲಿವರೆಗೆ ಮತ್ತೊಂದ ಹಣ್ ಹಾರಿಸಿ ಅದ್ರ ಹಿಡೀತ. ಇದೇ ರೀತಿ ಮಾಡ್ತ.

೫ ಮೂರು ಜನ, ಎರಡು ಬಾಳೆಯೆಲೆ

೬ ನಾಲ್ಕು ಹಕ್ಕಿ, ಮೂರು ಹೂವು

೭ ಮಕ್ಕಳಿಗೆ ಅರ್ಧ ರೊಟ್ಟಿ. ಗಂಡಸರಿಗೆ ಯೆರಡು ರೊಟ್ಟಿ. ಹೆಂಗಸರಿಗೆ ವಂದುವರ್ಧ ರೊಟ್ಟಿ. ಇಪ್ಪತ್ ಜನಾಗಬೇಕು. ಇಪ್ಪತ್ ರೊಟ್ಟ್ಯಾಗ ಬೇಕು. ಇದ್ದ ಗಂಡಸರೆಷ್ಟು? ಹೆಂಗಸರೆಷ್ಟು? ಹುಡುಗರೆಷ್ಟು?

೮ ವಬ್ರ್ ಬಟ್ರು ದೇವರ ಪೀಟ (ಪೀಠ)ಕ್ ಹೋಗ್ತ್ತಾರೆ. ದೇವರ ಪೂಜೆಗ್ ಮೂರ್ ದೇವ್ರ್ ಉಂಟಲ್ಲ.

ಆ ಮೂರ್ ದೇವರ ಮುಂದ್ ವಂದ್ ಕೆರೆಯುಂಟು. ಬಟ್ರು ಹೋಗುವಾಗ, ಯೆಷ್ಟೇ ಹೂ ತಕಂಡ್ ಹೋಗ್ಲಿ, ವಂದ್ ಹೂಗಿಗೆ, ಕೆರಿ ಮುಳ್ಕ್ಯದ್ ಕೂಡ್ಲೆ, ವಂದ್ ಹೂಗಿಗ್ ಯೆರಡ್ ಹೂಗಾಗ್ತದೆ.

ವಂದ್ ದೇವ್ರಿಗೆ ವಂದ್ ಸರ್ತಿ ಮುಡ್ಸಿದವರು ಮತ್ತೆ ಕೆರಿ ಮುಳ್ಕ ಬೇಕು. ಮೊದಲಿನ್ ದೇವರಿಗೆ ಯೆಷ್ಟ್ ಹೂಂಗ್ ಮುಡ್ಸಿರೋ ಅಷ್ಟೇ ಹೂಂಗ ಮುಡ್ಸಬೇಕು. ಉಳಿಕಿನ್ ದೇವರಿಗೆ ಮೂರ್ ಸರ್ತಿ ಮುಳ್ಕ ಬೇಕು. ಎಲ್ಲಾ ದೇವರಿಗೂ ಮುಡ್ಸಬೇಕು. ಯೆಷ್ಟ್ ತಕ ಮುಡ್ಸಿರೆ ಮೂರೂ ದೇವರಿಗೆ ಸಮ?

೯ ವಬ್ಬ ಸೂಳೆಮನೆಗ್ ಹೋಗ್ತ್ತಾನೆ. ಹೋಗುವಾಗ. ಸೂಳೆ ದುಡ್ಗಿಡ್ ನವಳಲ್ಲ ಅವಳು; ವಳಗ್ ಹೋಗಬೇಕಿದ್ರೆ, ಯೇಳು ಬಾಗ್ಲ ಉಂಟು. ಯೇಳ್ ಬಾಗಿಲಿಗೆ ಜಾರಕರು ಇದ್ದಾರೆ. ಅವಳಿಗೆ (ಹೋಗುವಾಗ, ಮತ್ತು ತಿರುಗಿ ಬರುವಾಗ) ಅರ್ಧ ಲಿಂಬೆಹಣ್ ತಕಂಡ್ ಹೋಗಬೇಕು.

---

೭ ಏಳುಜನ ಹೆಂಗಸರು, ಇಬ್ಬರು ಗಂಡಸರು, ಹನ್ನೊಂದುಜನ ಹುಡುಗರು

೮ ಏಳು ಹೂಗಳನ್ನು ಕೊಯ್ದು ಮುಳುಗಿದಾಗ ಹದಿನಾಲ್ಕು ಹೂಗಳಾಗುತ್ತವೆ. ಎಂಟು ಹೂಗಳನ್ನು ಒಂದನೇ ದೇವರಿಗೆ ಮುಡಿಸಿ, ಮತ್ತೆ ಮುಳುಗಿದಾಗ ಹನ್ನೆರಡು ಹೂಗಳಾಗುತ್ತವೆ. ಅವುಗಳಲ್ಲಿ ಎಂಟು ಹೂಗಳನ್ನು ಎರಡನೇ ದೇವರಿಗೆ ಮುಡಿಸಿ ಮುಳುಗಿದಾಗ, ನಾಲ್ಕು ಹೂಗಳು ಎಂಟಾಗಿ ಮೂರನೇ ದೇವರಿಗೂ ಎಂಟು ಹೂಗಳನ್ನು ಮುಡಿಸಲು ಸಾಧ್ಯವಾಗುತ್ತದೆ.

೯ ಹೋಗುವಾಗಿನ ಸಲುವಾಗಿ ನಾಲ್ಕು ಲಿಂಬೆ ಹಣ್ಣು, ಬರುವಾಗಿನ ಸಲುವಾಗಿ ನಾಲ್ಕು ಲಿಂಬೆಹಣ್ಣು, ಒಟ್ಟು ಎಂಟು ಲಿಂಬೆಹಣ್ಣು ತಕ್ಕೊಂಡು

ಯೆಷ್ಟೇ ಶಕಂಡ್ ಪೋಗ್ಲಿ, ಬಾಗ್ಲಲಿದ್ದವರಿಗೆ ಏಳೂ ಜನರಿಗೆ ಸಮಸಮ ಕೋಟ್ ಹೋಗಬೇಕು. ಕಡಿಗೆ ಅರ್ದ ಉಳಿಬೇಕು. ತಿರುಗಿ ಬರುವಾಗಲೂ ಹಾಗೆಯೇ ಕೊಟ್ಟು ಬರಬೇಕು.

೧೦ ಹತ್ತರ ಕೂಡ ಹನ್ನೊಂದು

ಹತ್ತರ ಕೂಡ ಹನ್ನೊಂದು, ಪರಿಶೆ ಕೂಡ ಗೋವಿಂದ ಎಂಬ ಮಾತುಗಳು ಗಾದೆ ಮಾತುಗಳಂತೆ ಬಳಕೆಯಾಗುತ್ತವೆ. ಇಲ್ಲಿ ಸ್ವಂತ ವ್ಯಕ್ತಿತ್ವವಿಲ್ಲದ ಒಬ್ಬನು ಪ್ರವಾಹಪತಿತನಂತೆ ತನ್ನದೇನೂ ನಿರ್ಣಯ ವಿಲ್ಲದೆಯೇ ಬೇರೆಯವರ ಜತೆಗೆ ಸೇರಿಕೊಂಡ ಲೆಕ್ಕದಲ್ಲಿ ಹೋಗುವವ ಎಂದು ಅರ್ಥ.

ತಿರುಪತಿಗೆ ಪರಿಶೆ ಹೋಗುವ ಯಾತ್ರಿಕರು ಗೋವಿಂದಾ ಗೋವಿಂದಾ ಎಂದು ಹೇಳುತ್ತ ಹೋಗುತ್ತಾರೆ. ಭಕ್ತಿಯಿರುವ ಜನರೊಡನೆ ಸೇರಿದ ಒಬ್ಬ ಹೆಡ್ಡನು ತಾನೂ ಅವರು ಹೇಳಿದ್ದನ್ನು ಅನುಕರಣ ಮಾಡುತ್ತ ಗೋವಿಂದ ಎನ್ನುತ್ತಾನೆ.

ಆದರೆ, ಇಲ್ಲಿ ಹತ್ತರ ಕೂಡ ಹನ್ನೊಂದು ಲೆಕ್ಕದ ಒಗಟಾಗಿ ಬಂದಿದೆ. ಇದರ ಅರ್ಥವೇನು?

ಏಳು ಹನ್ನೊಂದು ಇದು ಕೂಡ ಗಾದೆಯಂತೆ ಬಳಕೆಯಾದಾಗ ಬಹಳ ಕಷ್ಟದ ಪರಿಸ್ಥಿತಿ ಬಂತು ಎಂಬ ಅರ್ಥ ಕೊಡುತ್ತದೆ.

ಆದರೆ, ಸಂಖ್ಯೆಯ ಒಗಟಾದಾಗ ಇದರ ಅರ್ಥವೇನು?

ಹೋಗಬೇಕು. ಏಳು ಮಂದಿ ಕಾವಲುಗಾರರಿಗೂ ಅರ್ಧ ಹಣ್ಣಿನಂತೆ ಕೊಟ್ಟು, ಸೂಳೆಗೆ ಅರ್ಧ ಲಿಂಬೆ ಹಣ್ಣನ್ನು ಕೊಡಬೇಕು. ತಿರುಗಿ ಬರುವಾಗಲೂ ಇದೇ ರೀತಿ ಎಲ್ಲರಿಗೂ ಅರ್ಧ ಲಿಂಬೆಹಣ್ಣಿನಂತೆ ಕೊಡಬೇಕು.

೧೦ ರಾವಣನ ಹತ್ತು ತಲೆ, ಕುಂಭಕರ್ಣನ ಒಂದು ತಲೆ

೧೧ ಅಜನ ವೈರಿಯು ಸಖಿನ ತಲೆದಿಂಬ ಮಾಡಿ. ಮಲಗಿರ್ಪ ಓರ್ವ ಸತಿಯುಳ ವಿಟಪುರುಷನು ಕಂಡನು.

ಕತ್ತಲೆಯೊಳ್ ಕೊಂದಾತನಣ್ಣನ ಪಿತನ ವಾಹನ ನಾಲ್ಕಾರೆಂದಳು ಇದರರ್ಥವನು ಪೇಳಿ ಸರ್ವಜ್ಞ.

ಇದೇ ಒಗಟಿನ ಇನ್ನೊಂದು ಪಾಠ.

ಅಜನ ವೈರಿಯುಂ ತಲೆದಿಂಬನಂ ಮಾಡಿ. ಮಲಗಿರ್ಪಳಂ ಕಂಡು, ಚರಣವೃಷಭಾಯೆನಲ್ ತಿಳಿದವಳು ನಾಲ್ಕಾರಿಂತೆಂದಳು.

೧೨ ವಂದ್ ಕಾಕೆ ಹಾರ್ ಬತ್ತು. ನೀರ್ ಕುಡಿತು. ಕುಡಿದು ಯೇಳಿಕಾರೆ ಯೇಳು ಕಾಕೆ, ದಡದ ಮೇಲೆ ಹತ್ ಕಾಕೆ. ಇದ್ದದ್ದು ಎಷ್ಟು ಕಾಕೆ?

೧೩ ಕೆರಿಂದ ಏಳೆಮ್ಮೆ; ಗುಡ್ಡಿ ಹತ್ತೆಮ್ಮೆ. ಒಟ್ಟು ಎಷ್ಟು ಎಮ್ಮೆ?

---

೧೧ ವಂದನೇ ಪಾಠದಲ್ಲಿನ ಅಜನ ವೈರಿಯು ಎಂದಿಷ್ಟೇ ಮೊದಲಿಗೆ ಇದ್ದು, ನಿರೂಪಕರು ತಪ್ಪಾಗಿ ಸಖಿನ ಎಂಬ ಶಬ್ದವನ್ನು ಸೇರಿಸಿದ್ದಿರಬೇಕು. ಅಜನ ವೈರಿ ತೋಳ. ತೋಳ ತಲೆದಿಂಬ ಮಾಡಿ ಮಲಗಿದ್ದಳು ಎಂಬುದು ಸಮಂಜಸವಾಗಿ ಹೊಂದುತ್ತದೆ.

ಕೀಚಕನನ್ನು ಕತ್ತಲೆಯೊಳ್ ಕೊಂದಾತ ಭೀಮ. ಅವನ ಅಣ್ಣ ಧರ್ಮರಾಜ. ಅವನ ಪಿತ, ತಂದೆ ಯಮ. ಯಮನ ವಾಹನ ಕೋಣ. ಇಲ್ಲಿ ಯಮನ ಎರಡು ಕಾಲು. ವಿಟನ ಎರಡು ಕಾಲು, ಕೋಣನ ನಾಲ್ಕು ಕಾಲು, ಸತಿಯು ಎರಡು ಕಾಲು ಸೇರಿ ಹತ್ತು ಕಾಲು. ಹತ್ತು ಎಂಬುದು ಸೂಚನೆ.

ಎರಡನೆ ಪಾಠದಲ್ಲಿ ಚರಣ ಅಂದರೆ ಕಾಲು. ವೃಷಭ ಎತ್ತು. ಕಾಲು ಎತ್ತು ಎಂದಮೇಲೆ ಆಕೆ ನಾಲ್ಕು ಆಳು ಅಂದರೆ ಹತ್ತು ಎಂದಳು.

೧೨ ವಂದೇ ಕಾಕೆ. ಏಳು (ಎದ್ದುಕೊ) ಕಾಕೆ. ಹತ್ತು ಹತ್ತಿಕೊ ಕಾಕೆ ಎಂದಿದ್ದು.

೧೩ ವಂದೇ ಎಮ್ಮೆ. ಕೆರೆಯಿಂದ ಏಳು ಎಮ್ಮೆ. ಗುಡ್ಡ ಹತ್ತು ಎಮ್ಮೆ ಎಂದು ಆ ಎಮ್ಮೆಗೇ ಹೇಳಿದ್ದು.

೧೪ ಮುನ್ನೂರರವತ್ತೊಂದು ಮುತ್ತು. ಮಿಗಿಲಾಗಕಾಗ, ಜೋಡಿಯಾಗ ಬೇಕು. ಯೆಷ್ಟು ಸರ ಮಾಡುಕೂ ಅಡ್ಡಿಲ್ಲ.

೧೫ ಟೇಬಲ್ ಮೇಲೆ ವಂದು ಬುಟ್ಟಿಯಲ್ಲಿ ಆರ್ ಹಣ್ಣಿದ್ದು. ಯೇಳ ಜನರು ಬಂದು, ವಬ್ಬೊಬ್ರು ವಂದೊಂದು ಹಣ್ ತಿಂದೊ. ಸಮಾ ಆತು. ಹೇಗೆ?

೧೬ ವಂದ್ ಹೊಟೆಲಿಗೆ ಯೇಳ ಜನ ಹೋಗಿದ್ರೊ. ಅಲ್ಲಿ ಆಳು, ಯೆಂತಾ ತಕಂಬರೊ ? ಕೇಳ್ದ. ಸಿಕ್ಸ್‌ಟಿವನ್ ಕಾಫಿ ಅಂದೊ. ಯೆಲ್ಲೊರೂ ವನ್ನಂದ್ ಕಪ್ ಕುಡ್ದೊ. ಯೆಲ್ಲಾ ಖರ್ಚಾಗ್ ಹೋತು. ಅದು ಹೇಗೆ?

೧೭ ಒಬ್ಬವ, ಒಂದು ಹುಲಿ. ಆಕಳು, ಹುಲ್ಲಹೊರೆ ಸಮೇತ ಹೊಳೆಯ ಒಂದು ದಡದಲ್ಲಿದ್ದ ದೋಣಿಲಿ ಹೊಳೆ ದಾಟುವಾಗ ಆ ಮನುಷ್ಯ, ಸಂಗಡ ಒಂದು ಪ್ರಾಣಿ, ಇಲ್ಲ ಹುಲ್ಲಹೊರೆ ಮಾತ್ರ ತಕಂಡ್ ಹೋಗುಲಾಗ್ತು.

ಹುಲಿ ತಕಂಡ್ ಹೋದ್ರೆ, ಆಕಳು ಹುಲ್ಲ ತಿನ್ತು. ಆಕಳ ಆಚೆ ದಡಕ್ ಬಿಟ್ಟು, ಮತ್ತೊಂದು ಸಾರೆ ಹುಲ್ಲ ಹೊರೆ ತಕಂಡ್ ಹೋದರೆ ಆಲ್ಲಿ ಆಕಳು ಹುಲ್ಲಹೊರೆ ತಿನ್ತು. ಆಕಳ ಬಿಟ್ಟು ಹುಲ್ಲಹೊರೆ ತಕಂಡ್ ಹೋದರೆ ಅವ ಯೆಲ್ಲಾ ತಕಂಡ್ ಹೋಗುದು ಹೇಗೆ?

---

೧೪ ಒಂದು ಸರ. ೧೯ ಸರ, ೧೯-೧೯ ಮುತ್ತು ಹಾಕ್ಬದು.
ಕು. ತಃಕ ರಾಮ ಗಟ್ಟಿಪ್ಪ ನಾಯ್ಕರಿಗೆ ಘಟ್ಟಕ್ಕೆ ಹೋದಾಗ ಬಾಡದ ಶ್ರೀ ಗಣಪತಿ ಪಟಗಾರರು ಹೇಳಿದ್ದು.

೧೫ ಟೇಬಲ್ ಮೇಲೆ ಒಂದು ಅಂದರೆ ಒಂದ ಹಣ್ಣು; ಏಳು ಹಣ್ಣು

೧೬ ಆರು. ಸಿಕ್ಸ್ ಟೀ, ವನ್ ಕಾಫಿ

೧೭ ಮೊದಲು ಆಕಳ ಆಚೆ ದಡಕ್ ತಕಂಡ್ ಹೋದ. ತಿರುಗಿ ಬಂದವ ಹುಲ್ಲಹೊರೆ ತಕಂಡ ಆಚೆದಡಕ್ ಹೋಗಿ, ಹುಲ್ಲಹೊರೆ ಇಟ್ಟು, ಆಕಳ ತಿರುಗಿ ತಂದು ಈಚೆ ದಡದಲ್ ಬಿಟ್ಟು, ಹುಲಿ ತಕಂಡ್ ಹೋಗಿ, ಅಲ್ಲಿ ಬಿಟ್ಟು ತಿರುಗಿ ಬಂದ. ಹುಲಿ ಹುಲ್ಲ ತಿನ್ತಿಲ್ಲೆ. ಮತ್ತೆ ಆಕಳ ತಕಂಡಿ ಆಚೆ ದಡಕ್ ಹೋದ,

ಒಗಟು ಕಥೆಗಳು

೧ ಜಾಣರ ಕೈವಾಡ

ಒಂದೂರಲ್ಲಿ ಒಬ್ಬ ಭಟ್ಟನಿದ್ದನು. ಅವನಿಗೆ ಮೂವರು ಹೆಣ್ಣುಮಕ್ಕಳು. ಒಂದು ದಿನ ಆ ಮೂವರು ಹೆಣ್ಣು ಮಕ್ಕಳೂ ಮೂತ್ರ ವಿಸರ್ಜನೆ ಮಾಡಲು ಹೊರಗೆ ಬಂದಿದ್ದರು.

ರಾಜನು ರಾತ್ರಿ ಸಂಚಾರಕ್ಕಾಗಿ ಹೊಟಿದ್ದನು. ಆಗ ಆತನ ಪರಿವಾರದವರು ಮದ್ದಳೆ ನುಡಿಸುತ್ತಿದ್ದರು.

ರಾಜನು ಮಾರ್ಗದಲ್ಲಿ ಹತ್ತಿರ ಬರುತ್ತಿದ್ದನು. ಮೂವರಲ್ಲಿ ಎರಡನೆಯವಳು 'ಅಕ್ಕ, ಕೇಳೆ ತೊಗಲ ಮೋಜ' ಎಂದು ಹೇಳಿದಳು.

ಕಿರಿ ಹುಡುಗಿಯು, 'ಅದಕ್ಕೆಲ್ಲಾ ಹೊತ್ತು ವೇಳೆ ಉಂಟು' ಎಂದು ದನಿಗೂಡಿಸಿದಳು.

ಹಿರಿಯವಳು, 'ಅದೆಲ್ಲಾ ಜಾಣರ ಕೈವಾಡ' ಎಂದು ಹೇಳಿದಳು.

ರಾಜನು ಈ ಅಕ್ಕ-ತಂಗಿಯರ ಮಾತು ಕೇಳಿದನು. ಅವನಿಗೆ ಈ ಮಾತುಗಳ ಅರ್ಥವೇನೆಂದು ತಿಳಿಯಲಿಲ್ಲ.

ಅರಮನೆಗೆ ಮರಳಿದ ಅವನು ಮರುದಿನ ಓಲಗದಲ್ಲಿ ಮುನ್ನಾದಿನ ಹುಡುಗಿಯರು ಹೇಳಿದ ಮಾತುಗಳನ್ನು ಒಂದೊಂದಾಗಿ ಹೇಳಿದನು.

ಇವುಗಳ ಅರ್ಥ ಬಲ್ಲವರು ಹೇಳಿರೆಂದು ಹೇಳಿದನು. ಯಾರೂ ಅರ್ಥ ಹೇಳಲು ಸಮರ್ಥರಾಗಲಿಲ್ಲ.

ಆಗ ರಾಜನು ಹುಡುಗಿಯರ ತಂದೆಗೆ ಕರೆ ಕಳಿಸಿದನು. ಆ ಭಟ್ಟನು ಬಂದ ಮೇಲೆ ರಾಜನು 'ರಾತ್ರಿ ಹೊತ್ತಿನಲ್ಲಿ ನಿನ್ನ ಹೆಣ್ಣು ಮಕ್ಕಳು ಹೊರಗೆ ಬಂದಿದ್ದಾಗ ಹೀಗೆ ಹೇಳಿದ್ದರ ಅರ್ಥವೇನು?' ಎಂದು ಕೇಳಿದನು.

ಭಟ್ಟನು ಅಂಜುತ್ತಾ 'ನನಗೆ ಗೊತ್ತಿಲ್ಲ' ಎಂದು ಹೇಳಿದನು.

'ಹಾಗಾದರೆ ನಿನ್ನ ಮೂವರು ಹುಡುಗಿಯರನ್ನು ಕರೆದುಕೊಂಡು ಬಾ' ಎಂದು ಅರಸನು ಅವನನ್ನು ಕಳಿಸಿದನು.

ಭಟ್ಟನು ಮನೆಗೆ ಬಂದವನು 'ಅಧಿಕ ಪ್ರಸಂಗಿಗಳು ತಮ್ಮಷ್ಟಕ್ಕೆ ಸುಮ್ಮ ನಿರಲಾರದೆ ಇಲ್ಲದ ಉಪದ್ವ್ಯಾಪ ತಂದು ಹಾಕಿದರು' ಎಂದು ಹೇಳಿ ಬಯ್ದನು.

ರಾಜನ ಅಪ್ಪಣೆಯಂತೆ ಹುಡುಗಿಯರನ್ನು ಅರಮನೆಗೆ ಕರೆದುಕೊಂಡು ಹೋದನು.

ಹುಡುಗಿಯರು ದಿಟ್ಟತನದಿಂದ ಸಭೆಯಲ್ಲಿ ರಾಜನ ಮುಂದೆ ನಿಂತರು. ಅರಸನು ಅವಳು ಹೇಳಿದ್ದ ಮಾತುಗಳ. ಅರ್ಥವನ್ನು ಕೇಳಿದನು.

ರಾಜನ ಮಾತಿಗೆ ಯಾರೂ ಉತ್ತರ ಕೊಡಲಿಲ್ಲ. ಎರಡನೆಯವಳು 'ಅಕ್ಕ, ಇವೆಲ್ಲ ಆವೇ ಸರಿ' ಅಂದಳು.

ಕಿರಿಯ ಮೂರನೆಯವಳು 'ಆಹಾದರೆ ಕೋಡೇನಿಲ್ಲಲ್ಲ!' ಎಂದು ದನಿಗೂಡಿಸಿದಳು.

ಹಿರಿಯವಳು, 'ಕೆಲವಕ್ಕೆ ಇರ್ತದೆ; ಕೆಲವಕ್ಕೆ ಇರುವದಿಲ್ಲ!' ಎಂದು ಹೇಳಿ ನಕ್ಕಳು.

ಆಗ ರಾಜನಿಗೆ ಮತ್ತೂ ಆಶ್ಚರ್ಯವಾಯಿತು. ಮೊದಲಿನ ಸಮಸ್ಯೆಗಿಂತಲೂ ಇದು ಕಠಿಣವೆಂದು ಅವನಿಗೂ, ಅಲ್ಲಿ ಕೂಡಿದ ಜನರೆಲ್ಲರಿಗೂ ಅನಿಸಿತು.

ಭಟ್ಟನು ಸಿಟ್ಟಿನಿಂದ ಮಕ್ಕಳನ್ನು ಕಣ್ಣುಬಿಟ್ಟು ನೋಡುತ್ತ 'ಏನು ಪ್ರಮಾದ ಕಾದಿದೆಯೋ?' ಎಂದು ಚಡಪಡಿಸುತ್ತಿದ್ದನು.

ರಾಜನು 'ಇದೇನು? ಗೂಢವಾದ ಮಾತುಗಳನ್ನೇ ಆಡುವ ಅಭ್ಯಾಸ ನಿಮಗೆ ಇದ್ದ ಹಾಗಿದೆ. ಒಗಟನ್ನು ಬಿಡಿಸಿ ಹೇಳಿ' ಅಂದನು.

ಹಿರಿಯವಳು ದಿಟ್ಟತನದಿಂದ ಕೇಳಿದಳು. ನಾವು ಇವರ ಅರ್ಥ ಹೇಳಿದರೆ ರಾಜರು ನಮ್ಮನ್ನು ಮದುವೆಯಾಗುವಿರೋ? ಅಂದರೆ ಹೇಳುತ್ತೇವೆ' ಎಂದಳು,

ಆಗ ರಾಜನು ನಕ್ಕು, 'ಬಲು ಜಾಣ ಹುಡುಗಿಯರು ನೀವು. ಆದರೆ. ನಾನು ಮೂವರನ್ನೂ ಮದುವೆಯಾಗುವದಿಲ್ಲ. ನಾನು ನಿನ್ನನ್ನು ಮದುವೆ

ಯಾಗುತ್ತೇನೆ. ನಮ್ಮ ಪ್ರಧಾನಿಯು ಎರಡನೆಯವಳನ್ನು ಮದುವೆಯಾಗಲಿ. ಕಿರಿಯ ಹುಡುಗಿಯನ್ನು ನಮ್ಮ ಅಡಿಗೆ ಭಟ್ಟ ಮದುವೆಯಾಗುತ್ತಾನೆ. ಒಪ್ಪಿದಿರೋ?' ಎಂದು ಕೇಳಿದನು.

ಹುಡುಗಿಯರು 'ಹೂಂ' ಎಂದು ದನಿಗೂಡಿಸಿದರು.

ಅವರಿಗೂ ಸಭೆಯಲ್ಲಿದ್ದ ಉಳಿದವರಿಗೂ ಭಟ್ಟನಿಗೂ ಕೂಡ ನಗು ಬಂದು ಹೋಯಿತು.

ಆಗ ಹಿರಿಯಳ ಕಣ್ಸನ್ನೆಯಂತೆ ಎರಡನೆಯವಳು 'ತೊಗಲ ಮೋಜು ಎಂದು ಅಂದದ್ದೇಕೆಂದರೆ, ಮದ್ದಳೆಯ ಶಬ್ದ ಕೇಳಿ, ಮದ್ದಳೆಗೆ ಕಟ್ಟಿದ ತೊಗಲಿನ ಶಬ್ದ ಎಷ್ಟು ಪಸಂದಾಗಿದೆ. ಎಂದು ಹೇಳಿದೆ ಅಷ್ಟೇ, ಎಂದು ಹೇಳಿದಳು.

ಕಿರಿಯ ಹುಡುಗಿಯು 'ಹೊತ್ತುವೇಳೆ ಉಂಟು ಎಂದದ್ದು ಯಾಕೆಂದರೆ, ಇಂತಿಂತಿಷ್ಟು ಹೊತ್ತಿಗೆ ಇಂಥ ರೀತಿಗಳಲ್ಲಿ ಮದ್ದಳೆ ಬಡಿಯಬೇಕು ಎಂದು ನಿಶ್ಚಿತವಾದ ಕ್ರಮವಿದೆ ಎಂದು ಅರ್ಥ' ಎಂದಳು.

ಹಿರಿಯಳು 'ಅದೆಲ್ಲ ಜಾಣರ ಕೈವಾಡ ಎಂದರೆ, ಮದ್ದಳೆ ಬಡಿವಲ್ಲೂ ಹಸ್ತಕೌಶಲ್ಯ ಬೇಕಾಗುತ್ತದೆ ಎಂದು ನನ್ನ ಮಾತಿನ ಅರ್ಥ' ಎಂದು ವಿವರಿಸಿದಳು.

ರಾಜನು. 'ಇಷ್ಟು ಸುಲಭ ಮಾತುಗಳ ಅರ್ಥ ತಿಳಿಯಲಿಲ್ಲವಲ್ಲ' ಎಂದು ನಾಚಿಕೊಂಡನು. 'ನಂತರದ ಮಾತುಗಳ ಅರ್ಥವೇನು?' ಎಂದು ಕೇಳಿದನು.

ಅದಕ್ಕೆ ಹಿರಿಯವಳು 'ಮಾತಿನ ಅರ್ಥ ಕೇಳಿಕೊಂಡು ಸಿಟ್ಟಾಗಿ ರಾಜರು ನಮ್ಮನ್ನು ದಂಡಿಸುವದಿಲ್ಲವೆಂದು ವಚನ ಕೊಡಬೇಕು' ಎಂದು ಕೇಳಿಕೊಂಡಳು. ರಾಜನು ಅದಕ್ಕೆ ಒಪ್ಪಿಕೊಂಡನು.

ಹಿರಿಯ ಹುಡುಗಿಯೇ ವಿವರಿಸಿದಳು. ಇವೆಲ್ಲ ಆವೇ ಸರಿ ಎಂದರೆ ಇವರಿಗೆ ಇಷ್ಟು ಸುಲಭವಾದ ಮಾತಿನ ಅರ್ಥ ತಿಳಿಯಲಿಲ್ಲ. ಇವೆಲ್ಲ ಕುರಿಗಳೇ ಎಂದದ್ದು. ನನ್ನ ಕಿರಿ ತಂಗಿ 'ಕೋಡೇನಿಲ್ಲಲ್ಲ' ಎಂದು ಹೇಳುವ ಅರ್ಥದಲ್ಲಿ 'ಕಾವೇನಿಲ್ಲಲ' ಅಂದದ್ದು.

ಅದಕ್ಕೆ ನಾನು 'ಕೆಲವಕ್ಕೆ ಇರುತ್ತವೆ. ಕೆಲವಕ್ಕೆ ಇರುವದಿಲ್ಲ ಅಂದದ್ದೇಕೆಂದರೆ, ಕುರಿಮರಿಗಳಿಗೆ ಕೋಡಿರುವದಿಲ್ಲ. ದೊಡ್ಡ ಕುರಿಗಳಿಗೆ ಮಾತ್ರ

ಕೋಡು ಇರುತ್ತವೆ ಎಂದು ಹೇಳಿದೆನು ಎಂದು ಹೇಳಿದಳು.

ರಾಜನೂ ಸಭೆಯಲ್ಲಿರುವವರೆಲ್ಲರೂ ಈ ಹುಡುಗಿಯರ ಧೈರ್ಯಕ್ಕೂ ಜಾಣತನಕ್ಕೂ ಆಶ್ಚರ್ಯ ಪಟ್ಟರು. ತಮ್ಮನ್ನು ಈ ಹುಡುಗಿಯರು ಕುರಿಮರಿಗಳಿಗೆ ಹೋಲಿಸಿದ್ದರಿಂದ ಅವರಿಗೆ ನಗು ಬಂತು.

ರಾಜನು ಮಾತು ಕೊಟ್ಟ ಪ್ರಕಾರ ಹಿರಿಯ ಹುಡುಗಿಯನ್ನು ಮದುವೆಯಾದನು. ಪ್ರಧಾನಿಯು ಎರಡನೆಯವಳನ್ನೂ ಅಡಿಗೆ ಭಟ್ಟನು ಕಿರಿಯ ಹುಡುಗಿಯನ್ನೂ ಮದುವೆಯಾದರು. ಎಲ್ಲರೂ ಸುಖ ಸಂತೋಷದಿಂದ ಉಳಿದರು.

೨. ಮೂರು ಸಾಮಾನು

ವಂದರ್ನು ಹುಡ್ಗಿ ವಂದ್ ಶಿಪಾಯ್ ಕರ್‍ದಿ, ಮೂರಾಣೆ ರೊಕ್ಕ ಕೊಟ್ಳು. 'ಪೇಟೇಗ್ ಹೋಗಿ, ವಂದಾಣೆ ಕೆಳಗಿನ್ದು, ವಂದಾಣೆ ನಡಗಿನ್ದು. ವಂದಾಣೆ ಮೇಸಂದು ಮೂರ್ ಸಾಮಾನ್ ತಕಂಡ್ ಬಾ' ಅಂದ್ ಹೇಳ್ತು.

ಶಿಪಾಯ್ ಪೇಟೆಗ್ ಹೋದ. ಯೆಲ್ಲಾ ಅಂಗ್ಡಿನೂ ಕೇಳ್ದ. ಯಾರೂ ಕೊಡ್ಲಿಲ್ಲ.

ತುದಿಗಿನ್ದ್ ವಂದ್ ಅಂಗ್ಡಿಗ್ ಹೋದ, ಅಪ್ನ ಪತ್ರ ಕೋಳೂ ರೊಪ್ಪಕ್ಕೆ, ಅವ ಮೂರ್ ಸಾಮಾನ್ ಕಟ್‍ಕೊಟ್ಟ.

ವಂದಾಣೆ ಹಲ್ ತಿಕ್ಕು ಒಟ್ಟು, ವಂದಾಣೆ ಮೂಗ್ನ ಪುಡಿ, ವಂದಾಣೆ ಕುಂಕುಮ.

ಟಿಪ್ಪಣಿ :- ತೀರ ವೃದ್ಧೆಯಾದ ನನ್ನ ಈ ಅಜ್ಜಿ ಹೇಳಿದ ಆವು ಎಂಬುದಕ್ಕೆ ಕುರಿ ಎಂಬ ಅರ್ಥ ಸರಿಯಾದದ್ದಲ್ಲ; ಆವು ಎಂದರೆ ಆಕಳು ಎಂಬ ಅರ್ಥ ಹೇಳಬೇಕಾಗಿತ್ತು. ಅದೂ ಈ ಸಂದರ್ಭಕ್ಕೆ ಹೊಂದುತ್ತದೆ.

ಗುಡ್ಡೇಅಂಗಡಿ ಗ್ರಾಮದ ದಿ. ನಾರಾಯಣ ಭಂಡಾರಿಯವರು ಈ ಕಥೆಯನ್ನು ಹೇಳುತ್ತಿದ್ದರೆಂದೂ. ಇವೆಲ್ಲ 'ಆವೇ ಸರಿ' ಎಂದು ಹೇಳಿದ್ದರು ಎಂದೂ ವೇ॥ ಅನಂತ ಮಹಾದೇವ ಭಟ್ಟರು ತಿಳಿಸಿರುತ್ತಾರೆ. ಶ್ರೀ ಅನಂತ ಭಟ್ಟರಿಗೆ ಈಗ ೮೫ ವರ್ಷ. ಸಂಸ್ಕೃತ ವಿದ್ವಾಂಸರು.

ಕೊಟ್ಟವ, ಮತ್ ಆ ಶಿಪಾಯ್ನ ಹತ್ರ ಹೇಳ್ದ. 'ಬಂದದ್ದಾದ್ರೆ ಬೇಡ. ಬರದೆ ಇದ್ದದ್ದಾದ್ರೂ ಬೇಡ, ಬತ್ತೇ ಇದ್ದದ್ದಾದ್ರೆ ಅಡ್ಡಿಲ್ಲ. ಹೇಳ್ ಕಳ್ಸಿದ.

ಇಲ್ಲಿ ಬಂದ್ ಹೇಳೂರಷ್ಟಕೇಯು, ಅದೂ ಈ ಪೋಲೀಸನವ್ನ ಹತ್ರ ಪ್ರತಿ ಉತ್ರ ಹೇಳ್ ಕಳ್ಸ್ತದೆ.

'ಬಂದದ್ದೂ ಅಲ್ಲ; ಬರದಿದ್ದದ್ದೂ ಅಲ್ಲ; ಬತ್ತೇ ಇದ್ದದ್ದೇಯು (ಮೊಲೆ) ನಿನಗೂ ಬಂದವನಾದ್ರೆ ಬೇಡ; ಬರದೆ ಇದ್ದವನಾದ್ರೆ ಬೇಡ: ಬತ್ತೇ ಇದ್ದವಾದ್ರೆ ಅಡ್ಡಿಲ್ಲ' ಅಂತ್ ಹೇಳ್ ಕಳ್ಸ್ತು.

ಆಗ ಪೋಲೀಸ ಹೋಗ್ ಅಲ್ ಹೇಳ್ದ. 'ತಾನ್ ಬಂದವ್ನೂ ಅಲ್ಲ, ಬರ್ದೆ ಇದ್ದವ್ನೂ ಅಲ್ಲ, ಬತ್ತೇ ಇದ್ದವ್ನೇಯಾ (ಮೀಸೆ) ಅಂತ ಹೇಳ್ ಕಳ್ಸ್ದ.

೩. ಚಕ್ರಕಂಬ ಮುರಿಯಬೇಕು.

ವಂದು ಅರಸೂ ಹುಡ್ಗೀ ಕೊಟ್ಗಿಯೊಳಗ್ ಹಾಲ್ ಕರೀತಾ ಇತ್ತು. ಅದೇ ಸಮಯಕ್ಕೆ ವಂದು ಅರಸೂ ಹುಡ್ಗ ಕುದ್ರಿಯೆರಿ, ಆ ಜಾಗಕ್ ಬಂದ.

ಬಂದ್ ಕೊದ್ರಿ ಇಳ್ದಿ, ಆ ಅರಸೂ ಹುಡ್ಗಿ ಹತ್ರ ಕೇಳ್ದ. ಮೂರು ಮೊಕದವ್ಳೇ, ನಾನು ನಿನ್ನ ಕೂಡಿ ಬರಲೇನೇ?'

ಅರಸೂ ಹುಡ್ಗಿ ಹೇಳ್ತು. 'ಬರಲಿಕ್ ಅಡ್ಡಿಲ್ಲ, ವಬ್ಬ ಸಾಯ್‌ಬೇಕು: ವಬ್ಬ ಹುಟ್‌ಬೇಕು. ಣವಮುರ್ಕ್ ವಣಮುರ ಚಾಚ್‌ಬೇಕು. ಚಕ್ರಕಂಬ ಮುರಿ ಬೇಕು. ಆಗ ಬರಲಿಕ್ ಅಡ್ಡಿಲ್ಲಾ' ಅಂತು.

ಈ ಅರಸೂ ಹುಡ್ಗ ಆಗ್ ಅರ್ಥ ಮಾಡ್ಕಂಡ. ಇದ್ಕೆ ಅರ್ಥ:-

ವಬ್ಬ ಸಾಯ್‌ಬೇಕು; ವಬ್ಬ ಮುಟ್‌ಬೇಕಂದ್ರೆ, ಸೂರ್ಯ ಕಂತಬೇಕು, ಚಂದ್ರ ಮೂಬೇಕು.

ವಣಮುರಕ್ ವಣಮುರ ಚಾಚಬೇಕು ಅಂತಂದ್ರೆ. ಕದ ಹಾಕಬೇಕು: ಚಕ್ರಕಂಬ ಮುರಿಬೇಕು ಅಂದ್ರೆ ದೀಪ ನಿನಿಸಬೇಕು. (ನಂದಿಸಬೇಕು) ಆಗ ಬರಲಿಕ್ಕಡ್ಡಿಲ್ಲ ಅಂತ,

ಹಾಲ ಕರಿತಿರಬೇಕಿದ್ರೆ ಅಕಳದೊಂದು ಮೊಕ, ಕರಾದ್ ವಂದ್ ಮೊಕ. ಅವರದ್ ವಂದ್ ಮುಕ.

ಆರು ಕಣ್ಣಿನವಳೇ ಅಂದ್ರೆ, ಇವಳದೆರಡು, ಆಕಳಿನದು ಎರಡು, ಕರದ್ದು ಎರಡು ಕಣ್ಣು ಉಳ್ಳವಳೇ ಅಂತ.

ಹೀಗೇ ಹನ್ನೆರ್‍ಡ್ ತೋಳು. ತೊಡಿ ಆಯ್ತು.

೪. ಬೇಕಾದ ಬಹುಮಾನ

ಒಂದಾನೊಂದು ಊರಿನಲ್ಲಿ ಒಂದು ಪೇಟೆಯ ಕೇರಿವಳಗೆ ಸಿರಿವಂತರ ಒಂದು ಮನೆ ಅದೆ. ಅವರ ಮನೆಯಲ್ಲಿ ಹದಿನ್ಯಂಟುವರ್ಷ ಪ್ರಾಯದ ಹುಡುಗಿ ಮೂರುಗಂಟೆಯ ಸಮಯದಲ್ಲಿ ಹೊರಗೆ ಬಂದು ನಿಂತುಕೊಂಡಿದೊಳೆ.

ಆ ದಾರಿಯಲ್ಲಿ ಹೋಗುತ್ತಿರುವ ಒಬ್ಬ ಪ್ರಯಾಣಿಕನು ದಾರಿ ಹೋಗುವಾಗ ಆ ಹುಡುಗಿಯನ್ನು ವಿಚಾರ ಮಾಡಿದ್ದಾನೆ.

'ಈ ದಾರಿ ಯೆಲ್ಲಿಗ್ ಹೋಗ್ತದೆ' ಯಂತ.

ಆ ಹುಡುಗಿ, 'ನೀನು ಹೋಗುವಂತಾ ಊರಿಗೆ ಹೋಗ್ತದೆ'ಯೆಂದು ಹೇಳಿದೆ. ಮುಂದೆ ಹೋದವನು ವಾಪಾಸ್ ಹಿಂದಕ್ಕೆ ಬಂದು ವಿಚಾರ ಮಾಡಿವ.

'ನೀನು ಇಲ್ಲಿ ಹೊರಗೆ ಬಂದು ನಿಂತುಕೊಳ್ಳಲಿಕ್ಕೆ ಕಾರಣವೇನಮ್ಮ?' ಎಂದು ವಿಚಾರ ಮಾಡಿದ.

'ನಾನು ನಿಂತ ವಿಷಯವನ್ನು ನೀನು ಕೇಳುವ ಅವಶ್ಯಕತೆ ಇರುವದಿಲ್ಲ.

'ಹಾಗಾದ್ರೆ ನಿಲ್ಲಲು ಕಾರಣವೇನು?' ಅಂಬುದಾಗಿ ಮತ್ತೊಮ್ಮೆ ಕೇಳಿದ.

ಆನಂತರ, 'ನಾನು ನಿತ್ತ ವಿಷಯವನ್ನು ನಿನ್ನಲ್ಲಿ ಹೇಳುವದಾದರೆ, ಒಗಟುರೂಪದಲ್ಲಿ ಹೇಳುತೇನೆ. ಅದನ್ನು ಬಿಡಿಸಿ ನೀನು ಹೇಳುವದಾದರೆ ಹೇಳಬೇಕು. ಹೇಳಲಿಕ್ಕೆ ಸಾಧ್ಯವಾಗದಿದ್ದಲ್ಲಿ ನನ್ನ ಮನೆಯಲ್ಲಿ ಕೂಲಿ ಕೆಲ್ಸಕ್ಕೆ ನಿಲ್ಲಬೇಕು' ಆಗಬಹುದು ಯೆಂದ.

ಒಗಟು ಹೇಳಲು ಪ್ರಾರಂಭಿಸಿದ್ದಾಳೆ.

ಒಂದು ತಂದೆಗೆ ಯೆರಡು (ಮಂದಿ) ಮಕ್ಕಳು ಇದ್ದಾರೆ. ಇಬ್ಬರಲ್ಲಿ ಒಬ್ಬನನ್ನು ಬೇರೆ ಒಬ್ಬವ ಕೊಂದ. ಕೊಂದವರ ಹೆಂಡತಿಯನ್ನು ಒಬ್ಬ ನೋಡಲಿಕ್ಕೆ ಹೋಗಿದ್ದಾನೆ. ನೋಡಲಿಕ್ಕೆ ಹೋದವನ ತಂದೆಯು ಬರವನ್ನು ನೋಡುತ್ತಿದ್ದೇನೆ. ಆ ತಂದೆ ಯಾರು ಎಂಬ ವಿಷಯವನ್ನು ಸಂಪೂರ್ಣವಾಗಿ

ಹೇಳಿ ನೀನು ಹೋಗಬೇಕು. ಹೇಳಲಿಕ್ಕೆ ಸಾಧ್ಯವಾಗದಿದ್ದರೆ, ನನ್ನ ಮನೆಯಲ್ಲಿ ಕೂಲಿ ಕೆಲಸವನ್ನು ಮಾಡು.'

ಈ ಒಗಟಿನ ಕತೆಯನ್ನು ಕೇಳಿದವನು ಒಗಟು ಹೇಳಲಿಕ್ಕೆ ಆರಂಭಿಸಿದ್ದಾನೆ.

ಒಂದು ತಂದೆಗೆ ಎರಡು ಮಕ್ಕಳು ಎಂದರೆ, ವಾಲಿ-ಸುಗ್ರೀವ. ಆ ಇಬ್ಬರು ಮಕ್ಕಳಲ್ಲಿ ಒಬ್ಬನನ್ನು ಕೊಂದವನು ಶ್ರೀ ರಾಮಚಂದ್ರ. ರಾಮಚಂದ್ರನ ಹೆಂಡತಿ ಲಂಕೆಯಲ್ಲಿ ಇರುವ ಉದ್ದೇಶ ನೋಡಿಕೊಂಡು ಬರಲು ಹನುಮಂತನು ಹೋಗಿದ್ದಾನೆ,

ಅವನ ತಂದೆ ವಾಯು (ಗಾಳಿ) ಗೋಸ್ಕರವಾಗಿ ನೀನು ಇಲ್ಲಿ ನಿಂತಿದ್ದಿ ಎಂಬುದನ್ನು ಸಂಪೂರ್ಣವಾಗಿ ವಿಸ್ತರಿಸಿದ. ನಂತ್ರದಲ್ಲಿ ಅವನಿಗೆ ಬೇಕಾದ ಬಹುಮಾನವನ್ನು ಕೊಟ್ಟಳು.

೫. ಸತ್ತವ ಕೊಂದಾ; ಇದ್ದವ ತಿಂದಾ (ಬೇರೆ ಪಾಠ)

ಗಂಡ-ಹೆಂಡ್ತಿ ಇದ್ರು. ಅವರ ಮನಿಗೆ ಪ್ರೀತಿದ್ದವ ಒಂದ್ ಗಂಡ್ಸು ಬಂದ.

ಅದ್ರ ಗಂಡಗೆ ಸುದ್ದ್ಯಾಯ್ತು. ಗಂಡ್ನ ಕಣ್ ಹೊಟ್ ಹೋದ್ರೆ ದೇವ್ರಿಗೆ 'ಸುಟ್ಟವ್ನ ಪೂಜೆ ಮಾಡ್ ಕೊಡ್ತೆ' ಹೇಳ್ತು.

ಒಂದಿವ್ಸ. ರಾತ್ರೆ ಬಂದ ಅವ, ಪ್ರೀತಿದ್ದವ. ಇದ್ರ ಗಂಡನಿಗೆ ನಿದ್ರಿ ಬಂತು. ಪ್ರೀತಿದ್ದವ, ಅದು ಯೆರಡೂ ಜನ್ರೂ ಕೂಡಿ ಸುಟ್ಟವ್ ಸುಟ್ರು.

ಸುಟ್ ಮೇಲೆ ನೆವೆದ್ಯ ಮಾಡೂಕ್ ಹೋಯ್ತು - ಅದು ಒಳಗೆ. ಅವ ನಿದ್ರಿ ಬಂದು. ಪ್ರೀತಿದ್ದವ ಅಲ್ಲೇ ಸಾಕಾಗಿ ಮಲಗಿದ.

ಗಂಡನಿಗೆ ನಿದ್ರಿ ಬರಲಿಲ್ಲಾಗಿತ್ತು. ಯಚ್ಚರಗೆ ಇದ್ದ. ಅವ ಹೋದ. ಬಿಶಿ ಯೆಣ್ಣೆಯ ಸುಟ್ಟವ ಸುಟ್ಟ ಪ್ರೀತಿದ್ದವಗೆ ಹೊಯ್ದ. ಒಂದ್ ಸುಟ್ಟವ್ನ ತೆಗ್ದಿ ಬಾಯ್ಲಿಟ್ಟ ಹಾಗೇ ಹೋಗಿ ಮಲಗಿದ ಗಂಡ.

ಸತ್ತೋದ ಹೇಳಿ ಒಂದ್ ಮರಕ್ ಕಟ್ರು ಸಣ್ಣ ಬಳ್ಳಿಲಿ. ಒಂದ್ ಪೋಲಿ ಬಂದಿ. ಅದ್ರ. ಹೆಣದ ಕೆಳಗ್ ಕೂತ್ಕಂಡು, ನೋಡ್ತೆ ಒಳಿತು.

ಆ ಹೆಣ ಅಪ್ರ ಮೈಮೇಲೆ ಹುಸಿದ್ ಬಿದ್ ಬಿಟ್ತು.

ಆ ಮೊಲ ತಂದ್ಕಂಡಿ ಗಂಡ ಹೆಂಡ್ತಿ ಪದಾರ್ತ ಮಾಡ್ಕಂಡ್ ತಿಂದ್ರು.[೧]

ಗಂಡ ಹೇಳ್ದ ಹೆಂಡ್ತಿಗೆ, 'ಕತೆ ಮತಿಯಾಯ್ತು, ಸಂಸಾರ ಹೊದ್ದಾಯ್ತು. ಸತ್ತವ ಕೊಂದಾ. ಇದ್ದವ ತಿಂದಾ, ಪಂತ ಬಿಡ್ಸು' ಅಂದ.

ಗಂಡನ ತಂಗಿ ಅಗ್ತಿ ಮರುದಿನ ಬಂತು ಇಪ್ರ ಮನಿಗೆ.

ಅದು ಅಗ್ತಿ ಹತ್ರ 'ಸತ್ತವ ಕೊಂದ, ಇದ್ದವ್ ತಿಂದ ಅಂದ್ರೆ ಯೇನು' ಹೇಳ್ ಕೇಳ್ತು.

ಅಗ್ತಿ, ನಿನ್ಗೆ ಅವಗೆ ಪ್ರೀತಿತ್ತು. ಅವ್ನ (ಗಂಡ್ನ) ಕೊಲ್ಲು ಸಲವಾಗಿ ಗಂಡ್ನ ಕಷ್ ಹೊಟ್ ಹೋದ್ರೆ ಸುಟ್ಟವ್ನ ಪೂಜಿ ಮಾಡ್ ಕೊಡ್ತೆ ಹೇಳಿದ್ದೆ.

ನೀ ಸುಟ್ಟವ್ನ ನೇವೇದ್ದಿಗ್ ಹೋದಾಗ ಸುಟ್ಟವ್ನ ಯೆಣ್ಣಿ ಅವ್ನ ಮೊಕದ ಮೇಲ್ ನಿನ್ನ ಗಂಡ ಹೊಯ್ದ. ನೀ ಅವ್ನ ತಕಂಡ್ ಹೋಗಿ ಮರಕ್ ಕಟ್ದೆ. ಅವನ ಹೆಣ ಬಿದ್ ಮೊಲ ಸತ್ ಹೋಯ್ತು. ಆ ಮೊಲ ತಂದಿ, ನೀವ್ ಪದಾರ್ತ ಮಾಡ್ಕಂಡ್ ತಿಂದ್ರಿ ಅಂತು.

೬. ಪರರಾಜ್ಯದ ಪಕ್ಷಿ

'ಓ ಹೋ ವನವೇ, ವನದೊಳಗಿರುವ ಕೋಗಿಲೆಯೇ, ಪರರಾಜ್ಯದ ಪಕ್ಷಿ ಬಂದರೆ ನಿನ್ನ ರಾಜ್ಯದಲ್ಲಿ ಕುಳ್ವಷ್ಟು ಜಾಗ ಸಿಗಬಹುದೇ?'

'ಓಹೋ ರಾಜಿ, ಸಿಗಬಹುದು, ಸಿಗಬಹುದು. ಈ ಯುಗವಲ್ಲ ಇನ್ನೊಂದು ಯುಗಕ್ಕೆ'

ವಣಮರ ವಣಮರ ಚಾಟಿ ಆಡವಾಗ ಬೆಂದ ಮನಿ ಬಲಕಾಗಿ, ಬೇಯದ ಮನಿ ಯೆಡಕಾಗಿ, ಹೊಸ್ನ ಮನೆಗಾಗಿ ಬಂದರೆ ಸಿಗಬಹುದು.

ವಂದ್ ಜಾತಿ. ದೊರೆಸಲ್ಲಿ ಪ್ರೀತಿ ಬಿದ್ದವ್ಳು. ಪ್ರೀತಿ ಬಿದ್ದವ ಜಾತ್ರಿ ವೇಳಿಲಿ ಯಾರಿಗೂ ಗುತ್ ಆಗದ ಹಾಗೆ ಕೇಳ್ತ ಅದ್ರು ಹತ್ರ.

'ಅದು ಈ ಯುಗವಲ್ಲ. ಹಗಲಲ್ಲ; ರಾತ್ರಿಗೆ ಬರಬೇಕು. ವಣ ಮರ, ವಣ ಮರ ಚಾಟಿ ಆಡವಾಗ ಅಂದರೆ, ಯಲ್ಲರ ಮನಿ ಕದ ಹಾಕಬೇಕಾರೆ,

---

೧ ಮೊಲವನ್ನು ಈ ಪಾಠದಲ್ಲಿ ಗಂಡನೇ ತಂದಿರುವಂತಿದೆ. ಹೆಂಡತಿಗೆ ಅದು ಹೇಗೆ ಸತ್ತಿತು ಎಂದು ಗೊತ್ತಿರಲಿಲ್ಲ.

ಬೆಂದಮನಿ. ಹಂಚ್ನಮನಿ ಬಲಕಾಗಿ ಬೇಯುದ ಮನಿ, ಹುಲ್ಲಮನಿ ಯೆಡಕಾಗಿ ಹೊನ್ನ ಮನಿ ಅಂದ್ರೆ ತನ್ನ ಮನೆ ಅಂದಿ, ಬಂದ್ರೆ ಜಾಗ ಸಿಗಬಹುದು.'

ಇದನ್ನು ಬಿಡಿಸಿ ಹೇಳದಿದ್ದರೆ, ಒಂದು ಕಿಲೊ ಅವಲಕ್ಕಿ ಐದು ರೂಪಾಯಿ ಬಿಡಿಸಿ ಹೇಳಿದರೆ ಒಗಟು ಹೇಳಿದವಳು ಅದನ್ನು ಉತ್ತರ ಹೇಳಿದವರಿಗೆ ಕೊಡ ಬೇಕು ಎಂಬ ವಡ್ಡ.

೭. ಬೇತಾಳನ ಶಾಪ

ಘಟ್ಟದ ಕೆಳಗಿನ ಊರಿನ ಒಬ್ಬ ಭಟ್ಟರು ಘಟ್ಟದ ಮೇಲೆ ಸಂಭಾವನೆಗೆ ಬಂದಾಗ ತನ್ನ ಸಂಗಡ ಒಬ್ಬ ಬ್ರಾಹ್ಮಣನನ್ನು ಕರೆದುಕೊಂಡು ಬಂದಿದ್ದರು. ಈ ಮುದುಕನು ಬಹಳ ದಿನ ಸಂಭಾವನೆ ಮಾಡಿದನು.

ಮನೆಯಿಂದ ಮನೆಗೆ ಸಂಭಾವನೆ ಬೇಡುತ್ತ ತಿರುಗುವಾಗ ಆ ಬ್ರಾಹ್ಮ ಣನು ಮೊಟ್ಟೆ ಹೊರುತ್ತಿದ್ದನು.

ಸಂಭಾವನೆ ಮಾಡಿಕೊಂಡು ತಿರುಗಿ ಊರಿಗೆ ಹೊರಟರು. ಆಗ ಮೋ ಟರು ಇರಲಿಲ್ಲ. ಕಾಲ್ನಡಿಗೆಯಿಂದ ಪ್ರವಾಸ ಮಾಡಬೇಕಾಗಿತ್ತು. ಊರಿಗೆ ಹೋಗುವಾಗ ದಟ್ಟಡವಿಯಲ್ಲಿ ಆ ಆಳು 'ನಿಮ್ಮನ್ನು ಕೊಲ್ಲುತ್ತೇನೆ' ಎಂದನು.

'ನೀವು ಹಣ ಸಂಭಾವನೆ ಮಾಡಿದ್ದು ಬಹಳ ಉಂಟು. ಆ ಹಣವನ್ನು ನನಗೆ ಕೊಡಿ' ಅಂದನು.

'ಆದೀತು ನಾನು ಹಣ ಕೊಡುತ್ತೇನೆ. ಅದನ್ನು ತಕ್ಕೊಂಡು ಹೋಗಿ ನನ್ನ ಮಕ್ಕಳ ಹತ್ತಿರ ಕೊಡು' ಅಂದರು ಭಟ್ಟರು,

ಹಾಗೆಯೇ ಭಟ್ಟರು ಏನು ಚೀಟಿ ಬರೆದರೆಂದರೆ, ಅಪ್ರತಿಖ ಎಂಬ ಶಬ್ದ ಬರೆದು, ಚೀಟಿಯನ್ನು ಅವನ ತಾಬೆಯಲ್ಲಿ ಕೊಟ್ಟರು. ಅನಂತರ ಅವನು ಭಟ್ಟರನ್ನು ಕೊಂದನು. ವಸ್ತ್ರ-ಒಡವೆ ಹಣ ಎಲ್ಲ ತಕ್ಕೊಂಡು ಅವನು ಊರಿಗೆ ಹೊರಟನು.

ಆ ಬ್ರಾಹ್ಮಣನಿಗೆ ಓದು ಬರಹ ಬರುತ್ತಿರಲಿಲ್ಲ. ಊರಿಗೆ ಹೋಗಿ ಅವನು ಆ ಚೀಟಿಯನ್ನು ಭಟ್ಟರ ಮಕ್ಕಳ ಹತ್ತಿರ 'ನಿಮ್ಮ ಅಪ್ಪನಿಗೆ ಘಟ್ಟದ ಮೇಲೆ ಶೀಕಾಗಿತ್ತು, ದಾರಿಯ ಮೇಲೆ ಸತ್ತು ಹೋದನು' ಅಂತ ಹೇಳಿ ಆ ಚೀಟಿಯನ್ನು ಕೊಟ್ಟನು.

ಮಕ್ಕಳೆಲ್ಲರೂ ಆ ಚೀಟಿಯನ್ನು ಓದಿದರು. ಅವರಿಗೆ ಏನೂ ಅರ್ಥ ವಾಗಲಿಲ್ಲ. ನಮ್ಮೊಳಗೆ ಯಾರಿಗೂ ಇದರ ಅರ್ಥವಾಗಲಿಲ್ಲವಲ್ಲ. 'ಇದನ್ನು ನಮ್ಮಲ್ಲಿರುವ ಒಳ್ಳೇ ವಿದ್ವಾಂಸರಿಗೆ ತಕ್ಕೊಂಡು ಹೋಗಿ ಕೊಡುವಾ' ಅಂತ ಒಬ್ಬನು ಅಂದನು. ಹೀಗೆ ನಿರ್ಣಯ ಮಾಡಿ ಅದನ್ನು ವಿದ್ವಾಂಸರ ತಾಬೆ ಯಲ್ಲಿ ಕೊಟ್ಟರು. ವಿದ್ವಾಂಸರಿಗೂ ಇದರ ಅರ್ಥ ಮಾಡಲಾಗಲೇ ಇಲ್ಲ. ಅನಂತರ. ಈ ಚೀಟಿ ರಾಜದರ್ಬಾರದಲ್ಲಿ ಹೋಯಿತು.

ರಾಜನು ತನ್ನಲ್ಲಿರುವಂತಾ ವಿದ್ವಾಂಸರ ಹತ್ತರ ಇದನ್ನು ವಿಚಾರ ಕ್ಕಿಟ್ಟನು. ಅವರಿಗೂ ಈ ಶಬ್ದದ ಅರ್ಥವಾಗಲಿಲ್ಲ.

ಆ ದಿವಸ ಶುಕ್ರವಾರವಾಗಿತ್ತು. ರಾಜನು ಏನು ಡಂಗುರ ಹೊಡೆಸಿ ಬಿಟ್ಟನೆಂದರೆ, 'ಈ ಚೀಟಿಯನ್ನು ಅರ್ಥಮಾಡಲಿಕ್ಕೆ ನಮ್ಮ ರಾಜ್ಯದ ವಿದ್ವಾಂಸರಿಂದ ಆಗಲಿಲ್ಲವಷ್ಟೇ? ಹಾಗಾಗಿ ಇನ್ನು ಬರುವ ಶುಕ್ರವಾರ ದಿವ ಸದ ವರೆಗೆ ಅವಧಿ ಕೊಡುತ್ತೇನೆ. ಆ ಅವಧಿಯಲ್ಲೂ ಇದರ ಅರ್ಥವಾಗ ದಿದ್ದಲ್ಲಿ ನನ್ನ ರಾಜ್ಯದಲ್ಲಿರುವ ಎಲ್ಲ ಬ್ರಾಹ್ಮಣರ ತಲೆಗಳನ್ನು ಹೊಡೆಸಿ ಅವ ರನ್ನು ನಾಶಮಾಡುತ್ತೇನೆ. ಅರ್ಥಹೇಳಿದವರಿಗೆ ಅರ್ಧಲಕ್ಷ ರೂಪಾಯಿ ಬಹು ಮಾನ ಕೊಡುತ್ತೇನೆ ಅಂತ ಹೇಳಿ ಕಟ್ಟಾಜ್ಞೆ ಮಾಡಿಬಿಟ್ಟನು.

ಅದೇ ದಿವಸ ಅದೇ ಊರಲ್ಲಿ ಒಬ್ಬ ಹುಡುಗನು ಮನೆಯೊಳಗೆ ಏನೋ ತಂಟೆ ಮಾಡಿಕೊಂಡು ತಂದೆ ತಾಯಿ ಗದ್ದಲ ಹಾಕುವದರೊಳಗೆ ಅವನು ಸಿಟ್ಟುಬಂದು ಕಾಡಿಗೆ ನಡೆದು ಬಿಟ್ಟನು. ಹೀಗೆಯೇ ಅವನು ಅಡವಿಯೊಳಗೆ ಬಹಳಷ್ಟು ದೂರ ಹೋದನು.

ಹೋಗುತ್ತಿರುವಾಗ ಕತ್ತಲಾಗಿಬಿಟ್ಟಿತು. ಅಲ್ಲೊಂದು ದೊಡ್ಡ ಆಲದ ಮರವಿತ್ತು. ಆ ಆಲದ ಮರದ ಮೇಲೆ ಹತ್ತಿ ಕೂತುಕೊಂಡನು. ಅದು ಭೂತ ಗಣಗಳ ಜಾಗವಾಗಿತ್ತು. ಅದೇ ಶುಕ್ರವಾರ ದಿವಸ ಆ ಭೂತಗಣಗಳೆಲ್ಲಾ ಬಂದವು. ಅವರಲ್ಲಿ ಯಜಮಾನ ಭೂತ ಬೇತಾಳ.

ಇವರೆಲ್ಲಾ ಆ ಯಜಮಾನ ಭೂತನ ಹತ್ತರ ಏನು ಪ್ರಶ್ನೆ ಕೇಳಿದ ರೆಂದರೆ, 'ಎಲಾ ಬೇತಾಳ, ನಮಗೆ ನರಮನುಷ್ಯರ ಮಾಂಸ ಸಿಕ್ಕದೆ ಬಹಳ ದಿವಸವಾಯಿತು. ಯಾವಾಗ ಸಿಕ್ಕಬಹುದು?'

ಯಜಮಾನ ಭೂತ ಹೇಳಿತು, 'ಇದೇ ರಾಜ್ಯದಲ್ಲಿ ಇವತ್ತಿಗೆ ಎಂಟನೇ

ದಿವಸ ಶುಕ್ರವಾರ ಬಹಳಷ್ಟು ಜನ ಬ್ರಾಹ್ಮಣರ ನಾಶವಾಗುತ್ತದೆ. ಆಗ ನಿಮ ಗೆಲ್ಲ ಸಾಕಷ್ಟು ನರಮಾಂಸ ಸಿಕ್ಕುತ್ತದೆ.'

ಹೀಗೆ ಹೇಳಿದಾಗ ಉಳಿದ ಗಣಗಳು 'ಯಾಕಾಗಿ ಬ್ರಾಹ್ಮಣರ ನಾಶ ವಾಗುತ್ತದೆ?' ಅಂತ ಕೇಳಿದರು. ಆಗ ಶುಕ್ರವಾರ ರಾತ್ರಿಯೊಳಗೆ ಹೇಳುವುದು ಒಳ್ಳೆಯದಲ್ಲ' ಅಂತ ಬೇತಾಳ ಹೇಳಿದನು.

ಆದರೂ ಈ ಭೂತಗಣಗಳು ಕೇಳಲಿಲ್ಲ. 'ಹೇಳಲೇ ಬೇಕು' ಅಂತ ಪ್ರಶ್ನೆಯನ್ನಿಟ್ಟರು.

ಆಗ ಬೇತಾಳ ಹೇಳಿತು 'ಒಂದು ಚೀಟಿಯಲ್ಲಿ ಅಪ್ರಶಿಕ ಎಂದು ಬರೆದ ಶಬ್ದದ ಅರ್ಥವಾಗಲಿಲ್ಲ. ಅದರ ಅರ್ಥವು ಇಲ್ಲಿನ ಬ್ರಾಹ್ಮಣರಿಗೆ ಆಗುವ ದಿಲ್ಲ. ಆದ್ದರಿಂದ ರಾಜನು ಬ್ರಾಹ್ಮಣರ ತಲೆಗಳನ್ನು ಹೊಡೆಸುತ್ತಾನೆ' ಅಂತ ಹೇಳಿದನು.

'ಹಾಗಾದರೆ, ಅದರ ಅರ್ಥವೇನು?' ಅಂತ ಆ ಭೂತಗಣಗಳು ಪ್ರಶ್ನೆ ಯನ್ನಿಟ್ಟವು. 'ಅ ಅಂದರೆ ಅವನು. ಪ್ರ ಅಂದರೆ. ಪ್ರವಾಸದಿಂದ ಬರುವಾಗ ಶಿ ಅಂದರೆ. ಶಿರಸ್ಸನ್ನು ಕ ಅಂದರೆ, ಕಡಿದ ಅಂತ ಆ ಶಬ್ದದ ಅರ್ಥ.

ಆ ಶ್ಲೋಕದ ಅರ್ಥ ಕೇಳಿದ ಭೂತಗಣಗಳು ಅವರವರ ಸ್ಥಾನಕ್ಕೆ ಹೋಗಿ ಬಿಟ್ಟರು.

ಈ ಹುಡುಗ ಆಲದ ಮರದ ಮೇಲಿದ್ದನಲ್ಲಾ? ಇದನ್ನೆಲ್ಲಾ ಕೇಳಿ ಕೊಂಡನು. ಮುಂಜಾನೆ ಎದ್ದು ತನ್ನ ಊರಿಗೆ ಪರತ್ ಬಂದನು. ರಾಜನ ಬಳಿಯಲ್ಲಿ ಹೋಗಿ ಭೆಟ್ಟಿಯಾಗಿ ತಾನು ಕೇಳಿದ ವಿಚಾರದ ಅರ್ಥ ಹೇಳಿದನು.

ಆ ವಿಷಯ ಕೇಳಿ ರಾಜನ ಮನಸ್ಸಿನಲ್ಲಿ ಸಂತೋಷವಾಯಿತು. ಚೀಟಿ ಯನ್ನು ತಂದ ಘಟ್ಟದ ಮೇಲೆ ಆ ಭಟ್ಟರ ಸಂಗಡ ಹೋಗಿದ್ದ ಈ ಕೂಲಿ ಯಾಳು ಬ್ರಾಹ್ಮಣ ಇದ್ದನಲ್ಲಾ? ಅವನನ್ನು ಕರೆಸಿ ರಾಜನು ವಿಚಾರಿಸಿ ಕೇಳಿ ದಾಗ ಹೌದು ಅಂತ ಹೇಳ ಒಪ್ಪಿಕೊಂಡನು.

ರಾಜನು ಡಂಗುರ ಹೊಡೆಸಿದ ಪ್ರಕಾರದಲ್ಲಿ ಅದರ ಅರ್ಥ ಹೇಳಿದವನಿಗೆ ಅರ್ಧಲಕ್ಷ ರೂಪಾಯಿ ಬಹುಮಾನ ಕೊಡುತ್ತೇನೆ ಅಂತ ಹೇಳಿದಂತೆ ಆ ಹುಡುಗನಿಗೆ ಬಹುಮಾನ ಕೊಟ್ಟು ಆ ಆಳಿಗೆ ತಲೆ ಹೊಡೆವ ಶಿಕ್ಷೆ ಕೊಟ್ಟನು.

ಆ ಹುಡುಗನು ಮರು ಶುಕ್ರವಾರ ಮತ್ತೆ ಅದೇ ಆಲದ ಮರಕ್ಕೆ ಹೋದನು.

ಅಂದಿನ ಹಾಗೆಯೇ ಗಿಡ ಏರಿ ಕೂತಾಗ ಆ ಭೂತಗಣಗಳೆಲ್ಲ ಬಂದರು.

ಆಗ ಅವರು ಮತ್ತೆ ಪ್ರಶ್ನೆ ಕೇಳಿದರು. 'ಬೇತಾಳ, ಈ ರಾಜ್ಯದ ಬ್ರಾಹ್ಮಣರ ತಲೆಗಳನ್ನೆಲ್ಲ ಹೊಡೆದು ಅವರು ಪೂರ್ಣ ನಾಶವಾಗುತ್ತಾರೆ ಅಂತ ಹೇಳಿದ್ದೆ. ಇದರಂತೆ ಆಗಿಲ್ಲ. ಇದೇನು ಕಾರಣ' ಅಂತ ಕೇಳಿದಾಗ. ಆ ಬೇತಾಳಭೂತ ಏನು ಹೇಳಿತೆಂದರೆ, 'ಅಂದು ಶುಕ್ರವಾರ ನಾವು ಮಾತಾಡು ವಾಗ ಇದೇ ಮರದ ಮೇಲೆ ಒಬ್ಬ ಹುಡುಗನಿದ್ದನು. ಆ ಹುಡುಗನು ನಾನು ಹೇಳಿದ ಪ್ರಶ್ನೆಯ ಅರ್ಥವನ್ನು ಕೇಳಿಕೊಂಡು ಹೋಗಿ, ರಾಜನಿಗೆ ಹೇಳಿದ್ದ ರಿಂದ ಆ ಬ್ರಾಹ್ಮಣರ ತಲೆಗಳೆಲ್ಲಾ ಉಳಿದವು. ಅದೇ ಹುಡುಗನು ಈ ಹೊತ್ತು ಈ ಮರದ ಮೇಲೆಯೇ ಇದ್ದಾನೆ' ಅಂತ ಹೇಳಿದ ಕೂಡಲೇ ಆ ಹುಡುಗನಿಗೆ, 'ಭೂತಗಳು ತನ್ನನ್ನು ನೋಡಿದವು' ಅಂತ ಕಲ್ಪನೆಯಾಗಿ ಅವನು ಮನಸ್ಸಿನಲ್ಲಿ ಕಂಗೆಟ್ಟು ಕೈಬಿಟ್ಟು ಕೆಳಗೆ ಬಿದ್ದು ಬಿಟ್ಟನು.

ಆಗ ಆ ಬೇತಾಳ ಭೂತವು 'ಇವನನ್ನು ತಿಂದು ತೃಪ್ತಿ ಮಾಡಿಕೊಳ್ಳಿ' ಅಂತ ಹೇಳಿತು.

ಸಾಯುವಾಗ ಆ ಹುಡುಗನ ಮನಸ್ಸಿನಲ್ಲಿ 'ಅತಿ ಆಶೆ ಗತಿಗೇಡು' ಅಂತ ಭಾವನೆ ಹುಟ್ಟಿ ಅವನು ಮರಣ ಹೊಂದಿದನು.

೮. ಅಪ್ರಶಿಖ

ಒಬ್ಬ ಕುಸ್ತಿ ಕಲಿತನು, ಇನ್ನೊಬ್ಬ ಶಾಸ್ತ್ರ ಕಲಿತನು. ಶಾಸ್ತ್ರ ಕಲಿತವನು ಸನ್ಯಾಸಿಯಾದನು. ಕುಸ್ತಿ ಕಲಿತವನಿಗೆ ಶಾಸ್ತ್ರ ಕಲಿತವನ ಮೇಲೆ ಹೊಟ್ಟೆಕಿಚ್ಚು ಬಂತು. ಆವನನ್ನು ಕೊಲ್ಲಲು ದೂರ ಕರೆದುಕೊಂಡು ಹೋದನು. ದೂರ ಅರಣ್ಯದಲ್ಲಿ ಹೋಗಿ ಕಾಲಮೇಲೆ ತಲೆಯನ್ನಿಟ್ಟುಕೊಂಡು ನಿದ್ರೆಮಾಡ ಬೇಕೆಂಬಾಗ ಕೊಲ್ಲಲು ಕತ್ತಿ ಹಿಡಿದನು.

'ತಡೆ, ನಾನು ಸತ್ತಮೇಲೆ ನನ್ನ ಹನ್ನೊಂದನೇ ದಿನದ ಶ್ರಾದ್ಧ ಮಾಡು ವಾಗ ನೀನು ಹೋಗು, ಊಟದಲ್ಲಿ ನೀನೇ ಉಪ್ಪನ್ನು ಬಡಿಸು, ಆಗ

ಅಪ್ರಶಿಕ್ಯ (ಅಪ್ರಶಿಖ) ಎನ್ನು' ಎಂದನು. ಕುಸ್ತಿ ಕಲಿತವನು ಅವನ ತಲೆಯನ್ನು ಕೊಯ್ದನು.

(ಮುಂದೆ ಅವನು ಊರಿಗೆ ಹೋಗಿ ಸತ್ತವನ ೧೧ನೆ ದಿನದಲ್ಲಿ ಹೋಗಿದ್ದನು.)

ವಿದ್ಯೆ ಕಲಿತ ಶಾಸ್ತ್ರಿಗಳು ಊಟ ಮಾಡುತ್ತಿದ್ದರು. ಕುಸ್ತಿ ಕಲಿತವನು ಉಪ್ಪು ಬಡಿಸುತ್ತ, ಅಪ್ರಸಿಕ್ಯ (ಅಪ್ರಶಿಖ, ಅಪ್ರಶಿಖ) ಎಂದನು.

ಆಗ ಊಟಕ್ಕೆ ಕುಳಿತವರಲ್ಲಿ ಒಬ್ಬ ಪಂಡಿತನು, ಅನೇಕಂ ಬಹುದೂರಸ್ಯ ಎಂದನು.

ಎರಡನೆಯವನು ಪ್ರಾಣಸ್ತಸ್ಯ ವನಾಂತರೇ ಎಂದನು. ಮೂರನೆಯವನು ಶಿರಸೋ ಪಾದನಿದ್ರಾಣಿ ಎಂದನು. ನಾಲ್ಕನೆಯವನು ಖಡ್ಗೇನ ಗಳ ಸಶ್ಯತಿ ಎಂದನು. ಆಗ ಇವನು ಶಾಸ್ತ್ರಕಲಿತವನನ್ನು ಕೊಲೆ ಮಾಡಿದ ಎಂದು ನಿಕ್ಕಿಯಾಯಿತು. ಕುಸ್ತಿ ಕಲಿತ ಕೊಲೆಗಾರನಿಗೆ ಶಿಕ್ಷೆ ಮಾಡಿದರು.

ಕುಸ್ತಿ ಕಲಿತವನಿಗಿಂತ ಶಾಸ್ತ್ರ ಕಲಿತವ ಮೇಲು.

೯. ಸಮಸ್ಯೆಯ ಬಾಣ, ಕಲ್ಲಿನ ಗಾಣ

ಅರಸು ಅರಸು ಹೆಂಡ್ತಿ; ಅವನಿಗೆ ವಂದ್ ಹುಡುಗಿ ಹೆರಿಹೆಂಡ್ತಿಗೆ. ಹೆರಿಹೆಂಡ್ತಿ ಸತ್ ಹೋಯ್ತು. ಕಿರಿ ಹೆಂಡ್ತಿ ಲಗ್ನಾದ. ಅವಗೆ. ಹೆರಿಹೆಂಡ್ತಿ ಮಗಳ ಲಗ್ನ ಮಾಡ್ದ,

ಅವ ದಿನಾಃ ಯೇನು ಕೇಳ್‌ದ್ರೆ, ಶರಕಾರಕ್ ಹೋಗಿ (ಕಚೇರಿ) ದಿನಾಕೂ ಬರ್ವದು.

ವಂದ್ ಬಟ್ನ ದೇವರ ಪೂಜಿಗೆ ಇಟ್‌ಕಂಡ ಅರಸು.

ದೇವರೆ ಪೂಜಿ ಮಾಡಿ ಇರಬೇಕಾಗಿತ್ತೋ ಯೆಲ್ವೊ? ಆದ್ಕೆ ಅವಗೆ ಪ್ರೀತಿ ಬಿದ್ ಹೋಯ್ತು.

ಕಡಿಗೆ, ಅದು ಯೇನಂತು? 'ತನ್ನ ಗಂಡನ ಯಾವ ತರದಲ್ಲಿ ನೀನು ಮರ್ದನ ಮಾಡ್ವೆ? ಕೊಂತೆಗಿಬೇಕು. ನಾನು-ನೀನು ಉಳ್ಕಬಿಡ್ವ' ಅಂತು.

ಅವ, 'ನಾ ಹ್ಯಾಂಗೆ ಕೊಲ್ವೆ? ನನ್ನಿಂದೇನ್ ಸಾದ್ಯಿಲ್ಲ. ತೊಳ್ಳಿ ಸುತ್ತಿರ

ಗಿರೆ ನಾನು ಹನ್ನೆಯ್ಡ್ ವರ್ಸನ ಹುಡ್ಗನಾತೆ. ಬಲಕ್ಕೆ ತಿರಗೀರೆ ಯೆಪ್ಪತೇಳ್ ಹೆಡಿ ಮಾಶೇಶನಾಗಿ ಕೊಲ್ಲ್ಲುಕಡ್ಡಿಲ್ಲ' ಅಂದ.

'ನೀನು ಯೆಪ್ಪತೇಳ್ ಹೆಡಿ ಮಾಶೇಶನಾಗಿ ಕೊಲ್ಲು' ಅಂದ್ ಹೇಳಿ. ಅವನಕಲ್ (ಕೈಲ್) ಹೇಳ್ತು,

ಅವ ಯೇನ್ ಮಾಡ್ದ? ಯೆಪ್ಪತೇಳ್ ಹೆಡಿ ಮಾಶೇಶನಾಗಿ ಬಿದ್ಕಂಡ.

ಶರಕಾರಕೆ ಹೋಬೇಕಾರ್ 'ಹೆರಬಿದ್ದ್ ಹೋಬೇಕು' ಹೇಳ್ ಬಂದ.

ಇದು ಬಾಗಲ್‌ದಲ್ಲಿ ಮನಗನೆ. ಅವ ಹಿಂದೇ ಹೋಗಿ ವಳಗೋಗಿ, ಪೇಟತಂದಿ, ಅದ್ರ ಮೂರ್ ತುಂಡ್ ಮಾಡ್ದ.

ಹಳ್ಳ ಇತ್ತು,ತತ್‌ಗಡಿಗೆ. ಹಳ್ಳಕ್ ಬೀಸ್ ಹಾಕ್ ಬಿಟ್ಟ.

ಇದು ಬೆಳಕಿನ ಗಂಡೀಲಿ ಗಂಡ್ ಹೋಗ್‌ತ್ನೋ? ಹಾವು ಹೊಡೀತೋ? ನೋಡೂಕೆ ನಿತ್ತಿತ್ತು.

ಇವ ಮುಂದೆ ಹೋದ. 'ಅಬ್ಬ! ಇವ ಹೋದ' ಅಂದ್ ಹೇಳ್ತು. ಬಂತು ಹೆರ್ಗೆ. ಹಳ್ಳದ ಕಡರೂಕಿಲಿ ಮೂರ್ ತುಂಡಾಗ್ ಬಿದ್ದದೆ.

ವಕ್ಲ ಕೇರಿಗ್ ಹೋಯ್ತು. ಅವರಿಗೆ ಶಂಬಳ ಕೊಟ್ಟಿ, ಯೆಯ್ದ್ ಜನ ತರ್‌ಸ್ತು. ವಂದ್ ವರ (ಹ) ಕೊಟ್ಟ ತೆಗಿಸ್ತು. ವಂದ್ ವರ (ಹ) ಕೊಟ್ಟಿ ಸುಡಿಸ್ತು. ವಂದ್ ವರ (ಹ) ಕೊಟ್ಟಿ ಬೂದಿ ತೆಗಿಸ್ತು. ಚೊಕ್ ಮಾಡಿ, ಅವರ ಮನಿಗ್ ಅವರ್ ಹೋದ್ರು.

ಶಂಜಿನಾಗ್ ಗಂಡ್ ಬಂದ. ವೋ(ಊ)ಟ ಉಪಚಾರಾಯ್ತು. ಗಂಡ-ಹಿಂಡ್ರ ಮಲಗಬೇಕಾರೆ, ಮಂಚದ ಮೇನೆ ಕೂತದ್ದು, 'ತಾ ವಂದು ಅರ್ತ ಹೇಳ್ತೆ. ನೀವ ಬಿಡ್ಸಿ ಹಾಕಬೇಕು.' ಅಂತು.

ಅವ 'ಯೆಂತ ಅರ್ತ? ನೋಡ, ಹೇಳು' ಅಂದ.

'ವಂದ್ ವರ (ಹ) ಕೊಟ್ಟಿ ತೆಗಿಸಿದ್ದೆ, ವಂದ್ ವರ (ಹ) ಕೊಟ್ಟಿ ಸುಡಿಸಿದೆ, ವಂದ್ ವರ (ಹ) ಕೊಟ್ಟಿ ಬೂದಿ ತೆಗೆಸಿದ್ದೆ; ಅದ್ ಯೆಂತದು ಹೇಳಿ ನೀವ್ ಬಿಡ್ಸಿ ಹಾಕಬೇಕು. ಬಿಡ್ಸಿ ಹಾಕಿದಾಕ್ಷಣ, ನನ್ನ ಕಲ್ಲಗಾಣಕ್ಕೆ

ತತ್‌ಗಡಿ ಎಂದರೆ ಹೊಂದಿ ಇರುವ ಗಡಿ, ಮೇಲೆ, ಜಾಗ

ಹಾಕಬೇಕು ಇಲ್ಲದಿರೆ ನಿಮ್ಮ ಹಾಕಬೇಕು' ಅಂತು,

ನೋಡ್ದ, ನೋಡ್ದ, ನೋಡ್ದ, ಬೆಳಗಾಗು ತನ್ನ ನೋಡ್ಡ ಆಗೂದಿಲ್ಲ.

ನಾಕ್ ಜನ ಬೋಯಿಕಳ ಕರದಿ, ಅವರ ಕಲಿ, 'ತನ್ನ ಹುಡ್ಗಿ ಬಂದ ತಾಪಡತೋಪ ಕರಕ ಬರಬೇಕು' ಅಂದ್ ಹೇಳಿ, ಕಳಿಸಿದ ಅವರ.

ಅವರು ಕರಕಬಂದ್ರು, ವಂದ್ ತಾಸ್ ರಾತ್ರಿ ಆದೆ. ಮುಗಳ ಪೈಕಿಯೊರು 'ಬಗಿಲ್ ಅರಾಂತಕ ಹೋಗ್ವನಿ' ಹೇಳಿ ಕೂತ್ಕಂಡ್ರು, ಸಾಕಾಯ್ತು.

ಗಂಡಬೇರುಂಡ. ಹೆಣ್ಣುಬೇರುಂಡ; ಯೇನಂದ್ರು? 'ವಂದ್ ಕತಿ ನಾರು ಹೇಳಿ' ಅಂತು ಗಂಡನ ಕೂಡೆ.

'ಯೆಂತಾ ಕತೆ ಹೇಳಬೇಕು? ಹೆಂಡಿರ ಕೈಲಿ ಗಂಡಂದಿರು ಇಶ್ವಾಸದ ಮಾತು ಆಡೂಕಾಗ ಮತ್ತೆ'.

'ಅದ್ಯೇನು' ಕೇಳ್ತು. 'ಯೇನು ಕೇಳ್ತ್ಯೆ? ಮಳ್ಳಿ ನೀನು.'

ಊರಿಗ್ ದೊಡ್ಡ ಅರಸು. ಇನ್ನೂರ್ ಮುನ್ನೂರ್ ರೂಪಾಯಿನ ಪಗಾರದೆ. ಅಂತವ ಹೆರಿಹೆಂಡ್ತಿ ಶತ್ ಹೋಯ್ತು. ಕಿರಿ ಹೆಂಡ್ತಿನ್ ಲಗ್ನಾದ. ಹೆರಿ ಹಿಂಡ್ತಿಗ್ ಹುಡಗಿಯಾಗಿತ್ತು. ಅ (ದ)ರ ಲಗ್ನ ಮಾಡ್ ಕೊಟ್ಟರು.

ಯೇಗ ಕಿರಿ ಹೆಂಡ್ತಿ ವಬ್ಬಳೇ ಇರ್ತದೆ. ಅರೀದವಳು ಹೇಳಿ, ವಂದ್ ಬಟ್ನ ಇಟ್ಕ್ಯಂಡಿದ್ದ,

ಕಿರಿ ಹಿಂಡ್ತಿಗೆ, ಅವನಿಗೆ ವಿಶ್ವಾಸತನ ಬಿದ್ದಿ. 'ಯೇಗೆ, ನನ್ ಗಂಡ್ನ ಯಾವ ತರದಾಗೆ ಕೊಲ್ವೆ?' ಹೇಳಿ, ಬಟ್ನ ಕೈಲಿ ಕೇಳ್ತು.

ಬಟ್ಟ ಹೇಳ್ದ. 'ನಿನ್ನ್ ಮನಿ ತೊಳಚಿಲಿ ಎಡಕ್ಕೆ ತಿರಗೀರೆ, ಹನ್ನೆರಡ ವರ್ಸದ ಹುಡ್ಗನಾತೆ. ಬಲಕ್ಕೆ ತಿರಗೀರೆ ಯೆಪ್ಪತ್ತೇಳ್ ಹೆಡಿ ಮಾಶೇಶನಾತೆ' ಹೇಳ್ದ.

ಆ ಬಟ್ಟ ಯೆಪ್ಪತ್ತೇಳ್ ಹೆಡಿ ಮಾಶೇಶನಾಗಿ, ಬಾಗಿಲದಲ್ ಬಿದ್ಕಂಡ.

ಅದ್ರು ಹೊಡ್ದಿ, ಮೂರ್ ತುಂಡ್ ಮಾಡಿ, ಹಳ್ಳದ ಕಟಿರ್ಕಿಲಿ[೧] ಹೂತಾಕ್ ಹೋದ. ಅದು ನೋಡ್ತೆ ನಿತ್ತದ್ದ ಗಂಡ ಹೋದ ಹೇಳಿ, ಯೆಯ್ಡು ಜನ ಪಕ್ಲ ತಕ್‌ಬಂದಿ, ವಂದ್ ಪರ (ಪ) ಕೊಟ್ ತೆಗಿಸ್ತು; ವಂದ್

---

೧ ಕಟಿರ್ಕಿ ಅಂದರೆ, ಕಾಲುವೆ

ವರ (ಪ) ಕೊಟ್ಟಿ ಸುಡಿಸಿತು; ವಂದ್ ವರ (ಹ) ಕೊಟ್ಟಿ ಬೂದಿ ತೆಗಿಸಿತು.

ಆಟ್ ಮಾಡಿ, ಗಂಡನ ಕಲಿ, ಅರ್ತ ಹೇಳ್ಕಂಡಿ, 'ಅದರ ಅರ್ತ ಯೇನಾತು ಹೇಳಿ ಬಿಡಿಸ್ ಹಾಕಿ, ಆಗದಿರೆ, ನಿಮ್ಮ ಕಲ್ ಗಾಣಕ್ ಕೊಟ್ ಕೊಲ್‌ಬೇಕು. ಬಿಡಿಸಿರೆ, ನನ್ನ ಕಲ್ ಗಾಣಕ್ ಕೊಡಬೇಕು'. ಹೇಳಿ ಹೇಳದೆ.

ಆಗೆ, ಅರಸು ಕಲ್ ಗಾಣಕ್ ಹಾಕ್‌ತ್ರು. ಹೇಳ್ತು ಹಕ್ಕಿ. ಅದು ಅಲ್ಲಿ ಬಂದ್ ಬಿಟ್ತು ಹೇಳ್ದರಾಗೆ,

ಇನ್ನೊಂದ್ ಚಣಚಣ ಕಲ್ ಗಾಣಕ್ ಹಾಕ್‌ತ್ರು ಅಂಬೂರೊಳ್ಗೆ, 'ತನ್ನ ಕರಕಣಿ' ಅಂತು.

ಬಂತು ಹುಡಗಿ, ಹೋಗಿ ಇಳುಕೆ, ಒಳಗೆ ಹಾಲ ಕಾಸುಕೆ ಇಟ್ಟಿದ್ದ. ಬೆಕ್ಕು ದಾಟಿ ಬೀಳಿಸಿ ಹಾಕ್ತು ವಲಿ ಮೇಲಿಟ್ಟದ್ದು.

ಅದು ಹೊಡಚಾಕ್ತು ಅಂದ್ ಹೇಳಿ, ಇದು ಹೋಯ್ತು ಅಡಗಿ ಮನೆಗೆ.

ಇದ್ ಯೇನ್ ಮಾಡ್ತು? ಆ ಕ್ಷಣ ತೆಗದು, ಒರದದ್ದು ಅಪ್ಪನ ಕೈಲಿ ಕೊಟ್ತು. ಅಪ್ಪ ಕೂತಲ್ಲೆ ಅದ್ರು ವೋದ್‌ದ.

ವೋದ್ದವ, 'ಬಿಡ್ಸಿ ನನ್ ಕಯ್ಯ' ಅಂದ. 'ತಿರಗಿಸಿ' ಹೇಳಿತ್ತು ಅದು.

'ತಾ ಅರ್ತ ಬಿಡ್ಸಿ ಹಾಕ್ತೆ', ಅಂದ, ಅವಗ ಹೆಂಡ್ತಿ ಕಯ್ಯ ಕಟ್ ಹಾಕಿ ಅದ್ರು ತಿರಗಿಸಿದರು.

ಅವನ ಬಿಟ್ ಹಾಕ್‌ದ್ರು.

೧೦. ಮುತ್ತಿನ ನೈವೇದ್ಯ

ವಂದಲ್ಲಾ ವಂದೂರಲ್ಲಿ ವಂದ್ ಹೆಂಗ್ಸಿದ್ದಿತ್ತೂ. ಗಂಡ-ಹಿಂಡ್ತಿ ಇದ್ದಿದ್ದೊ. ಗಂಡ ಹೆಡ್ಡ, ಇದ್ ಬಾಳ ಬುದವಂತಾ.

ಮಕ್ಕೊ ಆಗಿದ್ವಿಲ್ಲೆ ಹೇಳಿ ತಾ ವಂದ್ ಹರಕೆ ಹೇಳ್ಕಂಡ್ತು.

ಲಟಕನ ಚಪ್ಪರ, ಚಿಟಗನ ಗೋಪುರ, ಮುತ್ತಿನ ನೈವೇದ್ಯ ಮಾಡ್ಸಿ ಕೊಡ್ತೆ ಹೇಳ್ ಹೇಳ್ಕಂಡ್‌ತು.

ಅದ್ಕೆ ವಂದ್ ವರ್ಶದ ವಳಗೆ ವಂದ್ ಮಾಣಿ ಹುಟ್ದ. ಹುಟ್ಟಂಬೇಯ ಮಾಣಿ ವೋಡಾಡುಲ್ ಹಣ್ಕ್ಕತಂಬೇಯ ಇದು ವಸಂದೂರಿಗ್ ಪತ್ರಿಕೆ ಹೊರಡಿಸ್ತು.

ತನ್ ಮಾಣ್ ಹುಟ್ಟಿರೆ ಹೇಳ್ ಲಟಕ್ಕನ ಚಪ್ಪರ, ಚಿಟಗನ ಗೋಪುರ, ಮುತ್ತಿನ ನೇವೇದ್ಯ ಹೇಳ್ ಹೇಳ್ಕಂಡಿದ್ದ. ಯೆಲ್ಲಾ ಬರೊ, ತಾನು ಹರಕೆ ವಪ್ಪಿಸ್ತೆ. ಯೆಲ್ಲಾ ಬರೊ ಹೇಳಿ ಕರ್‍ಯ ಕೊಟ್ತು.

ಸಾವ್ರಗಟ್ಲೆ ಜನ ವಟ್ಟಾದೊ. ಇಲ್ಲಿ ಚಪ್ಪರಿಲ್ಲೆ, ಚಾವದಿಲ್ಲೆ. ಯೆಂತವೂ ಇಲ್ಲೆ. ಅಡಿಗೆ ಸಾಲೂ ಇಲ್ಲೆ. ಆಸ್ರಿ ಸಂತೆಯೂ ಇಲ್ಲೆ. ಜನ ವಟಗೂಡಿದ್ರೊ.

ಇದು ಬಂತು, ಮಿಂದ್ಕಂಡು, ಮಾಣಿ ಕರಕಂಡು. ನಿತ್ಕಂಡ್‌ತು ದೇವರ ಮುಂದೆ, 'ಯೆಲ್ಲಾ ಜನ್ರೂ ಕೈಮುಕ್ಕಂಡ್ ನಿತ್ಕಳಿ' ಅಂತು.

'ಲಟಕ್ನ ಚಪ್ಪರ, ಚಿಟಕನ್ ಗೋಪುರ, ಮುತ್ತಿನ ನೈವೇದ್ಯ' ಹೇಳಿಕ್ಕಿ. ಚಿಟಕಿ ಹೊಡ್ಕಂಡ್ ಕೊಣತ್ತು. ಮಾಣಿಗೆ ಮುತ್ ಕೊಟ್ಕಂಡಿ, 'ತಾ ಇಷ್ಟೇಯ ಹರ್ಕೆ ಹೇಳ್ಕಂಡದ್ದು ಹೇಳಿ, ಕೊಣತ್ತು. ಯೆಲ್ಲಾ ಮನ್ಗ ಹೋದೊ.

೧೧. ಮೇಲೊಬ್ಬ ಕೂತಾನೆ ನಿನಗಾಗಿ

ವಂಪಲ್ಲಾ ವಂದೂರಲ್ಲಿ ವಂದ್ ಬಟ್ಟಿದ್ದ. ಇದ್ರೆ, ಅವನ ಹೆಂಡ್ತಿ ಅದ್ದ ಚಾಳಿ ಹೆಂಗಸು. ವಂದಿವ್ಸ ಅದ್ರುಗಂಡ ಕುಂತಿದ್ದಾಗೆ ಮಿಂಡಗಾರ ಬಂದ. ಆ ಗಂಡಂಗ್ ಕಂಡಿನಿಲ್ಲೆ ಅವ. ಇದು ಕಂಡ್ ಬಿಟ್ತು ಅವ್ನ. ಹಾಡ್ ಹೇಳ್ತ ಕುಂತ್‌ತು ಮನ್ಯಲ್ಲಿ.

ಸುತ್ತಿ ಸುತ್ತಿ ಬರುತಿದ್ದೆ ನನಗಾಗಿ
ಮೇಲೊಬ್ಬ ಕೂತಾನೆ ನಿನಗಾಗಿ
ಬಂದರೆ ಸಾಯುತ್ತೀ ನನಗಾಗಿ
ಅರ್ದ ಸತ್ತಿದ್ದೆ ನಿನಗಾಗಿ

ಗಂಡ ಅದ್ರ ಹಾಡೆಲ್ಲಾ ಕೇಳಿ. 'ಏ ರಂಡೆ, ಯಾರ ಮಿಂಡ್ನ ಇಟ್ಕಂಡಿ ಈ ಹಾಡ ಹೇಳ್ತೆ? ಈ ಹಾಡ್ನ ಅರ್ಥ ಏನು? ಹೇಳ್ ದಬಾಯ್ಸಿದ ಅದ್ಕೆ.

ಆವಾಗ್ ಅದ್ ಹೇಳ್ತು, 'ಅಯ್ಯೋ, ತನ್ನಂಥಾ ಪತಿವ್ರತೆ ನಿಮ್ಗ ಹುಡ್ಕಿದ್ರೆ ಇನ್ನೊಂದು ಸಿಗಲಾರ, ತಾ ಹೇಳ್ದ ಹಾಡ್ನ ಅರ್ಥಾನದ್ರೂ ಮಾಡಿ. ವಿಚಾರ ಮಾಡ್ಕಂಡ್ ಹೇಳಿ, ಸುಮ್ನೆ ಹೇಳಡಿ' ಹೇಳ್ ಹೇಳ್ತು.

'ಹೆಂಗಾದ್ರೆ ಯೇನು ಅದ್ರ ಅರ್ಥ ಹೇಳು; ಯಾರೋ ನಿನ್ ದೋಸ್ತಿ ಮನ್ಯ ಇಲ್ ಬರ್‍ತಿದ್ದ ಅದ್‌ಕಾಗ್ ನೀ ಹಾಗ್ ಹೇಳ್ತೆ, ಅರ್ಥವೇನು ಹೇಳು' ಅಂದ.

'ಅಷ್ಟೂ ತೆಳಿತಿಲ್ಯೋ ನಿಮಗೆ? ನೀವ್ ದಡ್ಡರು' ಹೇಳ್ ಗಂಡ್ನೆ ದಡ್ನ ಮಾಡ್ತು ಅದು.

'ಹಾಂಗಾದ್ರೆ ನೀ ಹೇಳ್ದ ಹಾಡ್ನ ಅರ್ತ ಸರಿಮಾಡ್ ಹೇಳು.'

'ಒಬ್ಬ ಜಲಗಾರ ಗರಿ ಹಚ್ಕಂಡು ಗಾಳ ಹಾಕು ಬಗ್ಗೆ ಕೆರೆದಂಡೆ ಮೇಲ್ ಕುಂತಿದ್ದ. ಆ ಗಾಳಕ್ ನಂಜುಳ್ಳೆ ಹುಳವ ಶಿಕ್ಸಿ ನೀರಲ್ ಬಿಟ್ಟಿದ್ದ ಅವ.

ಆ ನಂಜುಳ್ಳೆ ತಿಂಬು ಬಗ್ಗಾಗಿ ಆ ಕೆರೆಲಿದ್ದ ಮೀನ ಸುತ್ತಿ ಸುತ್ತಿ ಬತ್ತಾ ಇದ್ದೊ. ಅವಾಗಾ ನಂಜುಳ್ಳೆ ಹುಳ ಹೇಳ್ತು, ತನ್ ತಿಂಬು ಬಗ್ಗಾಗಿ ನೀನು ಸುತ್ತಿ ಸುಸ್ತ ಬತ್ತೆ ಇದ್ದೆ, ನಿನ್ ತಿನ್ವವ ಮೇಲ್ ಕೂಚ ಮತ್ತೊಬ್ಬವ.

ಬಂದರೆ ನನಗಾಗಿ, ತನ್ನ ತಿಂಬ್ಲ ಬಂದ್ರ ನೀ ಸಾಯ್ತೆ. ಅರ್ದ ಸತ್ತಿದ್ದೆ, ತಾ ನಿನ್ ಬಗ್ಗಾಗಿ ಅರ್ದ ಸತ್ತಂತೆ ಇದ್ದೆ. ನೀ ತಿಂದ್ರೆ ದೊಡ್‌ದಲ್ಲ. ಆದ್ರೆ ನಿನ್ ತಿಂಬವ ಬೇರೊಬ್ಬ ಮೇಲಿದ್ದ' ಹೇಳ್ತು.

ಆಗ ಗಂಡಗ್ ಸಮಾಧಾನ ಮಾಡ್ತು ಅದು.[೧]

---

೧ ಹೆಗಡೆ ಊರಿನ ಸೌ। ದೇವಿ ಮಾರು ಗೌಡ ಇವರು ಹೇಳಿದ ಒಂದು ಹಾಡಿನ ಪ್ರಾರಂಭದಲ್ಲಿ ಈ ಕಥೆಯು ಮಾತವ ಭಾಗ ಎಂಬಂತೆ ಕೆಲವು ಸಾಲು ಗಳು ಬರುತ್ತವೆ.

ಅಲ್ಲುತೆ ಬಲ್ಲುತೇ ಬರುಬೇಡ ರಾಗೀ ಕಲ್ಲೇ
ಮೇಲೊಬ್ಬ ಕೂತಿನೇ ನಿನಗಾಗೀ॥ ರಾಗೀ ಕಲ್ಲೇ
ನನಗಾಗೇ ಜೀವಾ ಕೊಡಬೇಡ ನೀನು ರಾಗಿಕಲ್ಲೇ
ನನ್ನೋರ್ ಹೋಗರೇ ಪರುದೇಸ
ನನ್ನೋರ್ ಹೋಗಿರು ಪರುದೇಸ ಪರೂಕಲ್ಲೇ
ನನಗಾಗಿ ಜೀವಾ ಕೊಡುಬೇಡಾ ॥ ನೀನೂ ರಾಗೀಕಲ್ಲೇ

ಮುಂದೆ ಆಕೆ ಪತಿವ್ರತೆಯೆಂದು ಹಾಡನ್ನು ಬೆಳೆಸಿರುವುದು ಮೂಲ ಕಥೆ ಯು ಆಶಯುವೆಂದು ಹೊಂದುವುದಿಲ್ಲ. ಬೇಕಾದಂತೆ ಹಾಡನ್ನು ಬೆಳೆಸುವ ಶಕ್ತಿ ಯುಳ್ಳ ನಿರೂಪಕಿ ಕಥೆಯಲ್ಲಿ ಮಾರ್ಪಾಟನ್ನು ಮಾಡಿದ್ದಾರೆ.

೧೨. ಮೂರು ಒಗಟುಗಳು

ಒಂದು ರಾಜಧಾನಿಯಲ್ಲಿ ಒಬ್ಬ ನರ್ತಕಿ, ಗಾಯಕಿ ಬಂದಿದ್ದರು. ಅವರನ್ನು ನೋಡಲು ಮೂವರು ಪಂಡಿತರು ಹೋಗಿದ್ದರು. ಬೆಳಗಾಗು ವರಿಗೆ ನೋಡಿ, ಬೆಳಗಾದ ಮೇಲೆ ಮರಳಿ ಬರುತ್ತಿದ್ದರು. ಅದನ್ನು ನೋಡಿ ಅವರು ಆನಂದದಿಂದ ವರ್ಣನೆ ಮಾಡುತ್ತಿದ್ದರು. ಏನೆಂದಳೆ:-

ಒಬ್ಬ ಪಂಡಿತನು 'ಬಾಲ ಸವಿಯಿತ್ತು' ಎಂದು ಹೇಳಿದನು, ಮತ್ತೊಬ್ಬ ಪಂಡಿತನು 'ತೊಗಲು ಬಹಳ ಸವಿಯಿದೆ' ಎಂದು ಹೇಳಿದನು, ಮೂರನೆಯ ಪಂಡಿತನು 'ಯೆರಡರಲ್ಲಿ ಮೂರನೆಯದು, ಕಾಲು, ಬಹಳ ಸವಿಯಿದೆ' ಅಂದು ಹೇಳಿದನು.

ಹೀಗೆ ಮಾತಾಡುತ್ತಿರುವಾಗಲೇ ಒಬ್ಬ ಕುರುಬನು ಕುರಿಯನ್ನು ಕಳೆದು ಕೊಂಡು. ನಿರಾರೆಪಟ್ಟು. ಹುಡುಕಿ ಬೇಸತ್ತಿದ್ದನು.

ಈ ಮಾತನ್ನು ಕೇಳಿದಾಕ್ಷಣವೇ "ನನ್ನ ಕುರಿಯನ್ನು ಇವರೇ ತಿಂದಿರುವರು" ಎಂದು ಗ್ರಹಿಸಿದನು.

ಕೂಡಲೇ ಅವರನ್ನು ಅನುಮಾನಿಸದೆ ಪೋಲೀಸ ಸ್ಟೇಶನ್ನಿಗೆ ಕರೆದು ಕೊಂಡು ಹೋದನು.

ರಾವಸಾಹೇಬರು 'ಯೇನು ಇಲ್ಲಿಗೆ ಏಕೆ ಕರೆತಂದೆ ?' ಎಂದು ಕೇಳಿದರು.

"ಸಾಹೇಬರೇ. ಇವರು ನನ್ನ ಕುರಿಯನ್ನು ತಿಂದು ಮಾತಾಡುತ್ತ ನಿಂತಿದ್ದರು. ಅದರಿಂದ ಇವರನ್ನು ಕರೆದುಕೊಂಡು ಬಂದೆ" ಎಂದು ಹೇಳಿದನು.

ಸಾಹೇಬರು ಅದನ್ನು ಕೇಳಿದೊಡನೆ ಅನುಮಾನಿಸದೆ ಕೋಲಿ (ಖೋಲಿ) ಯಲ್ಲಿ ಹಾಕಿ' ಎಂದು ಅಪ್ಪಣೆ ಕೊಟ್ಟರು,

ಮಂದನೆ ಪಂಡಿತನು ಆ ಮಾತನ್ನು ಕೇಳಿದೊಡನೆ "ಅಪರಾಧವಿಲ್ಲದೆ ಶಿಕ್ಷೆ ಕೊಡುವಂಥ ಸಾಹೇಬನು. ಇದಕ್ಕೇನು ಹೇಳಬೇಕು ?" ಎಂದು ಕೇಳಿದನು

ಎರಡನೆಯ ಪಂಡಿತನು 'ಅದೇ ಇದು' ಎಂದು ಹೇಳಿದನು.

"ಅದೇ ಇದು ಆದರೆ. ಅದೇ ಇಲ್ಲವಲ್ಲಾ!" ಎಂದು ಕೇಳಿದನು.

ಮಂದನೇ ಪಂಡಿತನು, 'ಒಂದಕ್ಕಿರುತ್ತದೆ. ಒಂದಕ್ಕಿರುವದಿಲ್ಲ' ಎಂದು ಹೇಳಿದನು.

ಆ ಮಾತನ್ನು ಕೇಳಿದೊಡನೆ ರಾವಸಾಹೇಬರು ಬೆರಗಾದರು.

'ಏನು ಪಂಡಿತರೇ? ನೀವು ಆಡಿದ ಮಾತು ಅರ್ಥವಾಗಲಿಲ್ಲ. ಅದು ಏನು ಹೇಳಿರಿ' ಅಂತ ಕೇಳಿದನು.

ಕುರುಬನು ಹೇಳುತ್ತಾನೆ, 'ರಾವಸಾಹೇಬರೇ. ನನ್ನ ಕುರಿಯನ್ನು ತಿಂದು, ಅದರ ಕಾಲು ಬಾಲಗಳ ವರ್ಣನೆಯನ್ನು ಮಾಡುತ್ತ ನಿಂತಿದ್ದರು. ಕುರಿಯನ್ನು ಕಳೆದುಕೊಂಡ ನಾನು ಇವರ ಮಾತನ್ನು ಕೇಳಿ, ಇವರೇ ತಿಂದಿರುವರೆಂದು ಗ್ರಹಿಸಿದೆನು.'

ಆ ಮಾತನ್ನು ಕೇಳಿ ರಾವಸಾಹೇಬರು, 'ಯಾವ ಮಾತನ್ನು ವರ್ಣನೆ ಮಾಡಿದಿರಿ? ಹೇಳಿ ಪಂಡಿತರೇ' ಎಂದು ಹೇಳಿದನು.

'ನಿನ್ನೆ ರಾಜಧಾನಿಯಲ್ಲಿ ನರ್ತಕಿ-ಗಾಯಕಿ ಬಂದಿದ್ದರು. ಅವರನ್ನು ನೋಡಲು, ಕೇಳಲು ನಾವು ಹೋಗಿದ್ದೆವು. ಅದನ್ನು ನೋಡಿ ಬರುವಾಗ, ನಾವು ಅದನ್ನು ವರ್ಣನೆ ಮಾಡುತ್ತ ಬರುತ್ತಿದ್ದೆವು.' ಇದು ಹೇಗೆಂದರೆ, ಬಾಲ ಸವಿಯಿತ್ತು ಎಂದು ಒಂದನೇ ಪಂಡಿತ ಹೇಳಿದನು.

ಎರಡನೇ ಪಂಡಿತನು 'ಅದಕ್ಕಿಂತಲೂ ತೊಗಲು ಬಹಳ ಸವಿಯಿತ್ತು' ಎಂದು ಹೇಳಿದನು.

ಮೂರನೆಯ ಪಂಡಿತನು 'ಎರಡಕ್ಕೂ ಸರಿಯಾಗಿ ಕಾಲು ಬಹಳ ಸವಿಯಿತ್ತು' ಎಂತ ಹೇಳಿದನು.

ರಾವಸಾಹೇಬರು, ಇದಕ್ಕೆ, 'ಇದರ ಅರ್ಥವೇನು? ಹೀಗೆ ಹೇಳಿದರೆ?' ಎಂದು ಕೇಳಿದರು.

ಒಂದನೆ ಪಂಡಿತನು ಹೇಳುತ್ತಾನೆ, ಬಾಲ ಬಹಳ ಸವಿಯಿತ್ತೆಂದು ಹೇಳಿದರೆ, ಗಾಯಕಿಯು ರಾಗ ಬಹಳ ಚಂದ ಹೇಳಿದಳು. ಬಾಲ ಎಂದರೆ ರಾಗ, ಅದಕಾರಣವೇ ಬಾಲ ಬಹಳ ಸವಿಯಿತ್ತು' ಎಂದು ಹೇಳಿದೆನು.

ಎರಡನೆ ಪಂಡಿತನು ಹೇಳುತ್ತಾನೆ, 'ತೊಗಲು ಬಹಳ ಸವಿಯಿತ್ತು ಎಂದು ಹೇಳಿದರೆ, ತಬಲೆಯನ್ನು ಬಹಳ ಚಲೋ ಬಾರಿಸುತ್ತಿದ್ದನು. ಆದ್ದರಿಂದ ತೊಗಲು ಬಹಳ ಸವಿಯಿತ್ತೆಂದು ಹೇಳಿದ್ದೆನು.'

ಮೂರನೆಯ ಪಂಡಿತನು, ಎರಡಕ್ಕೂ ಸರಿಯಾಗಿ ಕಾಲು ಬಹಳ ಸವಿಯಿತ್ತು ಎಂದರೆ, ನರ್ತಕಿಯು ಗೆಜ್ಜೆಯನ್ನು ಕಟ್ಟಿ, ಹೆಜ್ಜೆಯನ್ನು ಬಹಳ ಚೆಂದ ಹಾಕುತ್ತಿದ್ದಳು. ಆದ್ದರಿಂದ ಕಾಲು ಬಹಳ ಸವಿಯಿತ್ತು' ಎಂದು ಹೇಳಿದೆನು,

ಇಷ್ಟು ಮಾತು ಕೇಳಿ ಈ ಕುರುಬನು 'ನನ್ನ ಕುರಿ ತಿಂದಿರುವರೆಂದು ತಿಳಿದು, ಇಲ್ಲಿಗೆ ಕರೆತಂದಿರುವನು'

ರಾವಸಾಹೇಬರು ಈ ಮಾತನ್ನು ಕೇಳಿ, 'ಎಲೋ ಕುರುಬನೇ, ನಿನ್ನ ಕುರಿ ಇವರು ತಿಂದಿಲ್ಲ, ಸುಮ್ಮನೆ ಈ ಪಂಡಿತರ ಮೇಲೆ ಅಪವಾದವನ್ನು ಹೊರಸಿರುವೆಯಲ್ಲ. ಸುಮ್ಮನೆ ನಿನ್ನ ಮನೆಗೆ ಹೋಗು' ಎಂದು ಹೇಳಿದರು. ಆ ಕುರುಬನು ಆ ಮಾತನ್ನು ಕೇಳಿ, ಮನೆಗೆ ತೆರಳಿದನು.

ಇತ್ತ ರಾವಸಾಹೇಬರು, ಅದು ಹಾಗಿರಲಿ ಬಿಡಿ. ಇಲ್ಲಿಗೆ ಬಂದ ತ(ತ್) ಕ್ಷಣ, ನೀವು ಆಡಿದ ಪೂರ್ತಿ ಅರ್ತ (ರ್ಥ)ವೇನು?'

'ರಾವಸಾಹೇಬರೇ, ನಮ್ಮನ್ನು ಪರೀಕ್ಷಿಸದೆ ನೀವು ಶಿಕ್ಷೆಗೆ ಅಪ್ಪಣೆ ಮಾಡಿದ್ದಕ್ಕೆ ನಾನು ಅದೇ ಇದು' ಎಂದು ಹೇಳಿದೆನು.

ಅದಕ್ಕೆ ರಾವಸಾಹೇಬರು. 'ಅದೇ ಇದು' ಎಂದರೆ ಅದರ ಅರ್ಥವೇನು?'

'ಅದೇ ಇದು ಅಂದರೆ ಕೋಣ.'

ಎರಡನೆ ಪಂಡಿತನು, 'ಅದೇ ಇದು; ಆದರೆ, ಅದೇ ಇಲ್ಲವಲ್ಲ?' ಎಂದು ಕೇಳಿದೆ.

ಅದಕ್ಕೆ ರಾವಸಾಹೇಬರು "ಇದರ ಅರ್ಥವೇನು?" ಎಂದು ಕೇಳಿದರು.

'ಅದೇ ಇಲ್ಲ' ಎಂದರೆ, ಕೋಡು ಇಲ್ಲ ಎಂದು ನಾನು ಹೇಳಿದೆನು.

ಮೂರನೆಯ ಪಂಡಿತನು, 'ಒಂದಕ್ಕೆ ಇರುತ್ತದೆ, ಒಂದಕ್ಕೆ ಇರುವದಿಲ್ಲ' ಎಂದು ಹೇಳಿದೆ. ರಾವಸಾಹೇಬರು, ಇದರ ಅರ್ಥವೇನೆಂದು ಕೇಳಿದರು.

'ಆದರೆ ಮರಿಕೋಣಗೆ ಕೋಡಿರುವದಿಲ್ಲ. ದೊಡ್ಡ ಕೋಣಗೆ ಮಾತ್ರ ಕೋಡಿರುತ್ತದೆ. ನಮ್ಮ ಅಪರಾಧವನ್ನು ಕೇಳದೆ ನೀವು ಶಿಕ್ಷೆಗೆ ಅಪ್ಪಣೆ ಮಾಡಿದ್ದಕ್ಕೆ ನಾವು ಕೋಣ ಎಂದು ಹೇಳಿದ್ದು ನಿಜ.'

ಅದಕ್ಕೆ ರಾವಸಾಹೇಬರು ಒಪ್ಪಿ ಅವರನ್ನು ಅಲ್ಲಿಂದ ಹೋಗಲಿಕ್ಕೆ ಅಪ್ಪಣೆಯನ್ನಿತ್ತರು.

೧೩. ಕಸ್ತುರಿ ಬಾಣ

'ನಿಮ್ಮಪ್ಪ ಯೆಲ್ ಹೋಗ್ಯ?'

ನಮ್ಮಪ್ಪ ದೂಲು ದೂಲಪ್ಪಿ[೧] ಶುಡೂಕೆ ಯೆಲೀಗ್ ಹೋಗ್ಯ. ಯೆಲೀ ವ್ಯಾನೊಂದೂ ಕತ್ರುಬಾಣಾ.

ಕತ್ರುಬಾಣಾ ತಕಂಡಿ ಹಲ್ಲಕ್ ಹೋದ (ಗಾಲ ತಕಂಡಿ)

ಅದ್ರುಲೊಂದು ಬಾಲ ತಕಂಡಿ ಮಕ್ಕಿಗದ್ದೆಗ್ ಹೋದ. ಮಕ್ಕಿಗದ್ದೆ ಷಣ್ಮುಗೂ, ನೀ ತೀಡಬೇಡ ಬಾಲೆ ಹಿತ್ಲ ಬೊಮ್ಮನ್ನಾ ಚಾಯೂಕ್ ಬಿದ್ದನೆ. ಕನ್ನಿಪಿನ್ನಿ ರಂಡೆಗೋಲಿ ನೋಡುಕ್ ಬಿದ್ದರೆ.

೧೪. ಮೂರು ಕಾಲುಗಳ ಮನುಷ್ಯ

ಅಜ್ಜ ಮೂರ್ ಕಾಲ[೨] ತಕಂಡಿ ಹಣ್ಣ ಮರನಡ್ಗ್ ಹೋದ. ತಿನಬೇಕಂಬೂ ಆಸ್ತಿ. ವಂದ್ ಕಾಲ ತಗ್ದ್ ಹೊಡ್ದ ಮಾಯ್ನ ಮರಕೆ. ಅದು ಶಿಕ್ಕಾಕ ಬಿತ್ತು. ನನ್ನಂತವಳು ಬಂದಿ, ನಿತ್ಕಂಡಾಗೆ ನಾ ಕೇಲ್ದೆ 'ಅಜಾ, ಇಲ್ ಯೆಂತಾ ನಿತ್ಕಂಡಿದೇ?' ಕೇಲ್ದೆ.

'ಮೂರ್ ಕಾಲ್ ಬಂದಿತ್ತು. ವಂದ್ ಕಾಲು ಮೇನ್ ಹೋಯ್ತು ಗಾಲಿರಾಯ ಬರಬೇಕು, ನಾ ಮನೆಗ್ ಹೋಬೇಕು' ಅಂದಾ ಅಜ್ಜ.

ಗಾಲಿ ಬಂತು; ಬಿತ್ತು. ಅಜ್ಜ ಮೂರ್ನೆಕಾಲ ತಕಂಡ್ ಹೋತ.

---

೧ ಇಲ್ಲಿ ದೂಲು ಅಂದರೆ ಧೂಳು. ಅಕ್ಕಿಯ ಮೇಲಿನ ಹಿಟ್ಟು. ತೌಡು. ಇವರ ರೊಟ್ಟಿ ಮಾಡುವುದೇ ದೂಲಪ್ಪಿ. ಅಕ್ಕಿಧೂಳಿನ ರೊಟ್ಟಿ ಮಾಡಲು ಬೇಕಾದ ಎಲೆ ತರಲು (ತೋಟಕ್ಕೆ) ಹೋಗಿದ್ದಾನೆ ಎಂದೆನ್ನುತ್ತಾಳೆ.

ಇಲ್ಲಿ ಕತ್ರುಬಾಣ ಅಂದರೆ, ಕಸ್ತುರಿಬಾಣ; ಇದು ಗಾಳ. ಗಾಳದಿಂದ ಮೀನ ಹಿಡಿಯಲು ಹಳ್ಳಕ್ಕೆ ಹೋದನು. ಬಾಲ ಎಂದರೆ, ಗಾಳದ ಮೀನ.

ಚಾಯೂಕ್ ಅಂದರೆ ಸಾಯಲು.

೨ ಇಲ್ಲಿ ಅಜ್ಜನ ಮೂರನೆ ಕಾಲು ಅಂದರೆ ಆತ ಊರಿಕೊಂಡು ನಡೆವ ದೊಣ್ಣೆ. ಅದನ್ನೇ ತೆಗೆದು ಮಾವಿನ ಕಾಯನ್ನು ಕೆಡವಲು ಹೊಡೆದನು. ಅದು ಮರದ ಕೊಂಗೆಯ ನಡುವೆ ಸಿಕ್ಕು ಬಿತ್ತು. ಗಾಳಿ ಬಂದು ಅದನ್ನು ಕೆಡವಿತು.

೧೫. ಜಗಳ ತರಲಿಕ್ಕೆ ಹೋಗಿದ್ದಾಳೆ

ಇವರು ಹೇಳಿದ ಅಸಮಗ್ರಕಥೆ

ಒಬ್ಬನು ಒಬ್ಬ ಹುಡುಗಿಯ ಹತ್ತಿರ ಪ್ರಶ್ನೆ ಮಾಡುತ್ತಾನೆ.

'ಅಪ್ ಯೆಲ್ ಹೋಗನೆ?'

ಅವಳು ಹೇಳುತ್ತಾಳೆ 'ಬತ್ ಕುದುರೆ ಹಾಕಂಡಿ. ಸತ್ ಕುದುರೆ ತಕಂಡ್ ಹೋಗಿದಾನೆ.'

'ತಾಯ್ ಯೆಲ್ ಹೋಗಿದಾಳೆ?'

(ದುಗಳು)[1] ಇಲ್ಲದ್ ಊರಿಗ್ ಜಗಳ ತರಲಿಕ್ ಹೋಗಿದಾಳೆ (ಇಲ್ಲಿ ಜಗಳ ಅಂದರೆ, ಹೆಂಡ.)

ಅಣ್ ಯೆಲ್ ಹೋಗಿದಾನೆ?

ಈ ಒಗಟಿನ ವಾಕ್ಯವನ್ನು ನಿರೂಪಕ ಮರೆತಿದ್ದಾರೆ, ಆದರೆ. ಇವರ ಉತ್ತರ ಕುನ್ನಿ ತಕಂಡಿ ಹೋಗಿದಾನೆ ಎಂದು ಅವರು ತಿಳಿಸಿದ್ದರು.

೧೬. ಮರ ಕೊಯಿಲ್ ಅಂಬೂರಗೆ ಬರಬೇಕು

ಒಬ್ಬ ವಬ್ಬಳಿಗೆ ಪ್ರೀತಿ ಬಿದ್ಕಂಡಿದ್ದ. ಅವ 'ಬರಲೋ ಈ ದಿವಸ?' ಕೇಳ್ದ. ಅದ್ ಹೇಳ್ತು.

"ಬರೂದಿದ್ರೆ ಅಡ್ಡೆಲ್ಲ; ಇಪ್ಪತ್ತೈದ್ ತಲಿಬುರಡಿ, ಯೆಂಟ್ ಹಿಡಿಮುಡಿ, ಐದ್ ಮಲಿಮರಿ, ಕಟ್ಟಿಕಲ್ ವಲಗೂರಗೆ ಸಮುದ್ರ ತೆರ್ ಅಡ್ಡಾಡ್ವಾಗೆ ಕಡ್ದ ಮರ ಕೊಯ್ ಅಂಬೂರಗೆ ಬರಬೇಕು" ಹೇಳಿ ಹೇಳ್ತು.

ವಂದ್ ವರ್ಷ ರಾತ್ರಿ ಹಗಲು ಆಲೋಚ್ನೆ ಮಾಡಿ, ಪ್ರಶ್ನಿ ಉತ್ರ ಹುಡ್ಕ ಕಾಗಲಿಲ್ಲ. ದನ ಕಾವು ಪೋರ ಇಂತಿಂತಾದು ಹೇಳ್ದ ಮೇಲೆ ತಕಂಡ್ ಬಂದ.

ಇಪ್ಪತ್ತೈದ್ ಅಡಿಕೆ, ಯೆಂಟ್ ಯೆಲಿಕಟ್ಟು, ಐದ್ ರೂಪಾಯಿ, ದೀಪ ನೆನಿಸಿದ (ಆರಿಸಿದ ಕೂಡ್ಲೆ ನಂದ್ಸಿ ಮಲಗೂರಲ್ಲಿ, ಯಲ್ಲರೂ ಮಲ್ಗಿದ)

---

೧ ದುಗಳು ಇಲ್ಲದ ಊರಿಗೆ, ದೂಳು ಇಲ್ಲದ ಊರು ಅಂದರೆ ಹುಲ್ಲು ಬೆಳೆದ ಬೆಟ್ಟದ ಪ್ರದೇಶದ ಊರು.

ಹೊತ್ನಲ್ಲಿ ತೆರಿ ಶಬ್ದ ಕೇಳ್ತದೆ, ಕಡ್ಡ ಮರ ಕೊಯ್ ಅಂಬೂರಗೆ ಅಂದ್ರೆ ಕದ ಹಾಕ್ಬ ಕೊಡ್ಲೆ ಬರಬೇಕು ಹೇಳಿ ಅದ್ರು ಅರ್ತ.

೧೭. ದಾರಿ ತೋರಿಸು

"ಊರ ಮುಂದುಟ್ಟಾಳಿ ಉಟ್ಟದ್ ಬಿಚ್ಚಿಟ್ಟಾಳಿ
ಮೊಳಕಂಡಿಗ್ ಮೊಲ್ ಮೂಡ್‌ದಾಳಿ
ಬೆನ್ನಿಗ್ ಬೇರ್ ಅಸದಾಳಿ
ಮುಂದ್ಕ್ ಹೋಗುದಾರಿ ತೋರವ್ವಾ"
"ಆರ್ ಕಾಲವ್ನೇ ಹಾರ್ತ ಹೋಗ್ವವ್ನೇ
ಬೆನ್‌ಮೇನ್ ಮುಕ್ಕೆನವ್ನೇ
ನನ್ ಕೈಲ್ ಯಾಕ್ ಕೇಳ್‌ತ್ಯಪ್ಪ?
ಅಲ್ ಮುಂದೊಬ್ಬ ಹಶಿದ್ ಹತ್ಕಂಡಿ,
ಚಿಗ್ರು ಕೊಯ್ತ್ತ ಅವ್ನ ಕೈಲ್ ಕೇಳು" ಅಂತ.

ತಿರ್ಗಿ ಯೇಗವ ಮುಂದ್ ಹೋಗಿ, ಸಪ್ನ ಮರನ ಮೇನೆ ವಬ್ಬ ಸಪ್ ಕೊಯ್ತ್ತ. ಅವ್ನ ಕೈಲಿ, ನಾನು ಮಾರ್ಗ ಕೇಳ್ದೆ, ಅದು ನಿನ್ ಕೈಲ್ ಕೇಳು ಅಂತು. ನಿನ್ ಕೈಲ್ ಕೇಳ್ದೆ. ಯೇಗ್ ದಾರಿ ತೋರ್‌ಸ್ ಕೊಡು ಹೇಳ್ತ. ಆವಾಗೆ, "ನೀನು ಅದ್ರು, ಆ ಹೆಂಗ್ಸು ಕೇಳ್ಬೇಕಾರ್ ಕಾರಣ್ಯೇನು?

ಹೆಂಗ್ಸು ಯೇನ್ ಮಾಡ್‌ತಿತ್ತು? ಹೇಳಿ ಅವ ಕಾರಣ ಕೇಳ್ತ.
ಆವಾಗ, ತಿರ್ಗಿ ಇವ ಹೇಳ್ತ.
'ಊರ್ ಮುಂದ್ ಉಟ್ಟಾಳಿ ಹೇಳ್ದ್ರೆ ಯೇನು? ಕೇಳ್ದ. ಸೇರಿ.
'ಮೊಳ್ಕಂಡಿಗ್ ಮೊಲ್ ಮೂಡ್ದಾಳಿ ಹೇಳ್ದ್ರೆ ಯೇನು?'
'ಕೂತಕಂಡ್ ಮೀಯಬೇಕಾರೆ ಮೊಳಕಂಡಿಗ್ ಬಂತೋ ಯೆಲ್ವೊ?'
'ಬೆನ್ಗ್ ಬೇರ್ ಅಸದಾಳಿ ಅಂದ್ರೆ ಯೇನು?'
'ತಲಿ ಕೂದ್ಲು ಬಿಚ್‌ಕಂಡಿ ಬೆನ್‌ಮೇನ್ ಇಳಿತದ್ಯೆಲ್ಲಾ? ಅದು.'

'ಆದ್ ತಿರ್ಗಿ ಆರ್ ಕಾಲವನೇ ಅಂದ್ರೆ, ಕೊದ್ರಿ ಹತ್ ಹೋಗವವ, ಕೊದ್ರಿಗ್ ನಾಕ್ ಕಾಲು, ಇವಂದ್ ಯೆಯ್ಡು ಕಾಲು, ಹಾರ್ತ ಹೋಗ್ವವನೇ'

ಕೇಳ್ತು.

ಅದ್ರು ಬೆನ್ ಮೇನೆ ಇವ್ನ ಮುಕಳಿ ಇಟ್ಟವ

ನನ್ ಕೈಲ್ ಕೇಳಬೇಡ. ಮೀವ್ಕ್ ನಿತ್ತನೆ, ಹೆಂಗಸು ನಾನು. ಹುಣಗಲ ಹತ್ಕಂಡ್ ಚಿಗ್ರು ಕೊಯ್ತು ಅವ್ನ ಕೈಲ್ ಕೇಳು ಅಂತು.

ಇದರ ಒಂದು ಪಾಠ:

ಬಚ್ಚಲ ಕಲ್ಲವಳೇ ಬೆನ್ನಿಗ್ ಬೇರಿಳಿದವಳೇ

ಸಿರ್ಸಿಗೆ ಹೋಪ ದಾರಿ ಯಾವದು?

ಅವಳು ಉತ್ತರ ಕೊಡುತ್ತಾಳೆ:

"ಆರ್ ಕಾಲವ್ನೇ, ಜಬರ್ ಗೂದ್ಲವನೇ,

ವಣತ್ ಮೆಟ್ಟಿ ಹಶಿತ್ ಕೊಯ್ಯುವನ ಹತ್ರ ಕೇಳು" ಅಂತು,

ಅವಳು "ವಣತ್ ಮೆಟ್ಟಿ. ಅಂದರೆ, ಏಣಿಹತ್ತಿ, ಹಶಿತ್ ಕೊಯ್ಯುವನ ಹತ್ರ, ಅಂದರೆ, ಮೆಣಸಿನ ಕಾಯಿ ಕೊಯ್ಯುವವನನ್ನು ಕೇಳು ಅಂದಳು.

೧೮. ಐದು ಕಾಲ ಹುಡುಗಿ

ಹಳ್ಳದಂಚಿಗೆ ಐದ್ ಕಾಲ ಹುಡ್ಗಿ ಕೂತಿತ್ತು. ಆರ್ ಕಾಲ ಹುಡ್ಗ ಬತ್ತಾ, 'ನಿನ್ ಗಂಡ ಯೆಲ್ ಹೋಗ್ಯಾನೆ' ಕೇಳ್ದ.

ಅದು "ಹಳ್ಳದಾಚೆಗೆ ಮಾನ ಕಾವ್ಕ್ ಹೋಗ್ಯರೆ" ಅಂತು.

ಯೆಷ್ಟ್ ಹೊತ್ಗ್ ಬರ್‍ತ್ವಾ? ಕೇಳ್ದ.

"ಬಂದರೆ ಬರುದೆಲ್ಲ; ಬರದಿದ್ದರೆ ಬತ್ತಾ" ಅಂತು. 'ನಾ ಹೋತೆ ಹೇಳ್ತ' ಹುಡ್ಗ.

ಇದ್ರೆ ಹೋಗು; ಯಲ್‌ದಿರೆ ಉಳಿ' ಹೇಳ್ತು.

ಸ್ಟೂಲ್ ಮೇನ್ ಕೂತ್ಕ ಉಳಿತದೆ. ಮೂರ್ ಕಾಲು ಸ್ಟೂಲು, ಐದ್ ಕಾಲಾಯ್ತು. ಆರ್ ಕಾಲ್ನ ಹುಡ್ಗ ಅಂದ್ರೆ, ಕುದ್ರಿ ಮೇನ್ ಬತ್ತಾ. ಆರ್ ಕಾಲು. ಬಂದ್ರೆ ಬರುದೆಲ್ಲ, ಬರತ ಬಂದ್ರೆ ಬರುದೆಲ್ಲ. ಬರದಿರೆ ಅಂದ್ರೆ, ಬರತ ಬರದಿದ್ರೆ, ಇಳ್ತ ಇದ್ರೆ ಬರ್‍ತಾ, (ಹೊತ್) ಇದ್ರೆ ಉಳಿ, ಇಲದಿದ್ರೆ ಹೊತ್ತಿಲ್ಲದಿದ್ರೆ ಹೋಗು ಹೋತ (ಹೋಗುತ್ತಾನೆ).

೯೯. ಗಾಳಿಯನ್ನು ಮಾರಲು ಹೋಗಿದ್ದಾಳೆ

ಒಬ್ಬ ರಾಜ ತನಗೆ ಸಿಕ್ಕ ಕುರುಬನ ಹುಡುಗನ ಬಳಿ 'ನಿನ್ನ ತಂದೆ ಎಲ್ಲಿಗೆ ಹೋಗಿದ್ದಾನೆ' ಎಂದು ಕೇಳಿದಾಗ, ಆ ಹುಡುಗನು, 'ನನ್ನ ತಂದೆ ಕೊಂದು ಬದುಕಿಸುವ ಉದ್ಯೋಗಕ್ಕೆ ಹೋಗಿದ್ದಾನೆ' ಎಂದು ಹೇಳಿದನು.

"ತಾಯಿ ಎಲ್ಲಿಗೆ ಹೋಗಿದ್ದಾಳೆ?" ಎಂದು ಕೇಳಿದಾಗ ಆತ, "ನನ್ನ ತಾಯಿ ಗಾಳಿಯನ್ನು ಮಾರಲು ಹೋಗಿದ್ದಾಳೆ" ಎಂದನು.

ಅವನ ಮಾತು ರಾಜನಿಗೆ ತಿಳಿಯಲಿಲ್ಲ. ಅದರ ಅರ್ಥವೇನೆಂದು ಕೇಳಿದನು.

ಆಗ ಆ ಹುಡುಗ ಏನು ಹೇಳುತ್ತಾನೆ?

"ಕೊಂದು ಬದುಕಿಸುವ ಉದ್ಯೋಗವೆಂದರೆ, ಜಮೀನನ್ನು ಉಳುವ ಕೆಲಸ ಎಂದರ್ಥ. ಗಾಳಿಯನ್ನು ಮಾರಲು ಹೋಗಿದ್ದಾಳೆ ಎಂದರೆ, ಬೀಸಣಿಗೆಯನ್ನು ಮಾರಲು ಹೋಗಿದ್ದಾಳೆ" ಎಂದರ್ಥ.

೨೦. ಪಾತ್ರೆಯ ಬೆಲೆಯನ್ನು ಕೇಳುವುದಿಲ್ಲ

ವಬ್ಬವನ ಹಿಂಡ್ತಿ ಬಹಳ ಕರ್ಕಸರೆ ಮಾಡತಿತ್ತು. ದಿವಸಾನೂ ಕರ್ಕಸರೆ. ಅದನ್ನ ನೋಡ್ಕಂಡಿ ಅವಂಗೆ ಬಹಳ ವೈರಾಗ್ಯ ಹುಟ್ಟಿ, ಯೆಲ್ಲಾರೂ ದೇಶಾಂತರ ಹೋಗ್ತೋ ಹೇಳ್ತ ಹೊಂಟ.

ಬಹಳ ಊರ ತಿರುಗ್ತಾ ತಿರುಗ್ತಾ ಹೀಗೇ ಹೋದ. ವಂದೂರ್ನಲ್ಲಿ ಮಜ್ಜಾನ್ದ ಹೊತ್ನಲ್ಲಿ ವಂದ್ ಮನೆಗೆ ಹೋಗಿ, ಊಟ ಹಾಕಿ ಹೇಳ್ ಹೇಳ್ದ.

ಆಗ ಗಂಡಸು ಹೊರ್ಗ್ ಕೊತ್ಕಂಡಿದ್ದ, ಅವ 'ವಳ್ಕಳಿ' ಹೇಳ್ ಹೇಳ್ದ. 'ಅಡ್ಡಿಲ್ಲ' ಹೇಳ್ ಹೇಳ್ದ.

ಆಗ, ಆ ಯಜಮಾನನ ಹಿಂಡ್ತಿ ಹೊರಗ್ ಬಂದ್ಕಂಡು, 'ಈ ಮಧ್ಯಾಹ್ನದ ಹೊತ್ನಲ್ಲಿ ಅವರ ಹತ್ರ ವಳ್ಕಳಿ ಹೇಳ್ತ ನೀವ್ ಹೇಳ್ತ್ರಿ. ತಾ ಮಾಡಿದ್ ವಂದ್ ಪಳಿದ್ಯ; ವಂದ್ ಅನ್ನ. ಅವರಿಗೆ ಹಾಕಿದ್ರೆ (ಬಡಿಸಿದರೆ ಎಂದು ಅರ್ಥ) ಹೇಂಗ್ ಶೇರ್ಗು ಅದು?' ಜಗಳಕ್ ಶುರು ಮಾಡ್ತು.

ಹೇಗೋ ಹೇಗೋ ಸಮಾಧಾನ ಮಾಡಿ. ಆಬಟ್ಟನ ಊಟಕ್ ಇಟ್ಕಂಡೊ.

ಊಟದ ಸಮಯದಲ್ಲಿ ಹಿಂಡ್ತಿ ಜಗಳ ಮಾಡ್ತಾ, ಜಗಳ ಮಾಡ್ತಾ, ಆ ಪಳಿದ್ಯದ ಮಣ್ ಪಾತ್ರ ತಂದು ಗಂಡನ ತಲೆಮೇಲೆ ಜರ್‍ದ್ ಬಿಡ್ತು. ಪಾತ್ರೆ ವಡತ್ತು.

ಆಗ ಪಾತ್ರದ ಕಂಟ (ಕಂಠ) ಗಂಡನ ಕುತ್ಗೆಗೆ ಶಿಕ್ ಬಿತ್ತು. ಆಗ ಆ ಕಂಟ ಹಿಡ್ಕೊಂಡು. ಹಿಂಡ್ತಿ ಅವನ ಆಚೆ ಈಚೆ ಜಗ್ಗಾಡಿ, "ಇಷ್ಟೆಲ್ಲಾ ಆಯ್ತು; ಪಾತ್ರ ಹಾಳಾಯ್ತು. ಆ ಪಾತ್ರದ ದುಡ್ ಕೊಡಿ ಹೇಳಿ ಜಗಳಾಡ್ತು,

ಅದ ನೋಡ್ಕಂಡು, ಈ ಅತಿಥಿ ಬ್ರಾಹ್ಮಣಂಗೆ ಮನಸ್ನಲ್ಲಿ ಹೀಂಗನ್‌ಸ್ತು, ತನ್ನ ಹಿಂಡ್ತಿಯೂ ಹೀಗೇ ಜಗಳ ಮಾಡಿ ತಲೆಮೇಲೆ ಪಾತ್ರ ಜರೀತಿತ್ತು. ಆದ್ರೆ, ದುಡ್ ಕೊಡು ಹೇಳಿ, ಜಗಳಾಡ್ತಿಲ್ಲೆ. ಆದ್ರಿಂದ ತನ್ ಹಿಂಡ್ತಿಯೇ ಲೇಸು ಹೇಳಿ, ಈ ಶ್ಲೋಕ ಹೇಳ್ಕಂಡಿ ಬಂದ.

ಮಮ ಭಾರ್ಯಾ ಗುಣವತೀ
ಭಾಂಡಮೂಲ್ಯಂ ನ ಯಾಚತೇ

ನನ್ನ ಹೆಂಡತಿ ಗುಣವಂತಳು. ಪಾತ್ರೆಯ ಬೆಲೆಯನ್ನು ಕೊಡೆಂದು ಕೇಳುವದಿಲ್ಲ.

ಶ್ರೀ ಅನಂತ ಭಟ್ಟ ದೇವನೀಮಠ ಇವರು ಈ ಕಥೆಯನ್ನು ಹೇಳಿ, ಇದನ್ನು ಗುಡೇಅಂಗಡಿಯ ಭಂಡಾರಿ (ವಾದ್ಯದವರು) ನಾರಾಯಣ ಹೇಳುತ್ತಿದ್ದರು ಎಂದು ಹೇಳಿದರು. ಇದು ಒಂದು ಸಮಸ್ಯಾಪೂರಣದ ಕಥೆಯ ರೂಪದ ಒಗಟುಕಥೆ ಎಂದೆನ್ನಬಹುದು.

ಪರಿಶಿಷ್ಟ ೧

ಒಗಟಿನ ಹಾಡು (ಹಾಡಿನ ಹೆಸರು ಹೆಣ್ಣು ಗೆದ್ದಿದ್ದು)

ಏನ ಒಲಿದೆ ತಂಗೀ ಅರಿಯದೆ
ಕುಲಹೀನಗೆ ಲಲಿತಾಂಗೀ ॥ ಪಲ್ಲ ॥
ಮಗನ ಕೊಂದವನೀತನ । ತನ್ನತ್ತೆಯ
ಸ್ಮರಿಸಿ ಮೋಹಿಸಿದಾತನ ।
ಮಗನ ಮಗನ ಮೊಮ್ಮಗನ ಭೇದಿಸಿ ಮೊ (ಮ)
ಮ್ಮಗನಿಗೆ ಮಗನಾದ ॥
ಮಗನಿಗಳಿಯನಾದ ॥

ಮಾವನಲ್ಲಿರುತಿಹನ । ದೂರಾದಿ ತನ್ನ
ಭಾವನ ತೂರಿದಾತನ ॥
ನೋವು ಇಲ್ಲದೆ ತಾಯೆ । ಜೀವ ಗೋರಿದು ಘೋರ
ಹಾವಿನಲ್ಲೊರಗಿದ ಗೋವಳರಾಯನಾ ॥

ಅಳಿಯನಲ್ಲಿರುತಿಹನ । ತನ್ನತ್ತೆಯ
ಅಳುಪಿ ಮೋಹಿಸಿದಾತನ ॥
ಅಳಿಯನ ಮಾನವ ಕಳೆದು ತೋಷದಿ ಪರ
ಲಲನೆಯ ಕೂಡಿದ ಕುಲಗೇಡಿಯಾತನ ॥

ಶ್ರೀಮತಿ ಲಕ್ಷ್ಮಿ ರಾಮಕೃಷ್ಣ ಹೆಗಡೆ ಹುಳಗೋಳ (೬೨ ವರ್ಷ) ಇವರು ಶ್ರೀ ಎಸ್. ಡಿ. ಹೆಗಡೆ ಹುಳಗೋಳ ಇವರಿಗೆ ಹೇಳಿದ ಒಗಟು ಹಾಡು ಇದು. ಇದನ್ನು ಶ್ರೀ ಎಸ್. ಡಿ. ಹೆಗಡೆಯವರು ನನಗೆ ಕಳಿಸಿ ಇದರ ಅರ್ಥ ಹಾಡಿದವರಿಗೂ ತನಗೂ ತಿಳಿಯದೆಂದೂ ಸಾಗರದ ಯಾರಿಂದಲೋ ಅವರು ಕಲಿತಿದ್ದುದಾಗಿಯೂ ಬರೆದಿದ್ದರು. ಮೇಲ್ನೋಟಕ್ಕೆ ವಿಷ್ಣುವನ್ನು ಕುರಿತ ಒಗಟು ಎಂದೂ ತಿಳಿಸಿದ್ದರು. ಇಲ್ಲಿ ಗೋವಳರಾಯ ಎಂದುದರಿಂದ ಕೃಷ್ಣನಿಗೂ ಅನ್ವಯವಾಗುತ್ತದೆ.

ಕುಲಹೀನ ಅಂದರೆ, ಗೋವಳರಲ್ಲಿ ಬೆಳೆವ ಕೃಷ್ಣ ಎಂದಾಗಲಿ, ಅವನು ಯಾವ ಕುಲವೆಂದು ತಿಳಿಯದ ವಿಷ್ಣುವೆಂದಾಗಲಿ ತಿಳಿಯಬಹುದು.

ವಿಷ್ಣುವಿನ ಪತ್ನಿ ಭೂದೇವಿ. ಭೂದೇವಿಯ ಮಗ ನರಕಾಸುರ. ವಿಷ್ಣು ನರಕಮರ್ದನ. ಹೀಗೆ ಮಗನ ಕೊಂದಾತ ಕ್ಷೀರಸಾಗರಶಯನ. ಅದರಿಂದ ಯಾವ ಕ್ಷೀರಸಾಗರದಲ್ಲಿ ವಿಷ್ಣುಪತ್ನಿ ಲಕ್ಷ್ಮಿ ಒಗೆದಳೋ ಆ ಕ್ಷೀರಸಾಗರ ವಿಷ್ಣುವಿನ ಅತ್ತೆ. ಅಲ್ಲೇ ಶೇಷಶಾಯಿಯಾದುದರಿಂದ ಅತ್ತೆಯನ್ನು ಮೋಹಿಸಿದಂತಾಯಿತು. ಮಾವ ಶೇಷ. ಮಾವನ ಮನೆಯಲ್ಲೇ ಇರುವವನು.

ಕಷ್ಣಾವತಾರದಲ್ಲಿ ರುಕ್ಮಿಣಿಯ ಕೈ ಹಿಡಿದು, ಅವಳ ಅಣ್ಣ ರುಕ್ಮಿಯನ್ನು ಯುದ್ಧದಲ್ಲಿ ಸದೆಬಡಿದನು. ಭಾವನ ತೊರಿದಾತ. ವಿಷ್ಣುವಿನ ಮಗ ಬ್ರಹ್ಮ. ಅವನ ಮಗ ಮರೀಚಿ; ಅವನ ಮಗ ಕಶ್ಯಪ. ಕಶ್ಯಪನು ದಿತಿಯಲ್ಲಿ ಜನಿಸಿದ ಹಿರಣ್ಯಕಶಿಪುವನ್ನು ಛೇದಿಸಿದ ನರಸಿಂಹ ವಿಷ್ಣುವಿನ ನಾಲ್ಕನೆಯ ಅವತಾರ.

ಇಲ್ಲಿ ಮೊಮ್ಮಗನಿಗೆ ಮಗನಾದ ಎಂಬುದು ತಪ್ಪು ಪಾಠವೆಂದು ಕಾಣುತ್ತದೆ. ಕಶ್ಯಪನಿಗೆ ಅದಿತಿಯಲ್ಲಿ ಜನಿಸಿದ ವಾಮನ ವಿಷ್ಣುವಿನ ಐದನೇ ಅವತಾರ, ಅವನು ಬ್ರಹ್ಮನ ಮೊಮ್ಮಗನ ಮಗ. ಮರಿಮಗ ಎಂದು ಇಲ್ಲವೆ ಈ ಕಡೆ ರೂಢಿಯಲ್ಲಿ ಮಿಮ್ಮಗ ಎಂದೂ ಹೇಳುವ ಪ್ರಕಾರ ವಿಷ್ಣು ಮಿಮ್ಮಗ ಕಶ್ಯಪನಿಗೆ ಮಗನಾದನು.

ಕೃಷ್ಣನ ಕಥೆಯಲ್ಲಿಯಂತೆ ಕಶ್ಯಪನೇ ವಸುದೇವನಾಗಿ ಅವತರಿಸಿದನು. (ಈ ವಿಷಯವನ್ನು ವೇ। ಅನಂತ ಭಟ್ಟ ದೇವನೀಮಠ ತಿಳಿಸಿದರು.) ಅದರಿಂದ ವಿಷ್ಣು ಈ ರೀತಿಯಲ್ಲಿಯೂ ಮಿಮ್ಮಗನಿಗೆ ಮಗನಾದನು.

ಮಗ ಬ್ರಹ್ಮ. ಅವನು ಭೂಮಿಯನ್ನು ಸೃಷ್ಟಿಸಿ ಅದರ ತಂದೆಯಾದನು. ಭೂದೇವಿ ವಿಷ್ಣು ಪತ್ನಿ. ಅದರಿಂದ ವಿಷ್ಣು ಮಗನಿಗೆ ಅಳಿಯನಾದನು.

ನೋವಿಲ್ಲದೆ ಭೂಭಾರ ಹರಣ ಮಾಡಲು ಜೀವ ಹತ್ಯ ಮಾಡಿದನು ವಿಷ್ಣು.

ಇಲ್ಲಿ ಅಳಿಯನ ಮಾನವ ಕಳೆದ ಎಂದು ಇರುವಲ್ಲಿ ಅಳಿಯ ಬಹುಶಃ ಅಭಿಮನ್ಯು. ತಾಯ ಹೊಟ್ಟೆಯಲ್ಲಿ ಅಭಿಮನ್ಯು ಇದ್ದಾಗ ಕೃಷ್ಣ ಸುಭದ್ರೆಗೆ

ಮುಂದಿನ ಭಾರತ ಕಥೆ ಹೇಳುವಾಗ ಆಕೆ ನಿದ್ರಿಸಲು, ಒಳಗಿದ್ದ ಅಭಿಮನ್ಯು ಹೂಂಗುಟ್ಟಿದಂತೆಯೂ ಇದನ್ನು ತಿಳಿದ ಶ್ರೀಕೃಷ್ಣ ಕಥೆ ನಿಲ್ಲಿಸಿದಂತೆಯೂ ಇದೆ. ಚಕ್ರವ್ಯೂಹ ಭೇದನ ಮಾಡಿದರೂ ತಿರುಗಿ ಬರುವ ಕ್ರಮ ತಿಳಿಯದ ಕಾರಣ, ಅಭಿಮನ್ಯು ವಧೆಗೆ ಕಾರಣನಾಗಿ ಕೃಷ್ಣ ಅವನ ಮಾನ, ಪ್ರಾಣ ಕಳೆದ.

ಪರಿಶಿಷ್ಟ ೨

ಒಗಟಿನ ಪದ್ಯ

ವರ ಪದುಮಸಖಜಾತ ಮಿತ್ರನ
ಪರಮಭಕ್ತನ ತಾತ ತರಳನ
ಕಿರಿಯನಂ ಪೆತ್ತವನ ಸುತನಂ ಸೆರೆಯ ವಿಡಿದವನ ॥
ವೈರಿಯಣ್ಣನ ಪಡೆದ ಯುವತಿಯು
ಸ್ಮರಿಸಿ ಕರುಣದಿ ವರಿಸಿ ಮೆರೆದಿಹ
ಪರಮಕರುಣಾಶರಧಿ ನೀನೇ ತಂದೆ ಇಹಪರಕೆ ॥

ಶ್ರೀ ವೇ। ನಾಗೇಂದ್ರ ಭಟ್ಟ ಹಿತ್ಲಹಳ್ಳಿ ಇವರು ಇದನ್ನು ಸಂಗ್ರಾಹಕನಿಗೆ ಹೇಳಿದ್ದರು. ಅವರ ಕೈ। ತಂದೆ ಅನಂತ ಭಟ್ಟರು ಇದನ್ನು ರಚಿಸಿದ್ದರೆಂದು ಅವರ ಪತ್ರದಿಂದ ತಿಳಿಯುತ್ತದೆ. ಇದರ ಅರ್ಥವನ್ನು ಕೆಳಗೆ ತಿಳಿಸಲಾಗಿದೆ.

ಪದುಮ (ಪದ್ಮ, ಕಮಲ) ಸಖ ಸೂರ್ಯ. ಅವನ ಜಾತ ಅಂದರೆ ಮಗ ಸುಗ್ರೀವ. ಅವನ ಮಿತ್ರ ರಾಮ. ಅವನ ಪರಮ ಭಕ್ತ ಹನುಮಂತ. ಅವತ ತಾತ ವಾಯು. ಅವನ ತರಳ ಭೀಮ. ಅವನ ಕಿರಿಯ (ತಮ್ಮ) ಅರ್ಜುನ. ಅವನನ್ನು ಹೆತ್ತವ (ತಂದೆ) ಇಂದ್ರ. ಅವನ ಮಗ ಜಯಂತ.

ಇಂದ್ರನ ಸತಿಯಾದ ಶಚೀದೇವಿಯ ಸೌಂದರ್ಯಕ್ಕೆ ಮರುಳಾದ ಶೋಣಿತಾಕ್ಷ ಪುರದ ಶೂರಪದ್ಮರಾಜನು ತನ್ನ ಮಗ ಭಾನುಕೋಪನನ್ನು ಇಂದ್ರನ ಮೇಲೆ ಯುದ್ಧಕ್ಕೆ ಕಳಿಸಿ, ಶಚೀದೇವಿಯನ್ನು ವಶಮಾಡಿಕೊಳ್ಳಲು

ತಿಳಿಸಿದ್ದನು. ಯುದ್ಧದಲ್ಲಿ ಭಾನುಕೋಪನು ಇಂದ್ರನ ಮಗ ಜಯಂತನನ್ನು ಸೋಲಿಸಿ ಸೆರೆಹಿಡಿದನು. ಹೆದರಿದ ಇಂದ್ರನು ಶಚೀದೇವಿಯೊಡನೆ ಗುಹೆಯಲ್ಲಿ ಅಡಗಿಕೊಂಡನು.

ಜಯಂತನನ್ನು ಸೆರೆಹಿಡಿದ ಭಾನುಕೋಪನ ವೈರಿ ವೀರಭದ್ರ. (ಭಾನುಕೋಪನನ್ನು ಭೀಮನು ೧೪ ದಿನ ಯುದ್ಧ ಮಾಡಿ ಕೊಂದನು,) ಆದರಿಂದ ಇಲ್ಲಿ ಭಾನುಕೋಪನ ವೈರಿ ವೀರಭದ್ರ. ವೀರಭದ್ರನ ಅಣ್ಣ ಗಣಪತಿ. ಅವನನ್ನು ಪಡೆದ ಯುವತಿ ಪಾರ್ವತಿ. ಅವಳ ಸ್ಮರಿಸಿ ವರಿಸಿದವನು ಹರನು. ಇಲ್ಲಿ ಅವನನ್ನೇ ಪರಮಕರುಣಾಶರಧಿ ಎಂದು ಸ್ತುತಿಸಿದ್ದು. ಕಾಲಿದಾಸನ ಪ್ರಕಾರ ಪಾರ್ವತೀ ಪರಮೇಶ್ವರರು ಜಗತ್ತಿನ ಪಿತೃಗಳು. ಭಾಮಿನೀ ಷಟ್ಪದಿಯ ಈ ಒಗಟಿನ ಪದ್ಯವು ಮುದ್ದಣ್ಣ ರಚಿಸಿದ ಕುಮಾರವಿಜಯವೆಂಬ ಕಾವ್ಯದಲ್ಲಿರುವದಾಗಿ ಮೂರೂರಿರ ಶ್ರೀ ವೆಂಕಟ್ರಮಣ ಹೆಗಡೆ ಮುಳಸೆಮಕ್ಕಿ ಇವರುವೇ। ಅನಂತ ಭಟ್ಟ ದೇವನೀಮಠ ಇವರಿಗೆ ಹೇಳಿ, ಜಯಂತನನ್ನು ಸೆರೆಹಿಡಿದವನು ಭಾನುಕೋಪ ಎಂಬುದನ್ನು ತಿಳಿಸಿದರು. ಶ್ರೀ ವೆಂಕಟರಮಣ ಹೆಗಡೆ ತಾಳಮದ್ದಳೆಯ ಕಾರ್ಯಕ್ರಮದಲ್ಲಿನ ಶ್ರೇಷ್ಠ ಅರ್ಥಧಾರಿಗಳು.

ಇನ್ನೂ ಹೆಚ್ಚಿನ ವಿವರಗಳನ್ನು ಬಾಡದ ಶ್ರೇಷ್ಠ ಯಕ್ಷಗಾನ ಪಟುಗಳಾಗಿದ್ದ ಕೈ. ನಾರಾಯಣ ಹೆಗಡೆಯವರ ಮಗ ಶ್ರೀ ಶಿವರಾಮ ಹೆಗಡೆ ನೀಡಿದರು. ಶ್ರೀ ಶಿವರಾಮ ಹೆಗಡೆಯವರು ನಟರಾಗಿ. ಭಾಗವತರಾಗಿ ಹಲವರನ್ನು ಯಕ್ಷಗಾನ ನರ್ತನದಲ್ಲಿ ತರಬೇತಿಗೊಳಿಸಿದ ಕಲಾವಿದರು.

ಪರಿಶಿಷ್ಟ ೩

ಸಂಸ್ಕೃತ ಶ್ಲೋಕಗಳಲ್ಲಿ ಬಂದ ಕೆಲವು ಒಗಟುಗಳು

ವೃಕ್ಷಸ್ಯಾಗ್ರೇ ಫಲಂ ದೃಷ್ಟ್ವಾ ಫಲಾಗ್ರೇ ವೃಕ್ಷಮೇವ ಚ
ಪಕಾರಾದಿ ಲಕಾರಾಂತು ಯೋ ಜಾನಾತಿ ಸ ಪಂಡಿತಃ ॥

ಮರದ ಮೇಲೆ ಹಣ್ಣನ್ನು ನೋಡಿ, ಹಣ್ಣಿನ ಮೇಲೆ ಮರವನ್ನು ನೋಡಿ, ಪ್ರಾರಂಭದಲ್ಲಿ ಪಕಾರವನ್ನೂ ಕೊನೆಗೆ ಲಕಾರವನ್ನೂ ಹೊಂದಿದ್ದನ್ನು ಯಾರು ತಿಳಿಯುತ್ತಾನೋ ಅವನು ಪಂಡಿತನು.

ಪಾಠಾಂತರದಲ್ಲಿ ಪ್ರಾರಂಭದಲ್ಲಿ ಅಕಾರ. ಕೊನೆಗೆ ಸಕಾರ ಇರುವ ಫಲವೆಂದಿದೆ.

ಏಕ ನಗರೇ ಶತದ್ವಾರೇ, ನಗರೇ ಕುಂಡಲಾಕೃತಿಃ ।
ಅಹೋ ರಾಜ ಮಹಾಶ್ಚರ್ಯಂ ಕಾಕಾಕಸ್ಯ ತು ಪಟ್ಟನಾತ್

ಇದನ್ನು ವೇ। ಅನಂತ ಭಟ್ಟ ದೇವನೀಮಠ ಅವರೂ ಶ್ರೀ ಸುಬ್ರಾಯ ಭಾಗವತ ವೈದ್ಯರೂ ಹೇಳಿದ್ದಾರೆ. ಶ್ರೀ ಸುಬ್ರಾಯ ಭಾಗವತರು ಕಾಕಾ ಕಚ್ಚಿತು ಎಂದು ಹೇಳಿದ್ದಾರೆ.

ಒಂದು ಪಟ್ಟಣದಲ್ಲಿ ನೂರು ಛಿದ್ರ ಉಳ್ಳದಾಗಿ, ಕುಂಡಲದ ಆಕಾರ ಹೊಂದಿರುವುದನ್ನು ಯಾರದೋ ಪಟ್ಟಣದಿಂದ ಹೆಣ್ಣು ಕಾಗೆ (ಕಚ್ಚಿಕೊಂಡು ಹೋದುದು) ಆಹೋ ! ಮಹಾಶ್ಚರ್ಯಕಾರಿಯಾಗಿದೆ.೧

ಕೃಷ್ಣಮುಖೀ ನ ತು ಮಾರ್ಜಾರೀ ದ್ವೇ ಜಿಹ್ವೇ ನ ತು ಸರ್ಪಿಣೀ
ಪಂಚಪತೀ ನ ತು ಪಾಂಚಾಲೀ ಯೋ ಜಾನಾತಿ ಸ ಪಂಡಿತಃ ॥

ಕಪ್ಪುಮುಖವುಳ್ಳವಳು; ಆದರೆ, ಹೆಣ್ಣು ಬೆಕ್ಕಲ್ಲ; ಎರಡು ನಾಲಿಗೆಗಳಿರುವವಳು; ಆದರೆ, ಹೆಣ್ಣು ಸರ್ಪವಲ್ಲ; ಐದು ಗಂಡಂದಿರುಳ್ಳವಳು; ಆದರೆ, ದ್ರೌಪದಿಯಲ್ಲ; ಇದನ್ನು೨ ಯಾರು ತಿಳಿಯುತ್ತಾನೋ ಅವನೇ ಪಂಡಿತನು.

೩ಅಸ್ಥಿ ನಾಸ್ತಿ ಶಿರೋ ನಾಸ್ತಿ ದ್ವೌ ಭುಜೌ ಕರವರ್ಜಿತಃ ।
ಸೀತಾಹರಣ ಸಾಮರ್ಥ್ಯೇ ನ ರಾಮೋ ನ ಚ ರಾವಣಃ ॥

ಇಲ್ಲಿ ಪ ಕಾರಾದಿ – ಲ ಕಾರಾಂತ ಅಂದರೆ ಪರಂಬಾಳೆ ಗಿಡ. ಇಲ್ಲಿನ ಪಾಠಾಂತರ ಇದನ್ನೇ ಅನಾನಸ ಎಂದು ಸೂಚಿಸಿದೆ.

೧ ದೋಸೆ.

೨ ಲೆಕ್ಕಣಿಕೆ. ಮಸಿಯಿಂದಾಗಿ ಕಪ್ಪು ಮುಖ; ತುದಿ ಸೀಳಿದುದರಿಂದ ಎರಡು ನಾಲಿಗೆ. ಐದು ಬೆರಳುಗಳಿಂದ ಹಿಡಿವುದರಿಂದ ಐವರು ಗಂಡಂದಿರು ಇದ್ದಂತಾಯಿತು.

೩ ಅಂಗಿ. ಇಲ್ಲಿ ಸೀತಾ ಹರಣ ಎಂದರೆ, ಶೀತವನ್ನು ಹೋಗಲಾಡಿಸುವ ಸಾಮರ್ಥ್ಯ.

ಎಲುಬು ಮತ್ತು ಶಿರಗಳಿಲ್ಲ; ಎರಡು ಭುಜಗಳಿವೆ. ಕೈಗಳಿಲ್ಲ. ಸೀತಾಪಹರಣ ಸಾಮರ್ಥ್ಯವಿದ್ದರೂ ರಾಮ-ರಾವಣ ಇಬ್ಬರೂ ಅಲ್ಲ.

[೧]ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಶವಕರ್ಪಟಂ ।
ಕಾಕವಿಷ್ಟಾ ಸಮುತ್ಪನ್ನಃ ಪಂಚೈತೇತಿ ಪವಿತ್ರಕಾಃ ॥

(ಕರುವಿನ) ಎಂಜಲು, ಶಿವನು ಸೂಡಿ ಹಳೆಯದಾದ ಹೂವು; (ಜೇನು ಹುಳ) ಕಾರಿದ್ದು. ಹೆಣದ ಬಟ್ಟೆ. (ಇಲ್ಲಿ ಹೆಣ ರೇಶ್ಮೆಹುಳ; ರೇಶ್ಮೆಗುಳಗಳ ತತ್ತಿಗಳನ್ನು ಬೇಯಿಸಿಯೋ - ಕೊಂದೇ ರೇಶ್ಮೆಯ ಎಳೆಗಳನ್ನು ತೆಗೆದು ಬಟ್ಟೆ ಮಾಡುತ್ತಾರೆ.) ಕಾಗೆಯು ಹಣ್ಣು ತಿಂದು, ಮಲದಲ್ಲಿ ಅದರ ಬೀಜಗಳು ಬಂದು, ಅದರಿಂದ ಮರವಾಗಿ ಹುಟ್ಟಿದ್ದು ಇವೈದೂ ಪವಿತ್ರವಾದವು.

---

೧ (ಆಕಳ) ಹಾಲು; ಗಂಗಾನದಿ; ಜೇನುತುಪ್ಪ; ರೇಶ್ಮೆ ವಸ್ತ್ರ; ಅಶ್ವತ್ಥ ವೃಕ್ಷ. ಈ ಶ್ಲೋಕ ವೇ। ಅನಂತ ಭಟ್ಟರು ದೇವನೀಮತ ಹೇಳಿದ್ದು.

ಕನ್ನಡ ಸೋಬಾನೆ ಹಾಡು ಹೇಳಿದವರು

ಕುಮಟಾ ತಾಲೂಕ

ಸೌ। ಪಾರ್ವತಿ ಜನಾರ್ಧನ ಭಟ್ಟ, ಕೋಟೆಗುಡ್ಡೆ — ೭–೧–೬೯
ಸೌ। ತಿಮ್ಮಕ್ಕ ಕೃಷ್ಣ ಹೆಗಡೆ ಕೊಜಳ್ಳಿ — ೨೮–೨–೭೭/೧–೩–೭೭
ಕೈ. ಸೌ। ಸರಸ್ವತಿ ಗಣೇಶ ಹೆಗಡೆ ಮೂರೂರು — ೩–೫–೭೨
ಸೌ। ಮಂಜಿ ಶಿವರಾಮ ಭಟ್ಟ ಮೂರೂರು — ೩–೫–೭೨
ಕೈ. ಸೌ। ಲಕ್ಷ್ಮಿ ಕೋಂ ಲಕ್ಷ್ಮಿನಾರಾಯಣ ಹೆಗಡೆ ಹುಳಸೆಮಕ್ಕಿ
೫-೧೧-೬೯/೫–೧೧–೭೧
ಕೈ. ಶೇಷಮ್ಮ ಹಲಸಮಾವು — ೪–೧–೬೯
ಕೈ. ಭಾಗೀರಥಿ ಮಂಜ ಹೆಗಡೆ ಹಲಸಮಾವು — ೪–೧–೭೯
ಕೈ. ಮಹಾದೇವಿ ರಾಮ ಹೆಗಡೆ ಹಲ್ಸಮಾವು
೧೩-೧-೬೯/೧೮-೧-೬೯/೨೪-೧-೭೦
ಕೈ. ಸರಸ್ವತಿ ಸುಬ್ಬಾ ಭಟ್ಟ ಮದ್ಗುಣಿ ೮೦ ವರ್ಷ — ೧೫–೫–೭೩
ಪಾರ್ವತಿ ಗಣೇಶ ಶಾನಭಾಗ ವಾಲಗಳ್ಳಿ — ೧೯–೧–೬೯
ಕೈ, ಸರಸ್ವತಿ ನಾರಾಯಣ ಭಟ್ಟ ಹೊಲನಗದ್ದೆ
ಮಹಾದೇವಿ ತಮ್ಮಣ್ಣ ವೈದ್ಯ ತಲಗೋಡ
ದಿ. ಭಾಗೀರಥಿ ರಾಮಚಂದ್ರ ಆಚಾರಿ ಆನೆಗುಂದಿ
ದಿ. ಶೇಷಿ ವೆಂಕಪ್ಪ ಗುನಗ ಹಳಕಾರ — ೯–೨–೬೯
ಮಹಾದೇವಿ ಜನಾರ್ಧನ ಜೈನಬೋಗಾರ — ೩೧–೬–೭೦

ಹೊನ್ನಾವರ ತಾಲೂಕ

ದೇವಸ್ಥಾನ ವೇ॥ ಮಂಜ ಭಟ್ಟರು ಕಡತೋಕಾ
ಗಣಪಿ ಕೋಂ ಪರಮೇಶ್ವರ ಭಟ್ಟ ಹೊಸಾಕುಳಿ — ೨೪–೧೦–೭೨
ಸೌ। ಸಾವಿತ್ರಿ ಮಂಜನಾಥ ಭಟ್ಟ ಕಡತೋಕಾ
ಸೌ। ಸಾವಿತ್ರಿ ಮಂಜನಾಥ ನಾಯ್ಕ ಕಡತೋಕಾ — ೬–೨–೭೮

ಭಟಕಳ ತಾಲೂಕ

ಸೌ। ಮಹಾಲಕ್ಷ್ಮಿ ಶಂಭು ಭಟ್ಟ ಕಿತ್ರೆ ೧೯೬೯

ಸಿರ್ಸಿ ತಾಲೂಕ

ಸೌ। ಗೌರಿ ನಾರಾಯಣ ಹೆಗಡೆ ಶೀಗೆಮನೆ ಮಂಜಗುಣಿ
ಸಾವಿತ್ರಿ ವೆಂಕಟ್ರಮಣ ಹೆಗಡೆ ೭೫ ವರ್ಷ ೧೯೫೭

ಅಂಕೋಲಾ ತಾಲೂಕ

ಸರಸ್ವತಿ ಹಾಸ್ಯಗಾರ (ಬೆಲೇಕೇರಿ -ಊರು ಕರ್ಕಿ)

ಯಲ್ಲಾಪುರ ತಾಲೂಕ

ಸೌ। ಮಹಾದೇವಿ ಗಣಪತಿ ಭಟ್ಟ ಬಾಳಕಲ್ ೯-೧೧-೭೨
ಲಕ್ಷ್ಮಿ ನಾರಾಯಣ ಭಟ್ಟ ಬಾಳಕಲ್ ೯-೧೧-೭೨

ಜಾಣೆ ನೀ ಬಲ್ಲಿದರ್ದೀಳೀ
ಯೋಗೇ ಬಿಡಿಸ್ದೀಳುತೇನೋ

ದಿ. ಅಬ್ಬಿ ಗೌರಯ್ಯ ನಾಯ್ಕ ಹೆಗಡೆ ಊರು

ಬಲ್ಲಾದರೆ ಬಿಡುಸ್ದೀಳೀ

ದಿ. ಶಂಕರ ನಾಯ್ಕ ಬೊಡ್ನಮನೆ ಹೆಗಡೆ ಊರು ೧-೩-೭೦
ಬೀರಪ್ಪ ಜಟ್ಟಿ ನಾಯ್ಕ ಹೆಗಡೆ ಊರು
ದಿ. ಗೌರಿ ಶಿವಪ್ಪ ನಾಯ್ಕ ಹೆಗಡೆ ಊರು
ದಿ. ಸುಕ್ರಿ ಪಟಗಾರ ಮದ್ಗುಣಿ ಊರು

ಬಲ್ಲಾಂತೋರ್ ಹೇಳೀಲ್ಲ [illegible]

ಕರಿಯಮ್ಮ ರಾಮಕೃಷ್ಣ ಗೌಡ ಕಲ್ಕೋಡು, ಹೆಗಡೆ ಊರು

ಹೇಳ್ತೇನೆ ಬಾರೋ
ಬಲ್ಲಾದರ್ದೇಳೀ ಅಪುತಾವಾ

ಮಾಸ್ತಿ ಸಾತಪ್ಪ ನಾಯ್ಕ ಹೆಗಡೆ ಊರು

ಸಿದ್ದಾಪುರ ತಾಲೂಕ
ಹೊಡಚೊಂದು ಹೇಳಬೇಕು

ತಿಪ್ಪಾ ದುರ್ಗಾ ಹಸಲಾರ
ರಾಮು ಹಸಲಾರ
ಗಿಡ್ಡು ಹಸಲಾರ

ಹಾನಗಲ್ ತಾಲೂಕ (ಧಾರವಾಡ ಜಿಲ್ಲೆ)
ಅದು ನಿನಗೆ ತಿಳಿಲಿಲ್ಲೇನೇ ಅಗಸ್ಟ ೧೯೬೮

ಶ್ರೀ ಲಕ್ಷ್ಮಣ ರುದ್ರಾಕ್ಷಿ ಅರಳಿಕಟ್ಟಿ

ಉಳಿದ ಒಗಟುಗಳ ನಿರೂಪಕರು

ಕುಮಟಾ ತಾಲೂಕ

ದಿ. ತಿಮ್ಮು ಮಾರಿ ನಾಯ್ಕ ಹೆಗಡೆ ಊರು
ದಿ. ಮಹಾದೇವಿ ಜನಾರ್ಧನ ಜೈನಬೋಗಾರ ,,
ದಿ. ಮಾಸ್ತಿ ದಾತಪ್ಪ ನಾಯ್ಕ ೧–೨–೬೨ ,,
ಶ್ರೀ ಬೀರಪ್ಪ ಜಟ್ಟಿ ನಾಯ್ಕ ೧೨–೮–೬೬ ,,
ದಿ. ಶಂಕರ ನಾಯ್ಕ ಬೊಡ್ಡಮನೆ ೧೨–೮–೬೬ ,,
ಶ್ರೀ ಶಿವಪ್ಪ ತಿಮ್ಮಯ್ಯ ನಾಯ್ಕ ೧೨–೮–೬೬ ,,
ಸೌ. ಸಾವಿತ್ರಿ ರಾಮು ನಾಯ್ಕ ೨೬-೧-೬೨/೩೦-೧-೬೨
ಕು. ಕಮಲಾ ಬಲೀಂದ್ರ ನಾಯ್ಕ ,, ,,
ಪರಮೇಶ್ವರೀ ಗಣಪಯ್ಯ ನಾಯ್ಕ ,,
ಸೌ। ಬಲಿಯಮ್ಮ ಬೀರ ಗೌಡ ಕಲ್ಕೋಡು ೨೫ವರ್ಷ ಅಶಿಕ್ಷಿತೆ ,,
ಸೌ। ಆಮ್ಮಿ ಕುಟ್ಟ ಗೌಡ ೩೦ ವರ್ಷ ಕಲ್ಕೋಡು ,,

ಬೇರೆ ಒಗಟು ಹೇಳಿದವರು

ಕುಮಟಾ ತಾಲೂಕ

ಶ್ರೀ ಈರು ತಿಮ್ಮ ಮುಕ್ರಿ ೫೨ ವರ್ಷ		ಹೆಗಡೆ ಊರು
ಕು ವೀಣಾ ನಾರಾಯಣ ಜೈನಬೋಗಾರ		,,
ಕು. ವಿಜಯ ಗೋಪಾಲ ಜೈನಬೋಗಾರ		,,
ಕು. ತುಕಾರಾಮ ಗಟ್ಟಪ್ಪ ನಾಯ್ಕ		,,
ಸೌ। ಸಾವಿತ್ರಿ ಗಟ್ಟಪ್ಪ ನಾಯ್ಕ		,,
ಕು. ತಿಮ್ಮಣ್ಣ ಗಣಪತಿ ನಾಯ್ಕ		,,
ಶ್ರೀ ಶಿವಪ್ಪ ತಿಮ್ಮಣ್ಣ ನಾಯ್ಕ		,,
ಕರಿಯಮ್ಮ ಕೋಂ ರಾಮಕೃಷ್ಣ ಗೌಡ ೬೦ ವರ್ಷ ಕಲ್ಕೋಡು		,,
ಸೌ। ದೇವಿ ಕೋಂ ಮಾರು ಗೌಡ ೫೦ ವರ್ಷ	,,	,,
ನಾಗಮ್ಮ ಕೋಂ ಕುಪ್ಪ ಗೌಡ ೬೦ ವರ್ಷ	,,	,,
ಕುಮಾರಿ ಭವಾನಿ ತಂದೆ ಮಾರು ಗೌಡ ೧೦ ವರ್ಷ	,,	,,
ದೇವಮ್ಮ ಅಂಬಿಗ ಹೊಲನಗದ್ದೆ		
ಕು. ಮಂಕಾಲಿ ತಂದೆ ಬೀರ ಗೌಡ ೩೦-೯-೯೦		ಅಘನಾಶಿನಿ
ಕು. ತುಲಸಿ ರಾಮ ಗೌಡ		,,
ಕು. ಮಂಜುಲಾ ತಂದೆ ಬೀರ ಗೌಡ		,,
ಕು. ಭವಾನಿ ತಂದೆ ಶಂಕರ ಗೌಡ		,,
ಕು. ಈಸ್ವರ ಗಣಪು ಗೌಡ		,,
ಕು. ಕಾಮೇಸ್ವರ ಗಣಪು ಗೌಡ		,,
ಶ್ರೀ ಜಿ. ಎಂ. ಚಿತ್ರಿಗಿಮಠ, ಎಂ.ಎ.,ಎಂ.ಎಡ್., ಗೋಕರ್ಣ ಕುಮಟಾ ಕಮಲಾ ಬಾಳಿಗಾ ಶಿಕ್ಷಣ ಕಾಲೇಜು		
ಶ್ರೀ ಗಣೇಶ ವೆಂಕಪ್ಪ ನಾಯ್ಕ		ಅಘನಾಶಿನಿ
ಸೌ। ಅಲುಬಾಯಿ ಗಜಾನನ ಪಂಡಿತ		,,

ಸೌ। ರಮಾ ಮಧುಕರ ಪಂಡಿತ	ಅಘನಾಶಿನಿ
ಶ್ರೀ ಗಜಾನನ ವೆಂಕಟ್ರಮಣ ಪಂಡಿತ	,,
ಶ್ರೀ ಸಣಕೂಸ ಬೊಮ್ಮ ಆಗೇರ	ಬಂಕಿಕೊಡ್ಲ
ವೇ। ಅನಂತ ಮಹಾದೇವ ಭಟ್ಟ ದೇವನೀಮಠ, ೮೫ ವರ್ಷ	ಗುಡೇಅಂಗಡಿ
ಕುಮಾರ ಪ್ರದೀಪ ಕುಪ್ಪಯ್ಯ ಭಟ್ಟ ಎಂ.ಎಸ್‌ಸಿ. ೨೭ ವರ್ಷ ಮೆನೇಜರ್ ಗ್ರಾಮೀಣ ಬ್ಯಾಂಕ ಧುಂಡಶಿ ಜಿಲ್ಲಾ ಧಾರವಾಡ	,,
ಕುಮಾರಿ ಸುರೇಖಾ ಕುಪ್ಪಯ್ಯ ಭಟ್ಟ ಬಿ.ಕಾಂ. ೨೩ ವರ್ಷ	,,
ಕುಮಾರಿ ಮಮತಾ ಕುಪ್ಪಯ್ಯ ಭಟ್ಟ ಬಿ.ಎ.	,,
ವೇ। ಸುಬ್ರಾಯ ಮಹಾದೇವ ಭಟ್ಟ	,,
ಪಾರ್ವತಿ ಶ್ಯಾನಭಾಗ ವಾಲಗಳ್ಳಿ	
ಶ್ರೀ ಸುಬ್ರಾಯ ವಿಷ್ಣು ಭಾಗವತ	ಊರಕೇರಿ
ಶ್ರೀ ಸಾಹೇಶ ವೆಂಕಟ್ರಮಣ ಭಟ್ಟ ವಗ್ರಣೆ	

ಹೊನ್ನಾವರ ತಾಲೂಕ

ಕುಮಾರಿ ಉಷಾ ತ್ರಿಯಂಬಕ ಶಾಸ್ತ್ರಿ ೧೪ವರ್ಷ ೬ನೇ ಇಯತ್ತೆ	ಹೊನ್ನಾವರ
ಬೆಳಿಯಮ್ಮ ಪುಟ್ಟು ನ್ಯಾಕ	ಹೊಸಾಕುಳಿ
ಸೌ। ಸರಸ್ವತಿ ವೆಂಕಟ್ರಮಣ ನ್ಯಾಕ ೭-೨-೭೮	ಕಡತೋಕಾ
ಸೌ। ಸಾವಿತ್ರಿ ಮಂಜನಾಥ ನ್ಯಾಕ	ಕಡತೋಕಾ
ಕು. ಶೋಭಾ ಭಟ್ಟ, ಕು. ಮಹಾಲಕ್ಷ್ಮಿ ಭಟ್ಟ	ತಲಗೋಡ
ಕು. ಯಶೋದಾ ಭಟ್ಟ, ಕು. ಗಜಾನನ ಭಟ್ಟ	,,
ಕು. ಗಣಪತಿ ಭಟ್ಟ ಕಡೆಮನೆ	,,
ಕು. ಶೋಭಾ ಭಟ್ಟ, ಕು. ನಿರ್ಮಲಾ ಭಟ್ಟ	,,
ಕು. ಮಹಾಲಕ್ಷ್ಮಿ ಭಟ್ಟ	,,
ಶ್ರೀ ಸುಬ್ರಾಯ ರಾಮಚಂದ್ರ ಭಟ್ಟ	,,
ಶ್ರೀ ತಿಮ್ಮಣ್ಣ ಯಾಜಿ ಕಂಚಿಕೊಡ್ಲು ೧೬-೬-೭೬	

ಸೌ। ರಾಧೆ ಗಣೇಶ ಯಾಜಿ
ಕು. ಶ್ರೀಪಾದ ಶಂಭು ಯಾಜಿ
ಕು. ಸಂಜೀವಿನಿ ಶಂಭು ಯಾಜಿ
ಕು. ಶ್ರೀಕಾಂತ ಶಂಭು ಯಾಜಿ
ಸಾವಿತ್ರಿ ವೆಂಕಟ್ರಮಣ ಹೆಗಡೆ

ಸಿರ್ಸಿ ತಾಲೂಕ

ಶ್ರೀ ನಾರಾಯಣ ಗಣಪತಿ ಹೆಗಡೆ ಶೀಗೆಮನೆ ಮಂಜಗುಣಿ ಹತ್ತಿರ ೧೯೮೭
ಸೌ। ಗೌರಿ ನಾರಾಯಣ ಹೆಗಡೆ ,, ,,
ಕು. ವೀಣಾ ನಾರಾಯಣ ಹೆಗಡೆ
ಕು. ತಿಮ್ಮ ರಾಮ ಕುಮರಿಮರಾಠಿ ನಕ್ಕರಕಿಮಜರೆ
ಸಾವಿತ್ರಿ ವೆಂಕಟ್ರಮಣ ಹೆಗಡೆ ,,
ಶ್ರೀ ಅಣ್ಣಯ್ಯ ನರಸಿಂಹ ಭಟ್ಟ ಕಂಚಿಗದ್ದೆ ನೀರ್ನಳ್ಳಿ ಹ್ಯಾಸ್ಕೂಲ್
ಕು. ಭೈರವೇಶ್ವರ ಗಣೇಶ ಹೆಗಡೆ ಮೂವರೂ ೯ನೇ ಇಯತ್ತೆ
ಕು. ದೇವರು ಈಶ್ವರ ಪಟಗಾರ ,, ,,
ಕು. ಸುರೇಶ ಶಿವ ಆಚಾರಿ (ಊರು ಹಲಗೆ) ,, ,,
ಸೌ। ಲಕ್ಷ್ಮಿ ಕೋಂ ಕೃಷ್ಣ ಭಟ್ಟ ಕೋಟೆಮನೆ ವಾನಳ್ಳಿ
ಗಂಗಾ ಅನಂತ ಹೆಗಡೆ ೨-೪-೮೫ ಕೋಟೆಮನೆ
ಕು. ಗಾಯತ್ರಿ ಕೃಷ್ಣ ಭಟ್ಟ ಕೋಟೆಮನೆ ವಾನಳ್ಳಿ
ಕು. ಲಲಿತಾ ಕೃಷ್ಣ ಭಟ್ಟ ಕೋಟೆಮನೆ ವಾನಳ್ಳಿ
ಕು. ವನಿತಾ ತಮ್ಮಯ್ಯ ಹೆಗಡೆ ಕೆರೆಗದ್ದೆ ವಾನಳ್ಳಿ ೯ನೆ ಇಯತ್ತೆ
ಶ್ರೀ ಮಂಜನಾಥ ಪುಟ್ಟಯ್ಯ ಹೆಗಡೆ ಕೆರೆಗದ್ದೆ ವಾನಳ್ಳಿ
ಕು. ಸೌಭದ್ರೆ ಗಣಪತಿ ಹೆಗಡೆ ,, ,,
ಕು. ಸರಸ್ವತಿ ಮಹಾಬಲೇಶ್ವರ ಹೆಗಡೆ ಕೆರೆಗದ್ದೆ ವಾನಳ್ಳಿ
ಕು. ಕಮಲಾ ಕೃಷ್ಣ ಹೆಗಡೆ ಕೆರೆಗದ್ದೆ ವಾನಳ್ಳಿ
ಗಣಪಿ ಕೋಂ ಪುಟ್ಟಯ್ಯ ಹೆಗಡೆ ಕೆರೆಗದ್ದೆ ವಾನಳ್ಳಿ

ಸಿದ್ದಾಪುರ ತಾಲೂಕ

ಕು. ಇಂದಿರಾ ಗಣಪತಿ ಭಟ್ಟ ೧೪ ವರ್ಷ ಉಂಚಳ್ಳಿ
ಕು. ಸತೀಶ ಪರಮೇಶ್ವರ ಭಟ್ಟ ೧೫ ವರ್ಷ ಉಂಚಳ್ಳಿ
ಕು. ವಿದ್ಯಾಧರ ಪರಮೇಶ್ವರ ಭಟ್ಟ ೧೦ ವರ್ಷ ಉಂಚಳ್ಳಿ
ಕು. ದಿವಾಕರ ಸಣ್ಣಪ್ಪ ಹೆಗಡೆ
ಕು. ಸುಮಂಗಲಾ ಸಣ್ಣಪ್ಪ ಹೆಗಡೆ ೧೯ ವರ್ಷ ಬಿ.ಎಸ್‌ಸಿ.
ಕು. ದಿವಾಕರ ಸಂಕಪ್ಪ ಹೆಗಡೆ
ಶ್ರೀ ಸುಬ್ರಾಯ ಹೆಗಡೆ ಬೆಣ್ಣಳ್ಳಿ
ಶ್ರೀ ರಾಮಚಂದ್ರ ಮಹಾಬಲ ಹೆಗಡೆ ಬಾಳೆಸರ
ಶ್ರೀ ಬೊಮ್ಮಯ್ಯ ಹೊಸೂರು ನಿವೃತ್ತ ಶಿಕ್ಷಕರು ಸಿದ್ದಾಪುರ
ಸೌ। ಪಾರ್ವತಿ ಬೊಮ್ಮಯ್ಯ ನಿವೃತ್ತ ಮುಖ್ಯಾಧ್ಯಾಪಕಿ ಸಿದ್ದಾಪುರ
ಶ್ರೀ ಮಾದು ತಿಮ್ಮಪ್ಪ ಕೊಡಿಯಾ ಸಿದ್ದಾಪುರ
ಶ್ರೀ ಜಗದೀಶ ಬಿ. ಹೊಸೂರು ಅಂಕೆ-ಸಂಖೆ ಅಧಿಕಾರಿ ಸಿರ್ಸಿ
ಶ್ರೀ ಪ್ರಕಾಶ ಬಿ. ಹೊಸೂರು ಅಂಕೆ-ಸಂಖೆ ಅಧಿಕಾರಿ ಸಿದ್ದಾಪುರ
ಶ್ರೀ ವಿ. (ವರದರಾಜ್) ಎಂ. (ಮರ್ತಪ್ಪ) ಕಾಮತ ಸಿದ್ದಾಪುರ
ಕು. ಲೀಲಾ ಬಿ. ಹೊಸೂರು ಮುಖ್ಯಾಧ್ಯಾಪಕಿ ಸಿದ್ದಾಪುರ
ಕು. ಗಾಯತ್ರಿ ಬಿ. ಹೊಸೂರು ಶಿಕ್ಷಕಿ ಸಿದ್ದಾಪುರ ೧೫–೫–೭೮
ಶ್ರೀ ತಿಪ್ಪಾ ದುರ್ಗ ಹಸಲಾರ
ರಾಮು ತಿಪ್ಪಾ ಹಸಲಾರ
ಗಿಡ್ಡು ಹಸಲಾರ

ಯಲ್ಲಾಪುರ ತಾಲೂಕ

ಕು. ಪುಷ್ಪಾವತಿ ಕೃಷ್ಣ ಹೆಬ್ಬಾರ ಬೇಣದಕುಳಿ
ಶ್ರೀ ಮ. ಶ. ಹೆಬ್ಬಾರ ಮಲವಳ್ಳಿ
ಶ್ರೀ ಸುಬ್ಬಯ್ಯ ಧೋಂಗಳೆ ಭಟ್ಟರು ಮಲವಳ್ಳಿ
ಸೌ। ಮಹಾದೇವಿ ಗಣಪತಿ ಭಟ್ಟ ೯-೧೧-೭೭ ಬಾಳಕಲ್ ಮಂಚಿಕೆರೆ ಹತ್ತಿರ

ಲಕ್ಷ್ಮೀ ನಾರಾಯಣ ಭಟ್ಟ
ವೇ। ಶ್ರೀ ನಾಗೇಂದ್ರ ಅನಂತ ಭಟ್ಟರು ಹಿತ್ಲಹಳ್ಳಿ

ಭಟಕಳ ತಾಲೂಕ

ಶ್ರೀ ನಾರಾಯಣ ಸುಕ್ರ ಗೊಂಡ ಹಡೀಲ್

ಒಗಟು ಕಥೆಗಳನ್ನು ಹೇಳಿದವರು

೧	ಜಾಣರ ಕೈವಾಡ	ದಿ. ಭಾಗೀರಥಿ ಮಂಜ ಹೆಗಡೆ ಹಲ್ಸವಾಪು ೧೯೬೪
೨	ಮೂರು ಸಾಮಾನು	ದಿ. ನಾಗಪ್ಪ ನಾಯ್ಕ ಹೆಗಡೆ ಊರು ೯-೨-೭೨
೩	ಚಕ್ರಕಂಬ ಮುರಿಯಬೇಕು	,, ,, ,,
೪	ಬೇಕಾದ ಬಹುಮಾನ	ಶ್ರೀ ಸುಬ್ಬ ತಂದೆ ಮಾಚ ಉಪ್ಪಾರ ೨೭-೧೦-೭೬
೫	ಸತ್ತವ ಕೊಂದಾ, ಇದ್ದವ ತಿಂದಾ	ಕು. ಕಮಲಾ ಬಲೀಂದ್ರ ನಾಯ್ಕ ಹೆಗಡೆಊರು ೧೯-೧೨-೭೧
೬	ಪರ ರಾಜ್ಯದ ಪಕ್ಷಿ	ಕು. ಸರಸ್ವತಿ ತಂದೆ ಕೃಷ್ಣಪ್ಪ ನಾಯ್ಕ ಹೆಗಡೆ ಊರು ೧೯-೧೧-೭೧
೭	ಬೇತಾಳನ ಶಾಪ	ಶ್ರೀ ಗಣಪತಿ ಸುಬ್ರಾಯ ಭಟ್ಟ ಹಿತ್ಲಹಳ್ಳಿ ಯಲ್ಲಾಪುರ 'ಸುಡಿಜೇನು' ೨೬-೧-೭೯
೮	ಅಪ್ಪಶಿಖ	ದಿ. ಕೃಷ್ಣ ಮೇಸ್ತ್ರಿ ಮಾಸೂರು

೯	ಸಮಸ್ಯೆಯ ಬಾಣ, ಕಲ್ಲಿನ ಗಾಣ	ದಿ. ಅಬ್ಬಿ ಗೌರಯ್ಯ ನಾಯ್ಕ ಹೆಗಡೆಊರು ೨೪-೪-೬೯
೧೦	ಮುತ್ತಿನ ನೈವೇದ್ಯ	ಮಾದೇವಮ್ಮ ಭಟ್ಟ ದಿವಳ್ಳಿ ೧-೬-೭೮ ತರಂಗದಲ್ಲಿ ಪ್ರಕಟಿತ
೧೧	ಮೇಲೊಬ್ಬ ಕೊತಾನೆ ನಿನಗಾಗಿ	ಶ್ರೀ ಕೃಷ್ಣ ಭಟ್ಟ ಕಾರೇಮನೆ ಶಿಸ್ತ ಮುಂಡಿ ಯಲ್ಲಾಪುರ ೩೦-೧೦-೭೬
೧೨	ಮೂರು ಒಗಟುಗಳು	ಶ್ರೀ ಹನುಮಂತಪ್ಪಾ ಮಲ್ಲಪ್ಪಾ ಸಾವಂತ ತಿಳವಳ್ಳಿ ೪೦ ವರ್ಷ ೨೧-೬-೭೩
೧೩	ಕತ್ತರಿ ಬಾಣ	ಕು. ಭವಾನಿ ತಂದೆ ಮಾರು ಗೌಡ ಕಲ್ಕೋಡು ಹೆಗಡೆಊರು ವರ್ಷ ೧೦ ಡಿಸೆಂಬರ ೯೦
೧೪	ಮೂರು ಕಾಲುಗಳ ಮನುಷ್ಯ	ಕರಿಯಮ್ಮ ರಾಮಕೃಷ್ಣ ಗೌಡ ಕಲ್ಕೋಡು
೧೫	ಜಗಳ ತರಲಿಕ್ಕೆ ಹೋಗಿದ್ದಾಳೆ	ತಿಮ್ಮ ರಾಮ ಕುಮರಿಮರಾಟಿ ನಕ್ಕರಕಿ ಮಜರೆ ಮಂಜಗುಣಿ ಸಮೀಪ
೧೬	ಕೊಯ್ ಅಂಬೂರಗೆ ಬರಬೇಕು	ಕು. ಕಮಲಾ ತಂದೆ ಬಲೀಂದ್ರ ನಾಯ್ಕ ೧೯-೧೧-೭೧
೧೭	ದಾರಿ ತೋರಿಸು	ಸೌ। ಸಾವಿತ್ರಿ ರಾಮ ನಾಯ್ಕ ಹೆಗಡೆಊರು ೧೯-೧೧-೭೧
೧೮	ವನದ ಕೋಗಿಲೆ	ಕು. ಕಮಲಾ ತಂದೆ ಬಲೀಂದ್ರ ನಾಯ್ಕ ೧೯-೧೧-೭೧
೧೯	ಐದು ಕಾಲ ಹುಡುಗಿ	ತುಕಾರಾಮ ಗಟ್ಟಪ್ಪ ನಾಯ್ಕ ಹೆಗಡೆಊರು ೨೬ ಡಿಸೆಂಬರ ೯೦

೨೦ ಗಾಳಿಯನ್ನು ಮಾರಲು ಹೋಗಿದ್ದಾಳೆ	ಕು. ಉಷಾ ತ್ರಿಯಂಬಕ ಶಾಸ್ತ್ರಿ ಹೊನ್ನಾವರ ೯ನೇ ಇಯತ್ತೆ ೧೨–೧೨–೯೦
೨೧ ಪಾತ್ರೆಯ ಬೆಲೆಯನ್ನು ಕೇಳುವದಿಲ್ಲ	ಶ್ರೀ ಅನಂತ ಮಹಾದೇವ ಭಟ್ಟ ದೇವನೀಮಠ ಗುಡೇಅಂಗಡಿ ಜನವರಿ ೯೧

ಒಗಟು ಕಥೆಗಳ ಶಬ್ದಾರ್ಥ

ಹೊಟ್ ಹೋದ್ರೆ–ದೃಷ್ಟಿ ನಷ್ಟ ವಾದರೆ.ಹೊಟ್ಟು ಅಂದರೆ, ಧೂಳು

ಹುಣಗಲ – ಹುನಾಲಮರ

ಆಸ್ತಿ – ಆಸೆ

ಹುಸಿದ್ – ತುಂಡಾಗಿ

ಸೇರಿ – ಸೀರೆ

ಪದಾರ್ಥ – ಮೇಲೋಗರ

ಜರಿ – ಹೊಡೆ,ಒಡೆವಂತೆ ಇಕ್ಕು

ಹೊದ್ಲು – ಅರಳು. ಸಂಸಾರ ಹೊದಲಿನಂತೆ ಸುಟ್ಟು ಹೋಯಿತು

ನೆವೇದ್ದಿ – ನೈವೇದ್ಯ

ಸಂಭಾವನೆ – ಅಡಿಕೆ ಮುಂ. ಬೇಡುವುದು

ಶರಕಾರ – ಸರಕಾರ ರಾಜಸ್ಥಾನ

ಪಟ – ಪಟ್ಟಾಕತ್ತಿ

ಬೋಯಿ – ಬೋವಿ

ಯೇಗ – ಈಗ

ಅರೀವವನು – ಅರಿಯದವನು

ಹೊಡಚಾಕ್ತು – ನೂಕಿ ಕೆಡವಿತು

ಲಟಕನ – ಲಟ್ ಅಂತ ಮುರಿದ,

ಚಿಟಕಿನ – ಚಿಟಿಕೆ ಹೊಡೆದ

ಅಡ್ಡಚಾಳಿ – ವ್ಯಭಿಚಾರ ಕೆಟ್ಟಚಟ

ಬಾಲೆಹಿತ್ಲ – ಬಾಳೆಹಿತ್ತಿಲು

ಒಗಟುಗಳ ಶಬ್ದಾರ್ಥ

ಅ — ಅಂ

ಅಂಗಾನುಂಗಿನ - ಅಂಗವನುಂಗುವ
ಅಕ್ ಹೋತ – ತಗ್ಗಿಗೆ
ಹೋಗುತ್ತಾನೆ
ಅಡಪ – ತೆಂಗಿನ ಕಾಯ ಹೊರಗಿನ
ಸಿಪ್ಪೆ
ಅಪ್ಡತಪ್ಡ – ಅಡ್ಡಾದಿಡ್ಡ
ಅಪ್‌ಹಾಕು – ಆಲಿಂಗನ ಮಾಡು
ಆಣಬೆ -- ಅಣಬೆ
ಉದ್ – ಉದ್ದು
ಉದ್ದಗೊರಟು – ಹಲಗೆ ಉಜ್ಜಿ
ನುಣುಪು ಮಾಡುವ ಬಡಿಗರ
ಸಾಧನ
ಏರಿ – ಯೇರಿ
ದಿಬ್ಬ – ದಿನ್ನೆ
ಅಂತರದ ಬಳ್ಳಿ – ಆಕಾಶ ಬಳ್ಳಿ

ಕ — ಘ

ಕಂಡಿ – ಗುಂಡಿ, ತಗ್ಗು
ಕಟ್ದ - ಕಟ್ಟಿದ
ಕತ್ಯಲ್ಲವೇನೇ? – ಕತ್ತಿಯಲ್ಲವೇನೇ?
ಕರಿತೇ - ಕರೆಯುತ್ತಾಳೇ
ಕೈಜಬ್ಬ – ತೀರ ಸಣ್ಣ ಜಾತಿಯ
ಕಪ್ಪೆ ಮೀನು
ಕೊಕ್ಕೊ - ಅಂದರೆ ಕೊಂಕು, ವಕ್ರ,
ಕೊಂಕಾದ ಬೆಣೆ (ಶೂಲ) ಸೇರಿಸಿದ
ಬಿದಿರಿನ ಇಲ್ಲವೆ ಬೇರೆ ಎಳೆವಸಾಧನ.
ಅಂಡುಗೊಕ್ಕೆ – ಟೊಂಕಕ್ಕೆ ಕಟ್ಟಿ
ಕೊಳ್ಳುವ ನೇಲಿಸುವ ಸಾಧನ
ಕೊಂಡೋಟ – ಸಣ್ಣ ಮಣ್ಣಿನ
.ಗೂಡು ಕಟ್ಟುವ ಹುಳ
ಕೊಡಿಬಾಳೆ – ಕುಡಿ ಸಮೇತ
ಕೊಯ್ದ ಬಾಳೆ
ಕೊಣಜ ಹುಳ – ಕಡಜೀರಿಗೆ
ಹುಳ ಕಡಜಲ
ಕೊಳಗ – ಧಾನ್ಯ ಅಳೆವ ಸಾಧನ

ಗ — ಜ

ಗಾಲಿ – ಚಕ್ರ
ಗಾಡ್ಗತನ – ಜೋರಾಗಿ ಕೂಗೆ
ದೆವ್ವ ಬಿಡಿಸುವ ಮಾಟಗಾರಿಕೆ
ಗಿರ್‌ಗುಡು - ತಿರುಗು, ಗಿರ್
ಎಂದು ಶಬ್ದಮಾಡಿ ತಿರುಗು
ಗಿರಲಿ ಬಣ್ಣ – ಗಿರಿ ಅಂದರೆ, ಹಕ್ಕಿ
ಯ ತುಪ್ಪಳ ಗರಿಯ ಬಣ್ಣ
ಗೊಂಡೆ ಹೂ – ಚಂಡು ಹೂ
ಚಪ್‌ಹರ್ಕಿ – ಚಪ್ಪರಿಸುವವಳು

ಗೆಣಸಲೆ – ಅರಿಸಿನ ಎಲೆ ಇಲ್ಲವೆ,
ಕಾಡು ಲವಂಗದೆಲೆ ಮೇಲೆ ಬೆಲ್ಲ
ತಿರುವಿದ ಅಕ್ಕಿ ಹಿಟ್ಟನ್ನು ಇಡ್ಲಿ
ಯಂತೆ ಬೇಯಿಸಿ ಮಾಡಿದಕಜ್ಜಾಯ
ಜಿಪ್ಪಿ ಹಕ್ಕಿ - ಚಿಪ್ಪು ಹಂದಿ
ಚೀನಿ ಪೆಟ್ಗೆ - ಚೀನಿ (ರೇಶಿಮೆ)
ರವಿಕೆಯು. ಬಟ್ಟೆಯು ಅಂದ ಹೆಚ್ಚಿ
ಸುವ ಹೊಳೆವ ನೂಲು
ಜರಿ – ತಗ್ಗು ಕುಣಿ
ಜೆರಿ – ಜರಿ, ಕುಣಿ

ತ — ನ

ತಗಟಿ -ತಕ್ಕಡಿ
ತನ್ನಾರೆ - ತಾನಾಗಿಯೇ
ತಾಪೂರಿ – ತಾವೂರಿ. ತಾವರೆ
ತಾರಿಕಲು - ತಾರೆಗಳು
ತೊಡ್ಲಕೊಕ್ಕೆ – ಕೆದರುವ ಉದ್ದ
ವಾದ ಕೋಲಿನಂತ ಸಾಧನ
ದಡಾಲಿ – ದೊಡ್ಡ
ದರಿ – ದರೆ, ಮಣ್ಣಿನ ಪ್ರಾಕಾರ
ದಿಂಗಾಲ - ತಿಂಗಳು
ದೋರಾ – ದ್ವಾರ, ರಂಧ್ರ
ನಾಕಕ್ಕೆ - ನಾಲ್ಕಿಗೆ (ಸಂಖ್ಯಾ
ವಾಚನಕ್ಕೆ ಚತುರ್ಥಿ ವಿಭಕ್ತಿ
ಸೇರಿಸಿದ್ದು)
ನಾಚ್ಕೆಮುಳ್ಳು – ಮುಟ್ಟಿದರೆ
ಮುನಿ, ಗಿಡದ ಮುಳ್ಳು
ನಾರಿಲ್ಲದ – ನಾರು ಇಲ್ಲದ

ನೆಡಿ – ನಡಿ, ನಡೆ
ನೆಡು – ನಡು, ನಡುವಿನ

ಪ -- ಮ

ಪಶುಪತಿ – ಅರ್ಥ ಸ್ಪಷ್ಟವಿಲ್ಲ
ಹಸಿರೆಲೆ ಎಂದಿರಬಹುದು
ಪುರೂಟಿ – ದುಂಡನ್ನ
ಪುಲ್ಲಿ ಬಣ್ಣ – ರೇಸಿಮೆ ಸೀರೆ
ಬಾನ – ಆಕಾಶ
ಬೀಣು – ಬೀಳು. ಕೆಸವೆ ಜಾತಿಯ
ಗಿಡದ ಬೀಣು
ಬೆಟ್ಟಿ – ಬೆಟ್ಟೆ, ಬೀಜ
ಬೆಲ್‌ಪಾಯ್ಸ – ಬೆಲ್ಲ ಹಾಕಿ
ಮಾಡಿದ ಪಾಯಸ

ಪ — ಮ

ಮಂಗ್ಲಿ – ಮೀನಿನ ಜಾತಿ
ಮೀಡ – ಅಗುಳಿ
ಮುಗಳು – ಮುಗುಳು, ಮೊಗ್ಗೆ
ಮೂಗುದಾಣಿ – ಮೂಗಿಗೆ ಸುರಿವ
ಹಗ್ಗ
ಮೂಳಿ - ಮೊಟ್ಟೆಎಂದು ಸಂದರ್ಭ
ದಿಂದ ತಿಳಿಯಬೇಕು
ಮೈಯಟ್ಟು – ಮೈ ಅಪ್ಪೂಟ
ಇಡೀ ಮೈ
ಮೋಡ್ಯಂತಾ - ಅಕ್ಕಿಮೂಡೆ
ಯಂಥ, ಬಿಳಿಹುಲ್ಲನ್ನು ಬಳ್ಳಿಯನ್ನು
ಉಪಯೋಗಿಸಿ ಅಕ್ಕಿ ಹಾಕಲು
ಕಟ್ಟುವ ಮೂಡೆ. ಮೂಡೆಯಲ್ಲಿ

೨೨ ಕೊಳಗ ಅಕ್ಕಿಹಾಕಿ ಕಟ್ಟುತ್ತಾರೆ
ಮೊಕೆ – ಮೊಗ್ಗೆ
ಮೋವದ – ಮೋಹದ ಸುಂದರ
ವಾದ
ಮೌರಿ – ಸನಾದಿಯಂಥ ವಾದ್ಯ

ಯ — ಳ

ಯೋಳ್ಳಿದ ಮೊಕೆ – ಅರಳಿಯ
ಮೊಗ್ಗೆ, ಕಮಲದ ಮೊಗ್ಗೆ
ರಟ್ಯಲ್ಲವೇನೇ? – (ಜೇನಿನ) ರಟ್ಟು
ಅಂದರೆ, ಜೇನಹುಟ್ಟು
ರಾಜಿ – ರಾಜ್ಯ
ವಗ್ದ – ಒಗೆದ
ವಡುವಂತಾದ – ಒಡೆವಂಥದು
ಮೊಗ್ಗೆ ಒಡೆವುದ, ಅರಳು
ಶಶಿ – ಸಸಿ
ಶಿಂಗಳ – ಸಿಂಗಳಿಕ. ಸಿಂಗಳಿಕ
ಎಂಬ ಮಂಗ, ಸಿಂಹ
ಶೀತೆದಂಡೆ – ಮರದ ಮೇಲೆ ಪರಾ
ವಲಂಬಿಯಾಗಿ ಹಬ್ಬುವ ಸಸ್ಯ.
ಆರ್ಕಿಡ್ ಜಾತಿಗೆ ಸೇರಿದ್ದು. ಇದಕ್ಕೆ
ಹೂದಂಡೆಯ ಹಾಗೆ ಕಾಣುವ
ಸುಂದರ ಹೂಗೊಂಚಲು ಬಿಡು
ತ್ತದೆ. ಇದೇ ಶೀತೆದಂಡೆ
ಶೇಡಿ – ಜೇಡಿಮಣ್ಣು, ಬಿಳಿ ಇಲ್ಲವೆ
ನಸು ಹಳದಿ ಬಣ್ಣದ್ದು
ಸಪ್ಪು – ಸೊಪ್ಪು
ಸುರತಿ ಬುರುಡೆ – ಶ್ರುತಿ ಬುರುಡೆ
ಪುಂಗಿ
ಸೆರಮಾತು – ರಹಸ್ಯ ಮಾತು
ಸೋತಿ – ಸ್ವಾತಿ ನಕ್ಷತ್ರ
ಸೋಗು – ಸೋಗೆ. ಬಳ್ಳಿಗೆ
ಆಧಾರ ಕೋಲು
ಹಶ್ಯ – ಹಸಿಯ
ಹಶಿಹಸಿ – ಹಸಿ ಹುಲ್ಲು
ಹಶಿನ್ ಹಾಲು – ಹಸುವಿನ ಹಾಲು
ಹಶಿಮಾಣಿ – ಜೀವವುಳ್ಳ ಹುಡುಗ
ಹೆಟ್ಟು – ಚುಚ್ಚು, ಪ್ರವೇಶಿಸು
ವಂತೆ ಮಾಡು
ಹೆಡಿಗೆ – ದೊಡ್ಡ ಬೆತ್ತದ, ಇಲ್ಲವೆ
ಬಿದಿರಿನ ಬುಟ್ಟಿ
ಹೇಳ್ರೆ – ಹೇಳಿದರೆ
ಹೊಳ್ಳೆ – ಹೊಳ್ಳು, ಪೊಳ್ಳು,
ಬೀಜ ಇಲ್ಲದ ಇಲ್ಲವೆ ತೀರ ತೆಳ್ಳಗಿನ
ಬೀಜ ಇರುವ ಹಲಸಿನ ಸಣ್ಣ ಸೊಳೆ

ಹಿನ್ನುಡಿ

ಒಗಟುಗಳು ಮತ್ತು ಕಥೆಗಳು

ಈ ಸಂಕಲನದ ಬಹಳ ಭಾಗವನ್ನು ನಿರೂಪಕ ನಿರೂಪಕಿಯರಿಂದ ನಾನೇ ಸಂಗ್ರಹಿಸಿದ್ದೆನು. ಒಗಟುಗಳನ್ನು ಹೇಳಿರಿ ಎಂದ ಮೇಲೆ ಬರೆದೇ ಕೊಡುತ್ತೇನೆ ಎಂದು ಹೇಳಿ ಮೂವರು ಬರೆದು ಕೊಟ್ಟರು.

ಶ್ರೀ ಮಾದು ತಿಮ್ಮಪ್ಪ, ಕೊಡಿಯ ಕೆಲವು ಒಗಟುಗಳನು ಬರೆದು ಕೊಟ್ಟರು. ಹೊನ್ನಾವರ ಸೇಂಟ್ ಥಾಮಸ್ ಹೈಸ್ಕೂಲ ಪ್ರಾಂಶುಪಾಲ ಶ್ರೀ ತ್ರಿಯಂಬಕ ಶಾಸ್ತ್ರಿಯವರ ಮಗಳು ಕು. ಉಷಾ ಕಳೆದ ವರ್ಷ ೯ನೆಯ ಇಯತ್ತೆಯಲ್ಲಿದ್ದವಳು ಒಂದು ಒಗಟು ಕಥೆಯನ್ನೂ ಕೆಲವು ಒಗಟುಗಳನ್ನೂ ಬರೆದು ಕೊಟ್ಟಳು.

ಸಿದ್ದಾಪುರದ ಕು. ಗಾಯತ್ರಿ ಬೊಮ್ಮಯ್ಯ ಹೊಸೂರು ತಮ್ಮ ಮನೆಯ ಜನರಿಂದಲೂ ಬೇರೆ ಒಬ್ಬಿಬ್ಬರು ಶಿಕ್ಷಕಿಯರಿಂದಲೂ ಹೇಳಿಸಿ ಬರೆದುಕೊಂಡು ೫೦ ಒಗಟುಗಳನ್ನು ಕೊಟ್ಟರು.

ಆದರೆ, ಅವುಗಳಲ್ಲಿ ಹೆಚ್ಚಿನವು ಗ್ರಂಥಸ್ಥವೆಂಬ ಕಾರಣದಿಂದ ಒಬ್ಬೊಬ್ಬರು ಹೇಳಿದ್ದ ಒಂದೊಂದು ಒಗಟನ್ನು ಮಾತ್ರ ಆಯ್ದುಕೊಂಡೆನು.

ಪರಿಶಿಷ್ಟದಲ್ಲಿ ಬಂದ ಸಂಸ್ಕೃತದ ಒಗಟುಗಳ ಶ್ಲೋಕಗಳನ್ನು ಊರಕೇರಿಯ ಶ್ರೀ ಸುಬ್ರಾಯ ಭಾಗವತರೂ ಗುಡೇಅಂಗಡಿಯ ಶ್ರೀ ವೇ। ಅನಂತ ಭಟ್ಟರೂ ಹಿತ್ಲಳ್ಳಿಯ ವೇ। ನಾಗೇಂದ್ರ ಭಟ್ಟರೂ ತಿಳಿಸಿದ್ದರು.

ಇಲ್ಲಿ ಬಂದಿರುವ ಕೆಲವು ಒಗಟು ಕಥೆಗಳ ಕುರಿತು ಸ್ವಲ್ಪ ವಿವರವನ್ನು ಒದಗಿಸಲಾಗುತ್ತದೆ.

ಊರಕೇರಿಯ ಶ್ರೀ ವೇ। ನಾಗೇಶ ಭಟ್ಟರು 'ಅಪ್ರಶಿಖ' ಒಗಟು ಕಥೆಯ ಮೂಲ ಸಂಸ್ಕೃತ ಪಾಠದ ಕುರಿತು ಸಂಕ್ಷಿಪ್ತವಾಗಿ ತಿಳಿಸಿದರು.

ಇವರಲ್ಲಿನ ರಾಜನ ಮಗನೂ ಮಂತ್ರಿಯ ಮಗನೂ ಸಹಪಾಠಿಗಳು. ಕಲಿತು ಬಂದು, ಒಂದು ದೇವಾಲಯದಲ್ಲಿ ಮಲಗಿಕೊಂಡರು. ಅಸೂಯೆಯಿಂದ ಮತ್ತೊಬ್ಬನನ್ನು ಕೊಲ್ಲುವ ವಿಚಾರ ಇಬ್ಬರಲ್ಲೂ ಇತ್ತು. ತನ್ನ ತಲೆ ಕಡಿವ ಮೊದಲು ಮಂತ್ರಿಯ ಮಗನು ರಾಜನ ಮಗನ ಬೆನ್ನ ಮೇಲೆ 'ಅಪ್ರಶಿಖ' ಎಂದು ಬರೆದಿದ್ದನು. ಮಂತ್ರಿಯ ಮಗನನ್ನು ರಾಜನ ಮಗನು ತಲೆ ಕಡಿದು ಕೊಂದನು.

ಜನರಲ್ಲಿ ಈ ಬಗ್ಗೆ ಗುಲ್ಲೆದ್ದಿತು, ರಾಜನ ಮಗನ ಬೆನ್ನ ಮೇಲೆ ಬರೆದಿದ್ದ 'ಅಪ್ರಶಿಖ' ಎಂಬುದರ ಅರ್ಥ ಮಾಡಬೇಕಾಗಿ ಬಂತು.

ಈ ಕುರಿತು ಶ್ರೀ ನಾಗೇಶ ಭಟ್ಟರು ನೆನಪು ಮಾಡಿ ಹೇಳಿದ ಶ್ಲೋಕಪಾಠ.

ಅನೇನ ತವ ಪುತ್ರೇಣ । ಪ್ರಸುಪ್ತಸ್ಯ ವನಾಂತರೇ ॥
ಶಿಖಾಮಾದಾಯ ಹಸ್ತೇನ ಖಡ್ಗೇನೋಪಹತಃ ಶಿರಃ ॥

ಶ್ರೀ ನಾಗೇಂದ್ರ ಭಟ್ಟರು ತಿಳಿಸಿದ ಪತ್ರದಲ್ಲಿನ ಶ್ಲೋಕ ಪಾಠ ಇಂತಿದೆ.

ಅನೇನ ತವ ಪುತ್ರಸ್ಯ । ಪ್ರಸುಪ್ತಸ್ಯ ವನಾಂತರೇ ॥
ಶಿಖಾಮಾಕ್ರಮ್ಯ ಹಸ್ತೇನ ಖಡ್ಗೇನೋಪ ಹತಂ ಶಿರಃ॥

ಈ ಶ್ಲೋಕದಲ್ಲಿ ರಾಜನ ಮಗನನ್ನು ಮಂತ್ರಿಯ ಮಗನೇ ಘಾತಿಸಿದನೆಂದಿದೆ.

ದಿ. ಶ್ರೀ ಕೃಷ್ಣ ಮೇಸ್ತ್ರಿಯವರು ಹೇಳಿದ್ದ ಕಥೆಯ ಪಾಠದಲ್ಲಿ ಸಂಸ್ಕೃತ ಶ್ಲೋಕ ಅಶುದ್ಧವಾಗಿದೆ. ಅದನ್ನು ತಿದ್ದದೆ ಇಟ್ಟಿದ್ದೇನೆ.

ಸೌ। ನಗುವನ ಹಳ್ಳಿ ಪಿ. ರತ್ನ ಅವರು ಸಂಪಾದಿಸಿದ ನಮ್ಮ ಹಳ್ಳಿಯ ಕಥೆಗಳು ಗ್ರಂಥದ 'ಹಪ್ರಶಿಖ' ಎಂಬ ಕಥೆ ಇದೇ ತರದ ಕಥೆಯಾಗಿದ್ದು, ಸಂಪಾದಕಿ ಇದು ಶಿಷ್ಟಮೂಲದ್ದೆಂದು ಗುರುತಿಸಿದ್ದಾರೆ.

ನಮ್ಮ 'ಬೇತಾಳನ ಶಾಪ' ಹಾಗೂ ದಿ. ಕೃಷ್ಣ ಮೇಸ್ತ್ರಿ ಅವರು ಹೇಳಿದ್ದ 'ಅಪ್ರಶಿಖ' ಕಥೆಯ ಪಾಠ ಹಾಗೂ 'ಜಾಣರ ಕೈವಾಡ' ಎಂಬ ಕಥೆಗಳ ಭಾಷಾ ಶೈಲಿಯನ್ನು ಸುಧಾರಿಸಿ ಬರೆದುದಾಗಿದೆ.

ಉಳಿದ ಎಲ್ಲ ಕಥೆಗಳು ನಿರೂಪಕರು ಹೇಳಿದ್ದ ರೀತಿಯಲ್ಲೇ ಇವೆ. ಶ್ರೀ ಸುಬ್ಬ ಮಾಚ ಉಪ್ಪಾರ ಅವರು ಹೇಳಿದ್ದ 'ಬೇಕಾದ ಬಹುಮಾನ' ಎಂಬ ಈ

ಕಥೆಯೂ ಶ್ರೀ ಹನುಮಂತಪ್ಪಾ ಮಲ್ಲಪ್ಪಾ ಸಾವಂತರು ಹೇಳಿದ್ದ 'ಮೂರು ಒಗಟುಗಳು' ಕಥೆಯೂ ನಿರೂಪಕರು ಹೇಳಿದಂತೆಯೇ ಇವೆ.

ಭಟಕಳ ಭಾಗಕ್ಕೆ ನಾನು ಹೋಗಿ ಸಂಗ್ರಹಿಸಿದ್ದ ಒಗಟುಗಳಲ್ಲದೆ. ಅಲ್ಲಿನ ಅಂಜುಮಾನ್ ಕಾಲೇಜು ಕನ್ನಡ ಉಪನ್ಯಾಸಕರಾಗಿರುವ ಡಾ। ಸಯ್ಯದ ಜಮೀರುಲ್ಲಾ ಶರೀಫ್ ಇವರ ಸಂಗ್ರಹದ ಎಂಟು ಹತ್ತು ಒಗಟುಗಳು ಇಲ್ಲಿವೆ.

ಪರಿಶಿಷ್ಟ ೧ರಲ್ಲಿ ಬಂದ ಒಗಟು ಹಾಡಿನ ಒಗಟುಗಳ ಉತ್ತರಗಳನ್ನು ನಾನೇ ಹುಡುಕಿದ್ದು ಅಲ್ಲದೆ, ಒಂದೆರಡು ಉತ್ತರ ಶ್ರೀ ವೇ। ಅನಂತ ಭಟ್ಟರು ತಿಳಿಸಿದ್ದು ಉಂಟು.

ಒಗಟುಗಳ ಸಂಗ್ರಹಗಳನ್ನು ಪ್ರಕಟಿಸಿದ್ದ ಹಲವರಲ್ಲಿ ಡಾ. ಜೀ. ಶಂ. ಪರಮಶಿವಯ್ಯ, ಡಾ. ರಾಗೌ, ಡಾ. ಸುಧಾಕರ, ಡಾ. ಎಸ್. ಜಿ. ಇಮ್ರಾಪೂರ, ಶ್ರೀಮತಿ ಶಾಂತಿ ನಾಯಕ, ಡಾ. ಮಲ್ಲಿಕಾರ್ಜುನ ಲಠ್ಠೆ ಮುಂತಾದವರು ಈ ಕುರಿತು ವಿಶೇಷವಾಗಿ ವಿವೇಚನೆ ಮಾಡಿದ್ದಾರೆ. ಡಾ. ಎನ್. ಆರ್. ನಾಯ್ಕರ "ಉ. ಕ. ಜನಪದ ಗೀತಗಳು" ಮಹಾ ಪ್ರಬಂಧ ದಲ್ಲೂ ಈ ವಿಷಯದಲ್ಲಿ ವಿಶೇಷ ವಿವೇಚನೆ ಬಂದಿದೆ.

ಡಾ. ಎಸ್. ಜಿ. ಇಮ್ರಾಪೂರ ಅವರ ಒಗಟುಗಳ ಮೇಲಿನ ಮಹಾ ಪ್ರಬಂಧದಲ್ಲಿ ಬಂದಿರುವ ವಿಸ್ತಾರ ವಿವೇಚನೆ ವಿಶೇಷ ಉಲ್ಲೇಖನೀಯವಾಗಿದೆ.

ಆದರಿಂದ ಈ ಕುರಿತು ಹೆಚ್ಚು ಚರ್ಚೆಯನ್ನು ನಡೆಸದೆ ನನ್ನ ಸಂಕಲನದ ಕುರಿತೇ ಹೆಚ್ಚು ತಿಳಿಸಿರುತ್ತೇನೆ.

ಡಾ. ಲಠ್ಠೆಯವರ 'ಉತ್ತರ ಕರ್ನಾಟಕದ ಒಗಟುಗಳು' ಗ್ರಂಥ ೧೯೭೪ರಲ್ಲಿ ಪ್ರಕಟವಾಗಿದ್ದು, ಗ್ರಂಥ ನನ್ನ ಬಳಿ ಇದ್ದರೂ ದೊರೆಯದೆ ಇದ್ದು, ನನ್ನ ಸಂಕಲನ ಗ್ರಂಥ ಬಹು ಮಟ್ಟಿಗೆ ಅಚ್ಚಾದ ಮೇಲೆ ದೊರೆಯಿತು.

ಈ ಸ್ವಾರಸ್ಯವಾದ ಅವರ ಸಂಕಲನದ 'ಹಾಡಿನ ರೂಪದಲ್ಲಿ ಒಗಟು ಗಳು' (೭ನೇ ಭಾಗ) ಹೊಸ ಒಗಟುಗಳಿಂದಲೂ ಆಡುಮಾತುಗಳಿಂದಲೂ ಮನಸೆಳೆಯುತ್ತವೆ.

ಪೀಠಿಕೆಯ ಪ್ರಥಮ ಭಾಗದಲ್ಲಿ ತಪ್ಪು ಗ್ರಹಿಕೆಯಿಂದ ಅರೊಳ್ಳಿ ಕಾವೇರತ್ತೆ ಕೈಲಾಸವಾಸಿಯಾಗಿದ್ದರೆಂದು ಬರೆದುದಕ್ಕೆ ವಿಷಾದಿಸುತ್ತೇನೆ. ಅವರು ತೀರ ವೃದ್ಧೆಯಾದರೂ ಕತೆ ಹೇಳುವಷ್ಟು ಆರೋಗ್ಯದಿಂದ ಇರುವರೆಂದು ಅವರ ಮೊಮ್ಮಗಳು ತಿಳಿಸಿರುತ್ತಾಳೆ.

ಈ ಸಂಗ್ರಹದ ಒಗಟು ಮತ್ತು ಕಥೆಗಳನ್ನೂ ಪದ್ಯಗಳನ್ನೂ ಹೇಳಿದವರಿಗೂ ಬರೆದು ಕೊಟ್ಟವರಿಗೂ ಅಲ್ಲಲ್ಲಿ ಹೋದಾಗ ನನಗೆ ಆಶ್ರಯ ನೀಡಿದವರಿಗೂ ವಿಶೇಷ ಕೃತಜ್ಞನಾಗಿದ್ದೇನೆ.

ನಾನು ದೂರದ ಸಿದ್ದಾಪುರದಲ್ಲಿದ್ದುದರಿಂದ ಪ್ರೆಸ್‌ನವರೇ ಕರಡು ತಿದ್ದಿ ಹಲವು ತಪ್ಪುಗಳು ಅಚ್ಚಿನಲ್ಲಿ ನುಸುಳಿವೆ. ಓದುಗರು ಇವುಗಳಲ್ಲಿ ಹಲವನ್ನು ಅರಿಯಬಹುದು. ಸಾಧ್ಯವಿದ್ದಷ್ಟು ಉತ್ತಮವಾಗಿ ಅಚ್ಚು ಮಾಡಿದ ಪ್ರೆಸ್ ಕೆಲಸಗಾರರಿಗೂ, ಮಾಲಕರಾದ ಶ್ರೀ ಕೃಷ್ಣ ಭಟ್ಟರಿಗೂ ಕೃತಜ್ಞತೆಗಳು.

— ಎಲ್. ಆರ್. ಹೆಗಡೆ

ಸಂದರ್ಭ ಗ್ರಂಥಗಳು

೧) ಕರ್ನಾಟಕ ಜಾನಪದ ಕಥೆಗಳು – ರಾಗೌ; ತ, ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು–೪

೨) ಆಯ್ದ ಜನಪದ ಕಥೆಗಳು – ಡಾ. ಜಿ. ಶಂ. ಪರಮಶಿವಯ್ಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩) ದಕ್ಷಿಣ ಕರ್ನಾಟಕದ ಜನಪದ ಕಥೆಗಳು – ಡಾ. ಜಿ. ಶಂ. ಪ. ಸಾಹಿತ್ಯ ಅಕಾಡೆಮಿ ನವದೆಹಲಿ

೪) ಕನ್ನಡ ಜನಪದ ಕಥೆಗಳು – ಡಾ. ಜಿ. ಶಂ, ಪ.

೫) ಕರ್ನಾಟಕ ಜನಪದ ಕಥೆಗಳು – ಶ್ರೀ ಎಚ್. ಎಲ್. ನಾಗೇಗೌಡ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೬) ಹಸರ ಗಿಡದ ಮ್ಯಾಲ ಮೊಸರ ಚೆಲ್ಲೇದ– ಶ್ರೀ ಜಂಬುನಾಥ ಕುಜ್ಯಾಣಿ

೭) ಶಿವಗಂಗೆ ಸುತ್ತಿನ ಜನಪದ ಕಥೆಗಳು – ಡಾ. ಸುಧಾಕರ
ಮೈಸೂರು ವಿ. ವಿ., ಮೈಸೂರು
೮) ಜನಪದ ಬೆಡಗಿನ ವಚನಗಳು – ಸುಧಾಕರ, ಮೈಸೂರು ವಿ. ವಿ.
ಮೈಸೂರು
೯) ಕರ್ನಾಟಕ ಸಂಸ್ಕೃತಿ – ದೇವುಡು; ಶಾರದಾ ಪ್ರಕಟನಾಲಯ,
ಬೆಂಗಳೂರು
೧೦) ನಮ್ಮ ಒಗಟುಗಳು – ರಾಗೌ; ಉಷಾ ಸಾಹಿತ್ಯಮಾಲೆ, ಮೈಸೂರು
೧೧) ಕನ್ನಡ ಸಾವಿರದ ಒಗಟುಗಳು – ಡಾ. ಸೋಮಶೇಖರ ಇಮ್ರಾಪೂರ
೧೨) ಒಗಟುಗಳು (ಮಹಾಪ್ರಬಂಧ) – ಡಾ. ಸೋಮಶೇಖರ
ಇಮ್ರಾಪೂರ ಕ. ವಿ. ವಿ. ಧಾರವಾಡ
೧೩) ಜಾನಪದ ಕಥಾಮೃತ ಭಾಗ-೧ ಧವಳಶ್ರೀ ಪದ್ಮಶ್ರೀ ಪ್ರಕಾಶನ
ದೊಡ್ಡಬೆಲೆ
೧೪) ಜಾನಪದ ಕಥಾಮೃತ ಭಾಗ-೨
೧೫) ಕನ್ನಡ ಜಾನಪದ ಸಾಹಿತ್ಯ – ಡಾ. ಬೆಟಗೇರಿ ಕೃಷ್ಣಶರ್ಮ
ಕ. ವಿ. ವಿ. ಧಾರವಾಡ
೧೬) ನಮ್ಮ ಹಳ್ಳಿಯ ಜನಪದ ಕಥೆಗಳು – ನಗುವನಹಳ್ಳಿ ಪಿ. ರತ್ನ;
ಪಶಾಂತಿ ಪ್ರಕಾಶನ. ಮೈಸೂರು
೧೭) ಜನಪದ ಒಗಟು ಕಥೆಗಳು – ಶ್ರೀ ಕುರುವ ಬಸವರಾಜ;
ಅಂತರಂಗ ಪ್ರಕಾಶನ, ಹೊನ್ನಾಳಿ
೧೮) ಜಾಣೆ ಕನ್ನಡವ ತಿಳಿದ್ದೇಳಿ – ಪ್ರೊ. ಶಾಂತಿ ನಾಯಕ; ಜಾನಪದ
ಪ್ರಕಾಶನ, ಪ್ರಭಾತ ನಗರ, ಹೊನ್ನಾವರ
೧೯) ಉತ್ತರ ಕನ್ನಡ ಜನಪದ ಗೀತಗಳು – (ಮಹಾಪ್ರಬಂಧ)
ಡಾ. ಎನ್. ಆರ್. ನಾಯಕ; ಕ. ವಿ. ವಿ. ಧಾರವಾಡ
೨೦) ಉತ್ತರ ಕರ್ನಾಟಕದ ಒಗಟುಗಳು – ಡಾ. ಎಂ. ಎಸ್. ಲಠ್ಠೆ;
ರವೀಂಪ್ರ ಪ್ರಕ

ಜ್ಞಾನಸಾಧನ ಗ್ರಂಥಮಾಲೆಯ ಪ್ರಕಟನೆಗಳು

೧) ಹಕ್ಕಿನರಸಣ್ಣ (ಪ್ರತಿಗಳು ತೀರಿವೆ)

೨) ಜನಪದ ವೈದ್ಯ (ಪ್ರತಿಗಳು ತೀರಿವೆ)

೩) ಸಿದ್ದಿಯರ ಕಥೆಗಳು

೪) ಕರಾವಳಿಯ ಕಥೆಗಳು (ಪ್ರತಿ ತೀರಿವೆ)

೫) ಜನಪದ ಭಾರತ ಕಥೆಗಳು

೬) ಕುಮರಿ ಮರಾಟಿಗರ ಕಥೆಗಳು

೭) ಕುಮಾರ ವ್ಯಾಸ

೮) ಹೆಂಗಸರ ಗೀತಗಳು (ಪ್ರತಿಗಳು ತೀರಿವೆ)

೯) ಮಂಗಲ ಗೀತಗಳು ಮತ್ತು ಪೂಜಾ ಗೀತಗಳು